REGISTERED NO. M. 1393.

ಕಂಠೀರವ

ಅರ್ಧಾಣೆ

ESTD. 1919 ಸ್ಥಾಪನೆ.

ವಾರಕ್ಕೆರಡಾವರ್ತಿ ಪ್ರಕಟವಾಗುವ ಶ್ರೇಷ್ಠವರ್ಗದ ಕನ್ನಡ ವಾರ್ತಾಪತ್ರಿಕೆ.

KANTEERAVA, MANGALORE

The only Nationalist Kanarese BI-WEEKLY with the largest circulation.

ಸಂಪುಟ ೧೪ VOL. XVIII | ಮಂಗಳೂರು, ೧೯೩೬ನೇ ಇಸವಿ ಜುಲಾಯಿ ತಾರೀಕು ೧೭ನೇ ಶುಕ್ರವಾರ MANGALORE, FRIDAY, JULY 17, 1936 | ಸಂಚಿಕೆ ೩೨. NO. 32.

BANK with the

UDIPI BANK Ltd.

(KALSANK, ═══ UDIPI ═══ S. KANARA)

and thereby **DEFEND** your own interest.

ALL KINDS OF BANKING BUSINESS TRANSACTED.

ESTD: 1925

ESTD:—1906.

THE CANARA BANKING CORPORATION, UDIPI, LTD.

THE FIRST INDIGENOUS & COSMOPOLITAN BANK OF S. K. DISTRICT.

Capital: Authorised, Issued and Subscribed Rs. 3,50,000-0-0
Paid up Rs. 2,88,840-0-0
Reserve and other funds Rs. 3,72,337-0-0
Deposits Rs. 29,50,717-0-0
16—6—1936.

Fixed deposit rates up to 5% p. a.

ಪೊಪ್ಯುಲರ್

- ಬ್ರಿಟಿಷ್ ಕರ್ನಾಟಕದ ಪ್ರಥಮ ವಿಮಾಸಂಸ್ಥೆ—ದಕ್ಷಿಣ ಕನ್ನಡದ ಆದರ್ಶ ವಿಮಾಸಂಸ್ಥೆ.
- ಪ್ರಥಮ ವರ್ಷದಿಂದಲೇ ವಿಮಾನಿಧಿ ಸ್ಥಾಪಿತವಾಗಿದ್ದು ಇದು ವರ್ಷಂಪ್ರತಿ ಬೆಳೆಯುತ್ತಾ ಇದೆ.
- ಪ್ರಥಮ ಮೌಲ್ಯವೇತನದಲ್ಲಿಯೇ ಬೋನಸ್—ಅಖಿಲ ಕರ್ನಾಟಕದಲ್ಲಿ ಪ್ರಥಮ ಬಾರಿಯೇ ಬೋನಸನ್ನು ಹಂಚಿದ ಸಂಸ್ಥೆಯೆಂದರೆ ಇದೊಂದೇ.

ವಿಮೆಯನ್ನು ಮಾಡಲೂ, ಮಾಡಿಸಲೂ ಇದೀಗ ನಮ್ಮ ಸಂಸ್ಥೆ.
ಸುಲಭವಾದ ವಿಮಾಕಂತುಗಳು—ಸರ್ವರಿಗೂ ಅನುಕೂಲವಾದ ಅತ್ಯಾಧುನಿಕ ಶಾಸ್ತ್ರೀಯ ವಿಮಾಪದ್ಧತಿಗಳು—ಅಡಳಿತೆಯು ಸುವ್ಯವಸ್ಥಿತ—ಭದ್ರತೆಯು ವಿಶ್ವಾಸಾರ್ಹ.

ಯೋಗ್ಯ ವಿಜಂಟೆರುಗಳಿಗೆ ಧಾರಾಳ ಕಮಿಶನ್.

ಮಾಹಿತಿಪತ್ರ ಇತ್ಯಾದಿ ಹೆಚ್ಚಿನ ವಿವರಗಳಿಗೆ ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆಯಿರಿ.

Asiatic Government Security
LIFE ASSURANCE CO., LTD.,

Established 1913. **Life Branch 1922.**

The Pioneer Insurance Institution in Mysore State transacting business throughout India. Varied plans of Assurances for both male and female lives at competitive rates. Attractive Policies with liberal privileges including Disability Benefits. Substantial Bonus. Profitable Agency Connections.

For Prospectus and Agency terms apply to:

Head Office: "Asiatic Buildings" Bangalore City,

OR

to any of the Company's undernoted Branches:

Madras Branch: 187, Mount Road.
Bombay Branch: Hornby Road, Fort.
Calcutta Branch: 15, Clive Street.

V, RANGASWAMI, B. A., B. L.,
General Manager.

Complete Service

We are here to serve your banking requirements, and to place at your command the practical cooperation of our resources and banking facilities. Whether your needs are local, provincial or world-wide this bank through its experience, connections and organisations is eminently qualified to serve you.

THE PALAI CENTRAL BANK, LIMITED,

(INCORPORATED IN TRAVANCORE.)

Bunder Road, **MANGALORE.**

London Agents: LLOYDS BANK, LIMITED.
New York ,, : NATIONAL CITY BANK OF NEW YORK.

HYDROCELE

CURE FOR HYDROCELE TUMOUR Hernia, Varicocele, Elephantiasis and all swelling diseases. Guaranteed to cure radically by external application. Free from injurious drugs. Highly recommended by medical authorities. Price complete course 8 oz. Rs. 10, 2 oz. Rs. 3. Postage extra.

Send stamp for reply.

Alliance Laboratory P. O.,
Amherst Street, CALCUTTA.
8, 26-6.

ಮೋಸಹೋಗಬೇಡಿ!

ಶ್ರೀ ಅಂಬಾಳ್ ಮದರಾಸು ನಶ್ಯವು ಅನೇಕ ವರ್ಷಗಳಿಂದ ಅಸಮಾನವಾದ ಮತ್ತು ಶಾಶ್ವತವಾದ ಕೀರ್ತಿಯನ್ನು ಹೊಂದಿ ಜಗತ್ಪ್ರಸಿದ್ಧವಾಗಿರುವುದನ್ನು ಅರಿತು ಕೆಲವರು ಹಣಆಸೆಯುಳ್ಳವರಾಗಿ ಕರಿದು ಹೊಗೆಸೊಪ್ಪನ್ನು ತರಿಸಿ ಅವುಗಳಲ್ಲಿರುವ ಮಣ್ಣು ದುಂಬು, ಮಸಿಗಳನ್ನು ತೆಗೆಯದೆ ಬೆರಕೆ ತುಪ್ಪವನ್ನೆ ಸೇರಿಸಿ ನಶ್ಯವನ್ನು ತಯಾರಿಸಿ ವ್ಯಾಪಾರಸ್ಥರಲ್ಲಿ ಹೋಗಿ ಕಡಿಮೆ ಬೆಲೆಗೆ ಸಾಲವಾಗಿ ಕೊಟ್ಟು ಬರುವರು. ಕೆಲವು ವ್ಯಾಪಾರಸ್ಥರು ಸರಸವಾಗಿಯೂ ಸಾಲವಾಗಿಯೂ ಸಿಗುವುದರಿಂದ ಮೇಲ್ಕಂಡ ಹಲ್ಕಾ ನಶ್ಯವನ್ನು ತರಿಸಿ ಇದೇ ಹಸನಾದ ಮದರಾಸು ನಶ್ಯವೆಂದು ಬಿಕರಿ ಮಾಡಿ ಬರುತ್ತಿರುವರು. ಸಹೋದರರೇ! ಮೋಸಹೋಗಬೇಡಿ. ಇಂಥಾ ಪೋಲಿ ನಶ್ಯವನ್ನು ಉಪಯೋಗಿಸಿದರೆ ಮೇಲ್ಕಂಡ ನಶ್ಯದಲ್ಲಿರುವ ಮಣ್ಣು, ಮಸಿ ಮೊದಲಾದವುಗಳು ಮೂಗಿನ ಮೂಲಕ ಮೆದುಳಿಗೆ ಹೋಗಿ ಮೆದುಳನ್ನು ಬಲೆಯೋಪಾದಿಯಲ್ಲಿ ಮುಚ್ಚಿಕೊಂಡು ಅಜ್ಞಾನವನ್ನುಂಟುಮಾಡುವುದು, ನಾಸಿಕದ್ವಾರವನ್ನು ಬಂಧಿಸುವುದು. ಮೂಗಿನಲ್ಲಿ ವ್ರಣವನ್ನುಂಟುಮಾಡುವುದಲ್ಲದೆ ಪಂಚೇಂದ್ರಿಯಗಳ ಶಕ್ತಿಯನ್ನು ಕುಂದಿಸುವದು. ಆದುದರಿಂದ, ಅಪ್ಪಠೇ, ಅನೇಕ ವರ್ಷಗಳಿಂದ ಅನೇಕ ಡಾಕ್ಟರುಗಳಿಂದಲೂ, ಜಡ್ಜಿಗಳಿಂದಲೂ, ಇನ್ನೂ ಅನೇಕ ಶ್ರೀಮಂತರಿಂದಲೂ ಶ್ಲಾಘಿಸಲ್ಪಟ್ಟಿರುವ ಶ್ರೀ ಅಂಬಾಳ್ ಅಂಡ್ ಕಂಪೆನಿ, ಪೋಸ್ಟ್ ಬಾಕ್ಸ್ ನಂ. ೩, ಮದರಾಸು, ಇವರ ಮದರಾಸು ನಶ್ಯ, ಸುಗಂಧ ನಶ್ಯವನ್ನೇ ಉಪಯೋಗಿಸಿ ಆನಂದಪಡಿರಿ. ಎಲ್ಲಾ ವ್ಯಾಪಾರಸ್ಥರಲ್ಲಿಯೂ ಸಿಗುವುದು.

For your Diamonds enquire at
Sowcar
SRINIVAS RANGA PAI,
Sowcar Mahal,
Car Street,
MANGALORE.

ನೋಟೀಸು.

ದಕ್ಷಿಣ ಕನ್ನಡ ಜಿಲ್ಲಾ ಡಿಸ್ಟ್ರಿಕ್ಟ ಕೋರ್ಟಿನಲ್ಲಿ

O. P. No. 76/36.

In the matter of the debts of the deceased unnamed male child of the late Balebail Anantacharya.

ಮಿಸೆಸ್ ಲಕ್ಷ್ಮೀಬಾಯಿ ಆಚಾರ್ಯ, ಬಿ. ಅನಂತಾಚಾರ್ಯರ ವಿಧವೆ, ಬೆಂಗಳೂರು ಕೆಂಟೋನ್‌ಮೆಂಟ್ ಗವ್ಯಾರೋಡ ನಂಬ್ರ 7ನೇ ಮನೆಯಲ್ಲಿ ಇರುವವಳು } ಅರ್ಜಿದಾರಳು

ಬಿ. ರಾಮಣ್ಣಾರ್ಯ ಕೂಡಾ 5 ಜನರು— **ರೆಸ್ಪೊಂಡೆಂಟರು.**

ಸದರಿ ಅರ್ಜಿದಾರಳ ಗಂಡ ತಾರೀಕು 16-11-1935ರಲ್ಲು ಮೃತಪಟ್ಟಿರುವ ಬಿ. ಅನಂತಾಚಾರ್ಯರಿಗೆ ವ ತಾ. 5-4-1936ರಲ್ಲು ಮೃತಪಟ್ಟಿರುವ ಹೆಸರು ಇಡದೆ ಇರುವ ಅವರ ಮ್ಯಾನರ ಗಂಡು ಮಗುವಿಗೆ ಹೊರಗಿನಿಂದ ಬರತಕ್ಕ ಸಾಲಗಳನ್ನು ವಸೂಲಿ ಮಾಡುವ ಸಂಬಂಧ ಸಕ್ಸೇಶನ್ ಸರ್ಟಿಫಿಕೇಟು ಅಪೇಕ್ಷಿಸಿ ಅರ್ಜಿದಾರಳು ದಾಕಲು ಮಾಡಿರುವ ಮೇಲ್ಕಂಡ ಸದರಿ ಅರ್ಜಿಯ ತನ್ನಿಯು ತಾ. 11-8-1936ಕ್ಕೆ ನಿಶ್ಚಯಿಸಿರುವುದರಿಂದ ಆಕ್ಷೇಪವುಳ್ಳವರು ತಮ್ಮ ಆಕ್ಷೇಪಗಳನ್ನು ಸದರಿ ವ್ಯಾದೆಗೆ ಜಾಹೀರು ಮಾಡಿಕೊಳ್ಳತಕ್ಕದ್ದು.

ಮಂಗಳೂರು, ತಾ. 9—7—'36. }

M. Janardan Malya,
Vakil for Petr.

ಡಿ. ಕಲೆಕ್ಟರರ ಅಳಿಯ.

(ii)

ರಾಯರ ಅಳಿಯಂದಿರು ಬೊಂಬಯಿಗೆ ಹೊರಟರು. ಕಮಲೂ, ತಾಯಿಯನ್ನು ಕಾಡಿ ಪೀಡಿಸಿ ಕೆಲವು ನೂರು ರುಪಾಯಿಗಳನ್ನು ಗಂಡನಿಗೆ ತೆಗಿಸಿ ಕೊಟ್ಟಿದ್ದಳು. ಅದು ಅವನ ಸ್ವತಂತ್ರ ಉದ್ಯೋಗಕ್ಕೊಂದು ಬಂಡವಾಳವಂತೆ—ಬೊಂಬಯಿಯಲ್ಲಿ.

ಕಮಲೂ ತಾಯಿ, ಈ ಬಾರಿ ಕೊಂಚಕ್ಕೆ ಒಪ್ಪಲಿಲ್ಲ—ಹಣ ಕೊಡಲಿಕ್ಕೆ. ಈ ಬಾರಿ, ಕಮಲೂ ಹಣ ಕೇಳಿದಾಗ, ಅಳಿಯನಿಗಾಗಿ ಖರ್ಚಾದ ಹಣದ ಲೆಕ್ಕಾಚಾರವೆಲ್ಲಾ ಆಗಿಹೋಯಿತು. ಆತನ ಮದುವೆ, ವಿದ್ಯಾಭ್ಯಾಸ, ಆತನ ಸಂಸಾರಪೋಷಣೆ ಮೊದಲಾದ ಲೆಕ್ಕಾಚಾರಗಳೆಲ್ಲ 'ಚುಕ್ತಾ' ಆಗುವಾಗ, ಒಬ್ಬ ಅಳಿಯನೆಂದರೆ, ೧೦ ಸಾವಿರಕ್ಕೂ ಮಿಕ್ಕಿದ ಒಂದು ಗಂಟು, ನೀರಿನಲ್ಲಿ ಹಾಕಿದ ಗಂಟೆಂದು ಕಮಲೂಗೆ ತಿಳಿಯಿತು. ಕಮಲೂ ತಾಯಿ ತನ್ನ ಗಂಡನ ಸಂಪಾದನೆಯ ಒಂದು ಕಾಸನ್ನೂ ಇನ್ನು ಅಳಿಯನಿಗೆ ಕೊಡಲಾರೆನೆಂದು ಕಮಲೂಗೆ ತಿಳಿಸಿದಳು. ಈಕೆದನ-ಎಮ್ಮೆಗಳನ್ನು ಕಟ್ಟಿ, ಕಾಫಿ ಹೊಟೆಲಿಗೆ ಹಾಲು-ತುಪ್ಪವನ್ನು ಕದ್ದು ಮುಚ್ಚಿ ಮಾರಿಸಿ, ಕೂಡಿಟ್ಟ ಸ್ವಲ್ಪ ಹಣ ಈಕೆಯ ಬಳಿಯಲ್ಲಿ ಗುಟ್ಟಿನಲ್ಲಿತ್ತು. ಅದನ್ನೇ ಈ ಸಲ ಅಳಿಯನಿಗೆ ಕೊಟ್ಟಳು. ಆದರೆ ಈ ಹಣವನ್ನು ಬೇರೆಯವರಿಂದ ಕಡವಾಗಿ ತರಿಸಿರುವೆನೆಂದೂ, ಅದನ್ನು ಅಳಿಯನು ಬೇಗನೇ ಬಡ್ಡಿ ಸಹಿತ ಹಿಂದಿರುಗಿಸಬೇಕೆಂದೂ ಕಮಲೂಗೆ ಹೇಳಿ ಆ ಮಾತನ್ನು ಅಳಿಯನಿಗೆ ಹೇಳಿಸಿ, ಈ ಹಣ 'ಎಡ್ವಾನ್ಸ್' ಮಾಡಿದ್ದಳು.

'ರಾಯರ ಅಳಿಯನಿಗೆ ಬೊಂಬಯಿಯಲ್ಲಿ ತಿಂಗಳಿಗೆ ೨೦೦ ರುಪಾಯಿಗಳ ಕೆಲಸವಾಗಿದೆ' ಎಂಬ ಪುಕಾರು ಊರೆಲ್ಲಾ ತುಂಬಿತು. ರಾಯರ ಹೆಂಡತಿಯೇ ಈ ಪುಕಾರೆ ಹುಟ್ಟಿಸಿದ್ದರು.

ಹಾಗೂ, ಹೀಗೂ ರಾಯರ ಅಳಿಯ ಬೊಂಬಯಿ ಸೇರಿದರು. ಒಂದು ಹೊಟೆಲಿಗೆ ಹೋಗಿ ಇಳಿದುಕೊಂಡರು. ಅಲ್ಲಿ ಅವರಿಗೆ ಕೆಲವರ ಪರಿಚಯವಾಯಿತು. ಅವರಲ್ಲಿ ರಾಮು ಚಂದ್ರರಾವ್ ಎಂಬವರೂ ಒಬ್ಬರು. ಅವರೊಡನೆ, ರಾಯರ ಅಳಿಯ ತಾನು ಬೊಂಬಾಯಿಗೆ ಬಂದ ಕಾರ್ಯಕಾರಣವನ್ನು ಒಂದು ದಿನ ವಿವರಿಸಿದರು. ಅವರ ಸೂಚನೆಗಳನ್ನು ಕೇಳಿದರು.

'ಅಷ್ಟೇ ತಾನೇ? ಅದಕ್ಕೇನು ಕಷ್ಟ? ಸಾರ್! ಸುಲಭವಾದ ಮಾರ್ಗ ನಾನು ಹೇಳಿಕೊಡುತ್ತೇನೆ. ನನ್ನನ್ನು ನೋಡಿ! ಸಾರ್, ಸ್ಕೂಲ್ ಫೈನಲ್ ಕೂಡಾ ಆಗಿಲ್ಲ. ಆದರೂ ತಿಂಗಳಿಗೆ ಸೆರೆ ಸೆರೆ ಸಂಪಾದಿಸುತ್ತಿದ್ದೇನೆ! ೩೦೦ ಆದರೂ ಆಯ್ತು; ೪೦೦ ಆದರೂ ಆಯ್ತು, ಸಾರ್! ಸ್ವತಂತ್ರ ಉದ್ಯೋಗ ಮಾಡುವವನಿಗೆ nothing like insurance! (ಇನ್ಶುರೆನ್ಸ್ ಕೆಲಸಕ್ಕೆ ಸರಿಯಾದ್ದು ಯಾವುದೂ ಇಲ್ಲ) ಒಂದು ವರ್ಷದ ಸಂಪಾದನೆ ಒಂದು ತಿಂಗಳಲ್ಲಿ ಹೊಡೆದುಹಾಕಬಹುದು. ಸ್ವಲ್ಪ knack ಬೇಕು, ಅಷ್ಟೆ.'

'ತಾವು ಯಾವ ಕಂಪೆನಿ ಏಜೆಂಟರು?'

'ನಾನು ಸಾರ್, ಸೇಟನ್ರ್ ಕಂಪೆನಿ; ಬಹಳ ಒಳ್ಳೇ ಕಂಪೆನಿ. ಬಹಳ sound, substantial. ಧಾರಾಳ ಕವಿಶನ್ ಇದೆ. ಕಂಪೆನಿಯ ನಿಬಂಧನೆಗಳು ಕೂಡ ಬಹಳ ಉದಾರವಾಗಿವೆ, ಸಾರ್!'

'ನಾನೂ ಆ ಕಂಪೆನಿ ಏಜೆಂಟನಾಗಿ ಸೇರಿಕೊಂಡರೆ ಹೇಗೆ? ಆದೀತೇ? ನನಗೆ ಈ ಲ್ಯಾನಿನಲ್ಲಿ ಅನುಭವವೇನೂ ಇಲ್ಲವಲ್ಲ!'

'ತಾವೇನೂ ಭಯಪಡಬೇಡ್ರಿ. ಸಾರ್! That is nothing! ನಾನಿದ್ದೇನೆ ತಮ್ಮ ಸಹಾಯಕ್ಕೆ. ಆದರೆ ಏಕಾಏಕಿ ಕಂಪೆನಿಯವರು ಹೊಸಬರಾದ ತಮಗೆ ಏಜನ್ಸಿ ಕೊಡಲಾರರು. ಒಂದು ಕೆಲಸ ಮಾಡಿ; ಸಾರ್! ತಾವು ಅದೇ ಕಂಪೆನಿಯಲ್ಲಿ ೧೦ ಸಾವಿರ ರುಪಾಯಿಗಳಿಗೆ ತಮ್ಮ ಹೆಸರಲ್ಲಿ ಇನ್ಶೂರ್ ಮಾಡಿಸಿ ಬಿಡಿ. ತಮ್ಮ ಫ್ಯಾಮಿಲಿಗೂ ಒಂದು ಅನುಕೂಲವಾಯ್ತು. ಆ ಮೇಲೆ, ನಾನೂ ಒಂದೆರಡು ಕೇಸುಗಳನ್ನು ತಮಗೆ ಒದಗಿಸಿ ಕೊಡುತ್ತೇನೆ; ಸಾರ್. ಅವರನ್ನೂ ೫-೫ ಸಾವಿರಕ್ಕೆ ಇನ್ಶೂರ್ ಮಾಡಿಸೋಣ. ಅಂದರೆ ಆಗ ಕಂಪೆನಿಯವರಿಗೆ ತಮ್ಮ ವಿಷಯದಲ್ಲಿ ಅಭಿಮಾನವೂ ವಿಶ್ವಾಸವೂ ಹುಟ್ಟಿ ತಮಗೆ ಏಜನ್ಸಿ ದೊರಕಿಸಿಕೊಳ್ಳಲಿಕ್ಕೆ ಅನುಕೂಲವಾಗುತ್ತದೆ.'

'ಆಗಲಿ; ತಾವು ಹೇಳಿದಂತೆ ಮಾಡೋಣ. ನನಗೆ ಹೇಗಾದರೆ ತಾನೇ ಏನು? ಒಂದು ಸ್ವತಂತ್ರ ಉದ್ಯೋಗದಿಂದ ಸಂಪಾದನೆಯಾದರೆ ಸರಿ. ಗವರ್ನ್‌ಮೆಂಟ್ ಕೆಲಸಕ್ಕೆ ಹೋಗುವುದಾಗಿದ್ದರೆ ಎಂದೋ ಹೋಗಬಹುದಿತ್ತು. ನಮ್ಮ Father-in-law ಡಿಪ್ಯುಟಿ ಕಲೆಕ್ಟರು. ತಿಂಗಳಿಗೆ ೧೦೦ ರುಪಾಯಿ ಕೆಲಸ ಮಾಡಿಸಿ ಕೊಡುತ್ತಿದ್ದರು. ನಾನು ಬೇಡವೆಂತ reject ಮಾಡಿಬಿಟ್ಟೆ.'

'ಒಳ್ಳೆಯ ಕೆಲಸ ಮಾಡಿದಿರಿ. ಸಾರ್! ಇಲ್ಲಿ ನೋಡಿ; ಇದು ನಮ್ಮ ಕಂಪೆನಿ ಪ್ರಾಸ್‌ಪೆಕ್ಟಸ್ಸು. ಪ್ರೀಮಿಯಮ್ ಬಹಳ ಸುಲಭವಾಗಿದೆ. ಇಷ್ಟು ಸುಲಭ ಪ್ರೀಮಿಯಮ್, ಇಷ್ಟು ಬೋನಸು ಇನ್ನು ಯಾವ ಕಂಪೆನಿಯಲ್ಲೂ ಇಲ್ಲ. I bet, I challenge. ತಮ್ಮ ವಯಸ್ಸು?'

'೨೭.'

'ಬಹಳ ಚಿಕ್ಕ ವಯಸ್ಸು; ಪ್ರೀಮಿಯಮ್ ಕೂಡಾ ಸ್ವಲ್ಪವೇ. ವರ್ಷಕ್ಕೆ ಸುಮಾರು ೨೫೦ ರೂಪಾಯಿಗಳಷ್ಟೇ. ತಮ್ಮಲ್ಲಿ amount (ಹಣ) ಹಾಜರಿದೆ ಎಂತ ತೋರುತ್ತದೆ. Why not you insure tomorrow morning itself? (ನಾಳೆ ಬೆಳಿಗ್ಗೆಯೇ ಏತಕ್ಕೆ ಇನ್ಶೂರ್ ಮಾಡಬಾರದು?) ಆ ಮೇಲೆ ಏನಾದರೂ ಭಯವಿಲ್ಲ!'

'Alright—provided you get me an Agency (ನೀವು ನನಗೆ ಏಜೆನ್ಸಿ ತೆಗಿಸಿಕೊಡುವ ಷರತ್ತಿನ ಮೇಲೆ).'

'I promise, Sir (ನಾನು ವಾಗ್ದಾನ ಮಾಡುತ್ತೇನೆ). ಆದರೆ ನಾನು ನಿಮಗೆ ಒದಗಿಸಿ ಕೊಡುವ ಆ ಎರಡು ಇನ್ಶೂರ್ ಕೇಸುಗಳಿಗೆ ಮಾತ್ರ ನೀವೇ premium (ಕಂತಿನ ಹಣ) ಕೈಯಿಂದ ಕೊಡಬೇಕಾದೀತು. ಕಾರಣ, ಅವರ ಕೈಯಲ್ಲಿ ಪ್ರಕೃತ ಹಣವಿಲ್ಲ. ಆ ಮೇಲೆ ಅವರು ತಮಗೆ ಹಣ ಕೊಡುತ್ತಾರೆ. ನಾವು ಏಜಂಟರು ಹೀಗೆ ಸಮಯ ಬಿದ್ದಾಗ, ಪಾರ್ಟಿಗಳಿಗೆ ಹಣ ಎಡ್ವಾನ್ಸ್ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಬಿಸಿನೆಸ್ ಆಗುವುದಿಲ್ಲ, ಸಾರ್, ಅದರಲ್ಲಿಯೂ ತಾವು beginner (ಆರಂಭಿಸುವವರು). ಈ ರೀತಿ ಎಡ್ವಾನ್ಸ್ ಮಾಡದೆ ಸದ್ಯ ಕೇಸುಗಳೇ ಸಿಕ್ಕಲಾರವು. ಎಷ್ಟು ಅಂತಿರಾ? ಸುಮಾರು ೧೫೦ ರೂಪಾಯಿಗಳಿದ್ದರೆ ಸಾಕು. ತಾವು ಡಿ॥ ಕಲೆಕ್ಟರರ ಅಳಿಯ; ತಮಗದು ದೊಡ್ಡ ಮಾತೇನೂ ಅಲ್ಲ.'

'ಒಳ್ಳೆದಿರಲಿ; ನಾನೀಗ ಇಷ್ಟು ಹಣ ಎಡ್ವಾನ್ಸ್ ಮಾಡಿದ್ದಕ್ಕೆ ನನಗೆ ಸಿಕ್ಕತಕ್ಕದ್ದೇನು?'

'You get commission (ನಿಮಗೆ ಕವಿಶನ್ ಸಿಕ್ಕುತ್ತದೆ). ಆಮೇಲೆ ನೀವು ಸ್ವತಂತ್ರವಾಗಿ ಒಂದಿಷ್ಟು business ಮಾಡಿದಿರಿ ಎಂದರೆ ಟ್ರಾವಲಿಂಗ್ ಎಲೊವೆನ್ಸ್, ಭತ್ತೆ ಅದೆಲ್ಲ ಸಿಕ್ಕುತ್ತದೆ. ಏನೆಂದು ತಿಳಿದುಕೊಂಡಿರಿ? ಸಾರ್! ಇನ್ಶೂರ್ ಏಜೆಂಟ್ ಅಂದರೆ ಅವನೊಬ್ಬ ರಾಜಾ ಸಾಹೇಬ್—ಬಿಸ್‌ನೆಸಿನಲ್ಲಿ ಸ್ವಲ್ಪ Knack ಮಾತ್ರ ಬೇಕು. ತಾವು ಬೀ. ಏ. ಅಲ್ಲದೆ ಡೆಪ್ಯುಟಿ ಕಲೆಕ್ಟರರ ಅಳಿಯ—ತಮ್ಮಂಥವರಿಗೆ Knack ಇಲ್ಲಾ ಅಂದರೆ ಯಾರಾದರೂ ನಗಲಾರರೇ?'

'ಆಗಲಿ; ನಾಳೆ ಬೆಳಿಗ್ಗೆ ನೋಡೋಣ.'

ರಾಯರ ಅಳಿಯನಿಗೆ ಆ ರಾತ್ರಿ ಎಲ್ಲ ನಿದ್ರೆ ಹತ್ತಲಿಲ್ಲ. ಅಂತೂ ಒಂದು ಸ್ವತಂತ್ರ ಉದ್ಯೋಗ ಸಿಕ್ಕಿತಲ್ಲ ಎಂದು ವಿಪರೀತ ಸಂತೋಷ. ಇನ್ನೇನು, ಮುಂದೆ ತಿಂಗಳಿಗೆ ೩೦೦—೪೦೦ ರುಪಾಯಿ ಕವಿಶನ್ ಸಿಕ್ಕುವಾಗ, ಈಗ ಒಂದು ಮುನ್ನೂರು ಐನತ್ತು ರುಪಾಯಿ ಬಂಡವಾಳ ಹಾಕಿದರೇನು? ನಷ್ಟವೇ ಅದು?

ಮರುದಿನ ರಾಮಚಂದ್ರರಾಯರು ರಾಯರ ಅಳಿಯನ ಕೊಟಡಿಗೆ ಬಂದರು. ಜತೆಯಲ್ಲಿ ಇಬ್ಬರು ಆಸಾಮಿಗಳು—ಇನ್ಶೂರ್ ಕೇಸುಗಳು. 'ಹೊರಡಿ, ಸಾರ್, ನಮ್ಮಾಫೀಸಿಗೆ' ಅಂದರು. ಎಲ್ಲರೂ ಆಫೀಸಿಗೆ ಹೊರಟರು.

ಆಫೀಸಿನಲ್ಲಿ ಸೆಕ್ರೆಟರಿಗಳು ಇದ್ದರು. ರಾಮಚಂದ್ರರಾಯರು ರಾಯರ ಅಳಿಯನ ಪರಿಚಯ ಮಾಡಿಸುತ್ತ, ಇವರು 'ಗ್ರಾಜುವೇಟ್; ನಮ್ಮ ಡಿಪ್ಯುಟಿ ಕಲೆಕ್ಟರರ ಅಳಿಯಂದಿರು.' ಎಂದರು. ಅವರ ಏಜನ್ಸಿ ವಿಚಾರ ಮಾತಾಡಿದರು.

'Very glad! (ಬಹಳ ಸಂತೋಷ) ಏಜನ್ಸಿ ಕೊಡೋಣ, ಸಾರ್. ನಿಮ್ಮೂರಲ್ಲಿ ನಮ್ಮ ಏಜನ್ಸಿ ಇಲ್ಲ. ಅಲ್ಲೇ, ತಾವು ಬಿಸ್‌ನೆಸ್ ಮಾಡಿದರೂ ಆಗಬಹುದು' ಎಂದು ಸೆಕ್ರೆಟರಿಗಳು ಅಂದರು.

ಡಾಕ್ಟರರನ್ನು ಕರೆದು ೫ ಕೇಸುಗಳ ಪರೀಕ್ಷೆಯಾಯಿತು. ಪ್ರೀಮಿಯಮ್ಮಿನ ವಾರ್ಷಿಕ ಕಂತನ್ನು ರಾಯರ ಅಳಿಯ ಕಟ್ಟಿದರು. ಆಫೀಸಿನ ಕಡೆಯಿಂದ ರಾಯರ ಅಳಿಯನಿಗೂ, ಇತರರಿಗೂ 'ಟೀ' ಸತ್ಕಾರವಾಯಿತು.

೮ ದಿನಗಳಾಯ್ತು. ರಾಮಚಂದ್ರರಾಯ ಕಾಣೆ. ಊರಿನಲ್ಲಿ ತಂದೆಗೆ ಕಾಯಿಲೆ ಎಂದು ತಂತಿ ಬಂದಿರುವುದಾಗಿ ಹೇಳಿ ಹೋದ ಆಸಾಮಿ ಪತ್ತೆ ಇಲ್ಲ. ೧೫ ದಿವಸ ಕಳೆಯಿತು. ರಾಮು ಚಂದ್ರರಾಯರ ಎಡ್ರೆಸ್ ಬೇಕೆಂದು ರಾಯರ ಅಳಿಯ ಇನ್ನೂರು ಆಫೀಸಿಗೆ ಹೋದರು.

ಸೆಕ್ರೆಟರಿ—'Come on, sir, ಏನಾದರೂ ನಿಮ್ಮ ಕೇಸ್ ಇದೆಯೇ?'

ಅಳಿಯ:-'ಆ ದಿನ ಎರಡು ಕೇಸು ಕೊಟ್ಟೆನಲ್ಲ?'

'Sorry, ಅವು ನಿಮ್ಮವಲ್ಲ; ರಾಮಚಂದ್ರರಾಯರದು.'

'ಅವರ ಪ್ರೀಮಿಯಮ್ಮಿಗಾಗಿ ನಾನು ಎಡ್ವಾನ್ಸ್ ಮಾಡಿದ್ದೆ.'

'Sorry, ಆ ಸಮಾಚಾರ ನನಗೆ ಗೊತ್ತಿಲ್ಲ. ಕವಿಶನ್ ಆ ಬಾಬತು ರಾಮಚಂದ್ರರಾಯರಿಗೇ ಸಂದಿದೆ.'

'ಹಾಗೇ? ಅವರು ಮೋಸಮಾಡಿದರೇ? ನನ್ನನ್ನು ಬೇರೆ ಇನ್ನೂರು ಮಾಡಿಸಿದರು; ಬೇರೆ ಇಬ್ಬರಿಗೂ ನನ್ನ ಕೈಯಿಂದ ದುಡ್ಡು ಕೊಡಿಸಿದರು. ಈಗ ಇನ್ನೇನು? ರಾಯರು ಚಕ್ಕರ್ ಕೊಟ್ಟರೇ? ಅವರ ವಿಳಾಸವಾದರೂ ಏನು?'

'Sorry, ಗೊತ್ತಿಲ್ಲ ಸಾರ್. ಅವರು ನಮ್ಮ ಕಂಪೆನಿ ಏಜನ್ಸಿ ಬಿಟ್ಟು ೧ ವಾರವಾಯಿತು. Sorry, ಅವರ ಏಜೆನ್ಸಿ ಕ್ಯಾನ್ಸಲ್ ಮಾಡಿದ್ದೇವೆ. ಸಾರ್.'

ರಾಯರ ಅಳಿಯ-'ನಿಮ್ಮ ಸಾರ್ರಿ ಹಾಳಾಗಲಿ! ರೆಗ್ಯುಲರ್ ಹಂಬಗ್ಸ್, ಕಟ್‌ತ್ರೋಟ್ಸ್!' ಎಂದು ಗೊಣಗುತ್ತ ಹಿಂದಿರುಗಿದರು.

'ಮಿಸ್ಟರ್, ನೀವು ಏಜನ್ಸಿ ತೆಗೆದುಕೊಳ್ಳುವುದಾದರೆ ಈಗಲೇ ಕೊಡೋಣ. Liberal Terms! (ಉದಾರವಾದ ಶರ್ತಗಳು) ತಾವು ಡಿ॥ ಕಲೆಕ್ಟರರ ಅಳಿಯ. ಆದ್ದರಿಂದ ತಮಗೆ ತಮ್ಮ ಪ್ರಾಂತದಲ್ಲಿ ಕೇಸುಗಳಿಗೆ ಕಡಿಮೆಯಾಗದು. Don't lose this opportunity!' ಎಂದರು ಸೆಕ್ರೆಟರಿಗಳು..

ರಾಯರ ಅಳಿಯ ಹಿಂದಿರುಗಿ ನೋಡುತ್ತಾ '೩೫೦ ರುಪಾಯಿ ತೆತ್ತದ್ದು ಯಾರು ಕೊಡುವವರು? ನಿಮ್ಮಪ್ಪನೆ?' ಎಂದು ಗೊಣಗಿ ಮುಹಡಿಯಿಂದ ಕೆಳಗಿಳಿದರು.

'Mister! mister! nothing like insurance! And our Company is the best. It will suit, it will pay, it will benefit the son-in-law of a Dy. Collector to become our Agent.....'

(ಸ್ವಾವಿಮಾ! ಸ್ವಾವಿಮಾ! ಇನ್ಶುರೆನ್ಸಿಗೆ ಸರಿಯಾದ್ದು ಯಾವುದೂ ಇಲ್ಲ. ಮತ್ತೆ ನಮ್ಮ ಕಂಪೆನಿಯೇ ಅತ್ಯುತ್ಕೃಷ್ಟ. ಡಿ॥ ಕಲೆಕ್ಟರರ ಅಳಿಯನು ಈ ಕಂಪೆನಿಯ ಏಜಂಟನಾಗುವುದು ಆತನಿಗೆ ಒಪ್ಪತಕ್ಕ ಮಾತು) ಎಂದು ಕೂಗಿದರು ಸೆಕ್ರೆಟರಿಗಳು.

ರಾಯರ ಅಳಿಯ, ಬೀದಿಯಲ್ಲಿ ನಿಂತು, ನಡುಗುತ್ತ—'ಡಿಪ್ಯುಟಿ ಕಲೆಕ್ಟರರು ಹಾಳಾಗಲಿ; ಅವರ ಅಳಿಯ ಹೊಂಡಕ್ಕೆ ಬೀಳಲಿ! ೩೫೦ ರುಪಾಯಿ! ರಾಮಾ! ಎಲ್ಲವೂ 'ಹಂಬಗ್'! ಇವರೆಲ್ಲ 'ರಾಸ್ಕಲ್ಸ್'! I must teach these fellows a lesson! (ಇವರಿಗೆಲ್ಲ ಬುದ್ಧಿ ಕಲಿಬೇಕು)' ಎಂದು ಸಿಟ್ಟಿನಿಂದ ತುಟಿ ಕಚ್ಚುತ್ತಾ ಹೊರಟು ಹೋದನು.

ಒಬ್ಬರ 'ಸಾರು' ಇನ್ನೊಬ್ಬರ 'ಸೋರಿ'ಯಿಂದ ರಾಯರ ಅಳಿಯನ ಬಂಡವಾಳದಲ್ಲಿ ೩೫೦ ಕೈ ಬಿಟ್ಟಿತು! ಆದರೂ ಅವರು ಗ್ರಾಜುವೇಟರು; ಡಿ॥ ಕಲೆಕ್ಟರರ ಅಳಿಯಂದಿರು ಎಂಬುದನ್ನು ಯಾರೂ ಮರೆಯಬಾರದು!

ಶಿವಳ್ಳಿ ಬ್ರಾಹ್ಮಣ ಸಮಾಜವೂ ಮಠಗಳೂ

ಲೇಖಾಂಕ ೪.

ಹಿಂದಿನ ಲೇಖಾಂಕದಲ್ಲಿ ಶ್ರೀ ಪೇಜಾವರ ಸ್ವಾಮಿಗಳು ಆರಂಭಿಸಿದ ಕೆಲವು ಸುಧಾರಣೆಗಳನ್ನು ನಿರೂಪಿಸಿದೆನು. ಆದರೆ ಇದರ ಪರಿಣಾಮವಾಗಿಯೊ, ನನ್ನ ಲೇಖನದ ಪರಿಣಾಮವಾಗಿಯೋ ಅವರಿಗೆ ಸಹಾಯದ ಬದಲಿಗೆ ತೊಂದರೆಗಳು ಶುರು ಆಗಿವೆ. ಯಾವ ವಿಧವಾದ ಅಕ್ಷೇಪವನ್ನೂ ಎತ್ತದೆ ಪರ್ಯಾಯವೆಯೆದ್ದ ಮಠೀಯರು ಪರ್ಯಾಯಪೀಠಾಧಿರೂಢರಾದ ಸ್ವಾಮಿರಿಗೆ ಶ್ರೀಕೃಷ್ಣದೇವರ ಮಠದ ಯಾವತ್ತೂ ಚರ-ಸ್ಥಿರ ಸೊತ್ತುಗಳನ್ನು ಬಿಟ್ಟುಕೊಡುವ ವಾಡಿಕೆಯಿತ್ತು. ಹತ್ತು ವರ್ಷದ ಕೆಳಗೆ ಜೊಯಿಂಟ್ ಮೆಜಿಸ್ಟ್ರೇಟರ ಮುಂದೆ ಆಯಾಯ ಪರ್ಯಾಯಕಾಲದಲ್ಲಿ ಆಯಾಯ ಪರ್ಯಾಯಪೀಠಾಧಿರೂಢರಾದ ಸ್ವಾಮಿಯರೇ ಸಂಪೂರ್ಣ ಹಕ್ಕುದಾರರೆಂದೂ, ಬಾಕಿ ಸ್ವಾಮಿಯವರನ್ನು ದೇವರ ದರ್ಶನ ಮಾಡಲಿಕ್ಕೆ ಬಿಡುವುದು ಕೂಡ ಪರ್ಯಾಯಪೀಠಾಧಿರೂಢರದೇ ಹಕ್ಕೆಂದೂ ಸಾಕ್ಷ್ಯವನ್ನು ನುಡಿದ ಶ್ರೀ ಶ್ರೀ ಕಾಣೂರು ಸ್ವಾಮಿರು ಶ್ರೀ ಪೇಜಾವರ ಸ್ವಾಮಿರಿಗೆ ಶ್ರೀ ಕೃಷ್ಣಮಠದ ಚಿನ್ನಾಭರಣಗಳನ್ನು ಇನ್ನೂ ಬಿಟ್ಟು ಕೊಡಲಿಲ್ಲವಾಗಿ ಕೇಳುತ್ತೇನೆ. ತತ್ಸಂಬಂಧ ಕೆಲವರು ರಾಜಿ ಪ್ರಯತ್ನಕ್ಕೆ ಪಟ್ಟರೂ ನಿರರ್ಥಕವಾಯಿತೆಂದೂ ಸದ್ಯಕ್ಕೆ ಇಬ್ಬರೂ ಕೋರ್ಟಿನ ಮುಂದೆ ನಿಲ್ಲುವದಾಗಿಯೂ ಕೇಳಿಬರುತ್ತದೆ. ಇದು ನಿಜವಾದರೆ, ಈ ಕುರಿತು ಒಂದು ಮಾತು ಕೇಳಬೇಕಾಗುತ್ತದೆ ಏನೆಂದರೆ,—ದೇವರ ಅಲಂಕಾರಕ್ಕೆಂದು ಭಕ್ತಾದಿಗಳಿಂದ ಕಾಣಿಕೆಯಾಗಿ ಕೊಡಲ್ಪಟ್ಟಿರುವ ಆಭರಣಗಳನ್ನು, ದೇವರ ಅಲಂಕಾರದ ಉಪಯೋಗಕ್ಕೆ ಕೊಡದೆ ಕಾಣೂರು ಮಠೀಯರು ತಮ್ಮ ಮಠದಲ್ಲಿಯೇ ಇಟ್ಟುಕೊಳ್ಳಲಿಕ್ಕೆ ಕಾರಣವೇನು? ಯಾವ ಕಾಲದಲ್ಲಿಯೂ ಕೃಷ್ಣಮಠದಲ್ಲಿಯೇ ಇಡಬೇಕಾಗಿದ್ದ ಆಭರಣಗಳನ್ನು ಬೇರೆ ಸ್ಥಳದಲ್ಲಿಡಲಿಕ್ಕೆ ಕಾರಣವೇನು? ಒಂದು ಪಕ್ಷಕ್ಕೆ ಆ ಆಭರಣಗಳು ಅಸ್ತವ್ಯಸ್ತವಾದರೆ ಜವಾಬ್ದಾರರು ಯಾರು? ಶ್ರೀ ಕೃಷ್ಣದೇವರ ಅಲಂಕಾರವೂ, ಸೇವೆಯೂ, ಮುಖ್ಯವೆ? ಚಿನ್ನವು ಮುಖ್ಯವೇ? ದೇವರ ಅಲಂಕಾರಕ್ಕೆ ಉಪಯೋಗಿಸುವ ಆಭರಣಗಳನ್ನು ಸದ್ರಿ ದೇವರ ಭಂಡಾರದಲ್ಲಿಯೇ ಇಡಲಿಕ್ಕೆ ಏಕೆ ಅನುಮಾನ? ಈಗಿನ ಸಂದರ್ಭದಲ್ಲಿ, ಕೃಷ್ಣದೇವರ ಭಂಡಾರದ ಚಿನ್ನಾಭರಣಗಳನ್ನು ಇಟ್ಟುಕೊಳ್ಳಲಿಕ್ಕೆ ತಮಗಿಂತ ಹೆಚ್ಚಿನ ಯೋಗ್ಯತೆಯವರು ಬೇರೆ ಯಾರೂ ಇಲ್ಲವೆಂಬ ಶ್ರೀ ಕಾಣೂರು ಮಠೀಯರು ಅನುಭವಕ್ಕೆ ತಂದುಕೊಂಡಿದ್ದರೆ, ಅವರು ಪರ್ಯಾಯಕಾಲದಲ್ಲಿಯೇ ಶ್ರೀ ಕೃಷ್ಣಾಪುರ ಸ್ವಾಮಿರು ವರಂಧಾಮವನ್ನು ಹೊಂದಿದ ಮೇಲೆ, ಕೃಷ್ಣಮಠದ ಚಿನ್ನಾಭರಣಗಳಲ್ಲಿ ಮುಖ್ಯವಾಗಿರುವ ಮತ್ತು ನೂರಾರು ಜನರ ವಂತಿಗೆ-ವಾಡದಿಂದ ತಯಾರಿಸಲ್ಪಟ್ಟಿರುವ ಚಿನ್ನದ ಪಾಲಕಿಯನ್ನು ಆ ಮಠದ ಮೈನರ್ ಸ್ವಾಮಿರ ವಶ ಹೇಗೆ ಬಿಟ್ಟರು? ನಾಳೆ ಏನಾದರೂ ಸ್ವಲ್ಪ ಹೆಚ್ಚುಕಮ್ಮಿಯಾದರೆ ಜವಾಬ್ದಾರರು ಯಾರು? ಮೈನರ್ ಕೃಷ್ಣಾಪುರ ಸ್ವಾಮಿರೇ, ಶ್ರೀ ಕಾಣೂರು ಸ್ವಾಮಿರೇ ಅಥವಾ ಬೇರೆ ಯಾರಾದರೂ ಇದ್ದಾರೆಯೇ?

ಶ್ರೀಹರಿ ವಾಯುಗಳಲ್ಲಿ ಅತ್ಯಂತ ಭಕ್ತಿಯುಳ್ಳ, ನನ್ನಂತಹ ಗೊಡ್ಡು ವೈದಿಕ ಬ್ರಾಹ್ಮಣರು ಇರುವಷ್ಟು ದಿನಸ ಇಂತಹ ಅನವಸ್ಥೆಗೆ ಹೆಚ್ಚಿನ ಅವಕಾಶವು ದೊರೆಯಲಿಕ್ಕಿಲ್ಲವೆಂದು ನೆನಪಿರಲಿ! ಮತ್ತೂ ಈ ತರವಾದ ಚಿಲ್ಲರೆ ಉಪದ್ರವಗಳಿಂದ ಶ್ರೀ ಪೇಜಾವರ ಸ್ವಾಮಿರೂ ಮಾಡಬೇಕಾಗಿರುವ ಸುಧಾರಣೆಕಾರ್ಯಕ್ರಮದಿಂದ ಹಿಂಜರಿಯಬಾರದಾಗಿ ನನ್ನ ಒಂದು ಸಾರ್ವಜನಿಕ ವಿನಂತಿಯೂ ಅಲ್ಲಿರಲಿ. ಮುಖ್ಯವಾಗಿ ಈಗ ಶ್ರೀಕೃಷ್ಣಮಠದಲ್ಲಿ ಇರುವ ಯಾವತ್ತೂ ಚಿನ್ನಗಳನ್ನು, ಶ್ರೀಯುತ ಕಾಣೂರು ಸ್ವಾಮಿರಿಗೇ ಶ್ರೀ ಪರ್ಯಾಯ ಸ್ವಾಮಿರು ವಾಪಾಸು ಕೊಟ್ಟು, ಕೇವಲ ಶಿಲಾಮಯವಾಗಿರುವ ಶ್ರೀಕೃಷ್ಣದೇವರ ವಿಗ್ರಹವನ್ನೇ ಆರಾಧಿಸಿ, ಆ ವಿಗ್ರಹದ ಪ್ರತ್ಯಕ್ಷದರ್ಶನವು ಯಾವಾಗಲೂ ಭಜಕರಿಗೆ ಸಿಗುವ ವ್ಯವಸ್ಥೆಯನ್ನು ಶ್ರೀ ಪೇಜಾವರ ಸ್ವಾಮಿರು ಮಾಡಿಸಿದರೆ ಲೇಸೆಂದು ನನ್ನ ಅಭಿಪ್ರಾಯ. ಶ್ರೀಮನ್ಮಧ್ವಾಚಾರ್ಯರು ಭಜಕರ ಸಲುವಾಗಿ ಕೇವಲ ಶಿಲಾಮಯ ವಿಗ್ರಹವನ್ನೇ ಇಲ್ಲಿ ನಿಲ್ಲಿಸಿದ್ದಲ್ಲದೆ, ಆಭರಣಭೂಷಿತವಾದ ವಿಗ್ರಹವನ್ನು ಸ್ಥಾಪಿಸಲಿಲ್ಲವೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಲಿ. ಇಂತಹ ಸುಸಂಧಿಯನ್ನು ಕಲ್ಪಿಸಿಕೊಟ್ಟದ್ದಕ್ಕಾಗಿ ಕಾಣೂರು ಸ್ವಾಮಿರಿಗೆ ಭಜಕರು ಆಭಾರಿಗಳಾಗುವರು. ಮತ್ತು ದೇವರ ಆಭರಣಗಳನ್ನು ಶ್ರೀ ಪೇಜಾವರದವರು ಹಿಂದೆ ಕೊಟ್ಟು, ಅಥವಾ ಅದಕ್ಕೂ ಉತ್ತಮ ಪಕ್ಷ, ಸರಕಾರದ ವಶ ಸೇಫ್ ಕಸ್ಟಡಿಗೆ ಕೊಟ್ಟ ದ್ದಾದರೆ, ಕ್ಷೇತ್ರಕ್ಕಾಗಲೀ, ಕೃಷ್ಣನಿಗಾಗಲಿ, ಉಡುಪಿಯ ಕೃಷ್ಣನಿಗಾಗಲೀ ಕುಂದಿಲ್ಲವೆಂದು ನಾನು ಖಂಡಿತ ಹೇಳಬಲ್ಲೆನು.

ಈಗಿನ ಪರಿಸ್ಥಿತಿಯಲ್ಲಿ ಮಠಗಳ ಒಡಕಿನಿಂದಾಗಿ ಮಠಗಳೂ ಸಮಾಜವೂ ಹೀನಸ್ಥಿತಿಗೆ ಬರುತ್ತಾ ಉಂಟು. ಹೇಗೆಂದರೆ ದೇವಸ್ಥಾನದ ಚಿನ್ನಾಭರಣಗಳಿಗಾಗಿ ನಮ್ಮ ಮಠಾಧಿಪತಿಗಳು ಮತ್ತು ನಮ್ಮ ಗುರುಗಳು ಅನ್ಯೆಮತೀಯರಾದ ಧರ್ಮಾಧಿಕಾರಿಗಳ ಮುಂದೆ ನ್ಯಾಯವನ್ನು ಬೇಡುತ್ತಿರುವಾಗ ಮತ್ತೂ ಇದರಿಂದ ಸಮಯ ಕಾಯುತ್ತಿರುವ ಎಂಡೋಮೆಂಟ್ ಬೋರ್ಡಿನವರು ಪ್ರವೇಶವನ್ನು ಮಾಡುವ ಸಂದರ್ಭವನ್ನು ಈ ಸ್ವಾಮಿಯವರೇ ಒದಗಿಸಿಕೊಡುವಾಗ ಮಠಗಳ ಭವಿಷ್ಯವೂ, ಮಠಾಧಿಪತಿಗಳ ಭವಿಷ್ಯವೂ, ಹಾಗೆಯೇ ಸಮಾಜದ ಭವಿಷ್ಯವೂ ತಾನಾಗಿಯೇ ಹಾಳಾಗುತ್ತದೆ. ಈ ಅಲ್ಪವಿಷಯಗಳನ್ನು ಸರಿಪಡಿಸಿ ಸಮಾಜದ ಕಲ್ಯಾಣದೃಷ್ಟಿಯಿಂದ ಕೆಲಸ ಮಾಡುವ ನ್ಯಾಯವಾದೀ ಮತ್ತು ನೀತಿಪ್ರಿಯ ಮುಂದಾಳುಗಳು ಇಲ್ಲದಿದ್ದಕ್ಕಾಗಿ ಕಣ್ಣೀರುಬಿಡಬೇಕಾಗಿದೆ. ಸದ್ಯದಲ್ಲಿಯೇ ಈ ಇಬ್ಬರು ಮಠಾಧಿಪತಿಗಳು ಕೋರ್ಟಿನಲ್ಲಿ ಹಾಳು ಮಾಡಲಿಕ್ಕಿರುವ ಹಣದಿಂದ ಎಷ್ಟೋ ಜನರಿಗೆ ಸಹಾಯ ಮಾಡಲಿಕ್ಕೆ ಸಾಧ್ಯವಿಲ್ಲವೇ!

ಮಠಗಳು ವಿದ್ಯಾವಂತರಾಗಿಯೂ, ನೀತಿವಂತರಾಗಿಯೂ, ನ್ಯಾಯವಂತರಾಗಿಯೂ ಇರುವ ಅಧಿಕಾರಿಗಳಿಂದ ನಡೆಸಲ್ಪಟ್ಟರೆ ಮಠಗಳಲ್ಲಿ ಒಣಜಂಭಕ್ಕಾಗಿಯೂ, ಆಶ್ರಿತಪಾಲನೆಗಾಗಿಯೂ, ಸ್ವಾರ್ಥಸಾಧನೆಗಾಗಿಯೂ ವೆಚ್ಚವಾಗುವ ಹಣದಿಂದ ಒಂದು ದೊಡ್ಡ ವಿಶ್ವವಿದ್ಯಾಲಯವನ್ನೇ ನಡಿಸಬಹುದು. ಅಂದರೆ ಎಂಟು ಮಠ ಮತ್ತು ಶ್ರೀಕೃಷ್ಣದೇವಸ್ಥಾನದ ಹುಟ್ಟುವಳಿ ವರ್ಷಕ್ಕೆ ಸುಮಾರು ಮೂರು ಲಕ್ಷ ರೂಪಾಯಿಗೆ ಮಿಕ್ಕುತ್ತದೆ. ಸುಸಂಘಟಿತವಾದ ಮತ್ತು ವ್ಯವಸ್ಥಿತವಾದ ಆಡಳಿತೆಯಿದ್ದಲ್ಲಿ ವರ್ಷಕ್ಕೆ ಒಂದು ಲಕ್ಷ ರೂಪಾಯಿಯನ್ನು ಉಳಿಸಬಹುದು. ಈ ಪ್ರತಿವರ್ಷದ ಒಂದು ಲಕ್ಷ ರೂಪಾಯಿ ಉಳಿತಾಯದಿಂದ ಸಮಾಜದ ಕಲ್ಯಾಣವನ್ನು ಎಷ್ಟರ ವರೆಗೆ ಮಾಡಬಹುದೆಂದು ಜನರೇ ಊಹಿಸಬಹುದು. ಸಮಾಜಮುಖಂಡರಾದರೂ ಇವರೊಟ್ಟಿಗೆ ಸಹಕರಿಸಿದಲ್ಲಿ ತಮ್ಮ ಉಳಿತಾಯದಿಂದಲೂ ಸ್ವಲ್ಪವನ್ನು ಕೊಟ್ಟುಸಮಾಜದ ಏಳಿಗೆ ಬಗ್ಯೆ ಎಷ್ಟೋ ವಿದ್ಯಾಲಯಗಳನ್ನೂ, ಎಷ್ಟೋ ವಿದ್ಯಾರ್ಥಿಭವನಗಳನ್ನೂ, ಧಾರ್ಮಿಕ ಜೀವನಕ್ಕೆ ಬೇಕಾದ ಅನೇಕ ಉಪಕಾರಗಳನ್ನೂ ಮಾಡಬಹುದು. ಆದರೆ ಒಬ್ಬರೂ ಮಾಡುತ್ತಿಲ್ಲ. ಮಠಾಧಿಪತಿಗಳನ್ನು ಕೇಳುವವರಿಲ್ಲ. ಸಮಾಜದ ಮುಂದಾಳುಗಳಿಗೆ ತಮ್ಮ ಸ್ವಾರ್ಥಕ್ಕಿಂತ ಮಿಗಿಲಾದ ಕೆಲಸವಿಲ್ಲ. ನನ್ನಂತಹ ಬಡಪಾಯಿ ವೈದಿಕ ಬ್ರಾಹ್ಮಣನ ಕೂಗಿಗೆ ಬೆಲೆಯೇ ಇಲ್ಲ. ಹೀಗಿರುವಾಗ ನಮ್ಮ ಮುಂದಿನ ಗತಿಯೇನು ಎಂಬ ಪ್ರಶ್ನೆಯು ಸಹಜವಾಗಿ ಒಡೆದು ಬರುತ್ತದೆ. ಈ ಉತ್ಕ್ರಾಂತಿಯುಗದಲ್ಲಿ ಉತ್ಕ್ರಾಂತಿಯೇ ಈ ತರದ ಪ್ರಶ್ನೆಯನ್ನು ಬಿಡಿಸುತ್ತದೆಂದು ಬಿಸಿರಕ್ತದ ತರುಣರು ಹೇಳುವರು. ಇದನ್ನು ಎಲ್ಲರೂ ಒಪ್ಪಬರುವಂತಿಲ್ಲ. ಏಕೆಂದರೆ ಕಾಲಕ್ರಮದಿಂದ ಒಂದು ಪಕ್ಷಕ್ಕೆ ಉತ್ಕ್ರಾಂತಿಯು ತಲೆದೋರುವದಾದರೆ ಆ ಉತ್ಕ್ರಾಂತಿಯ ಮುಂದೆ ನಮ್ಮ ಸಮಾಜದ ಪ್ರಶ್ನೆಯು ಮಾತ್ರ ಮುಂದೆ ಬರಲಿಕ್ಕಿಲ್ಲ; ಅಂದರೆ ಸಮಾಜದ ಏಳಿಗೆ ಯಾಗಬೇಕಾದರೆ ಸಾಮಾಜಿಕ ಉತ್ಕ್ರಾಂತಿಯೇ ಏಳಬೇಕಷ್ಟೇ ಹೊರತು ಕಾಲಕ್ರಮದಿಂದ ಬರಲಿ

(೪ನೇ ಪುಟಕ್ಕೆ ಮುಂದುವರಿದಿದೆ)

ಹೊಲಿಗೆ ಕೆಲಸ ಮಾಡುವವರಿಗೂ, ಕಲಿಯುವವರಿಗೂ ಇದೊಂದು ಅಲಭ್ಯ ಲಾಭ!

ಹೆಸರಾದ ಹೊಲಿಗೆಯ ಶಾಲೆಗಳಲ್ಲಿ ಪಠ್ಯ ಪುಸ್ತಕವೆಂದು ಮಾನ್ಯತೆಪಟ್ಟ

ಸಚಿತ್ರ ಕರ್ತನಕಲಾ-ವಿಜ್ಞಾನ.

(ಭಾಗ ೧ — ಮರಾಠಿ.)

ಈ ಮೊದಲನೇ ಭಾಗದಲ್ಲಿ ೬ ತರದ ಸೈರಣಿ, ೧೯ ತರಡ ಶರ್ಟುಗಳು, ೩ ನಮೂನೆಯ ಸೆಪರೇಟು ಕೊಲರು, ೨ ಜಾತಿಯ ಬನಿಯನ್‌ಗಳು ಮತ್ತು ೪ ತರದ ಇಜಾರುಗಳು ಕತ್ತರಿಸುವ ಶಾಸ್ತ್ರೀಯ ಪದ್ಧತಿಯು ಆಗದೀ ಸುಲಭ ರೀತಿಯಿಂದ ವಿವರಿಸಲ್ಪಟ್ಟಿದೆ. ಈ ವಿನಹ ೨೬ ಜಾತಿಯ ಫ್ಯಾಶನ್ನು ಅರ್ಟ ಫೋಟೋಗಳಿವೆ. ಈ ಪುಸ್ತಕದ ಸಹಾಯದಿಂದ ಯಾರೂ ವಸ್ತ್ರ ಕತ್ತರಿಸುವ (ಕಟಿಂಗ್) ಕಲೆಯನ್ನು ಸುಲಭವಾಗಿ ಕಲಿಯಬಹುದು.

ವಸ್ತ್ರದ ಬ್ಯಾಂಡಿಂಗ ಸಮೇತ ಪ್ರತಿ ೧ಕ್ಕೆ ರೂ. ೨—೮—೦. (ಅಂಚೆ ಹಾಸಲು ಬೇರೆ).

ಸೂಚನೆ:— ಈ ಪುಸ್ತಕವನ್ನು ಕನ್ನಡಿಸಿ ಪ್ರಕಟಿಸುವ ಸಂಕಲ್ಪವಿದೆ. ಕನ್ನಡದಲ್ಲಿ ಇಂಥ ಪುಸ್ತಕವು ಇದೇ ಮೊದಲನೇದಾದ್ದರಿಂದ ಬೇಕಷ್ಟೇ ಪ್ರತಿಗಳನ್ನು ತೆಗೆಯುವೆವು. ಕಟಿಂಗ ಕಲೆಯನ್ನು ಶಾಸ್ತ್ರೀಯ ಪದ್ಧತಿಯಿಂದ ಕಲಿಯಬಯಸುವವರು ಈ ಪುಸ್ತಕಕ್ಕಾಗಿ ಇದೀಗಲೇ ರೂ. ೨—೮—೦ ಕಳಿಸಿ ಹೆಸರು ರಾಖಲೆಪಡಿಸಿಕೊಳ್ಳುವುದು. **ಜೂನ್ ತಿಂಗಳ ಕೊನೆಯೊಳಗೆ** ಹೆಸರು ರಾಖಲೆಪಡಿಸುವವರಿಗೆ ಅಂಚೆ ವೆಚ್ಚ ಮಾಫಿಯಿಂದ ಜುಲ್ಯಾ ತಿಂಗಳಲ್ಲಿ ಪುಸ್ತಕವನ್ನು ಕಳಿಸಿಕೊಡುತ್ತೇವೆ.

ಟೇಲರ್‌ಸರಿಗೆ ಬೇಕಾಗುವ ಫ್ಯಾಶನ್ ಬೂಕುಗಳನ್ನೂ, ಫ್ಯಾಶನ್ ಪ್ಲೇಟುಗಳನ್ನೂ, ಬಾಗಲಿಗೆ ಹಚ್ಚುವ ದೊಡ್ಡ ರಂಗೀತ ಚಿತ್ರಗಳನ್ನೂ, ಇತರೇ ಅವಶ್ಯಕ ಸಾಮಾನುಗಳನ್ನೂ ಯೋಗ್ಯ ದರದಿಂದ ಕಳಿಸಿಕೊಡುವೆವು. ಈ ಮುಂದಿನ ಎರಡು ಭಾಗಗಳನ್ನು ಅದಷ್ಟು ಬೇಗನೇ ಪ್ರಸಿದ್ಧಿಸುವವರಿದ್ದೇವೆ.

ವಿಶೇಷ ಮಾಹಿತಿ ಬೇಕಾದರೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ROYAL ART PUBLISHERS,
Amir Building, Tribhuvan Road,
BOMBAY, 4.

ರೋಯಲ್ ಆರ್ಟ್ ಪಬ್ಲಿಶರ್ಸ್,
ಅಮೀರ ಬಿಲ್ಡಿಂಗ್, ತ್ರಿಭುವನ ರೋಡ್,
ಮುಂಬಯಿ, 4.

THE DECCAN CO.,
Cantonment, :: MANGALORE,
Agents for
"Mohini Coffee Powder"
and
"Kelagur Tea"

ಡೆಕ್ಕಾನ್ ಕಂಪೆನಿ

ಕೆಂಟೋನ್‌ಮೆಂಟ್—ಮಂಗಳೂರು.

ಕಾಫಿ ತೋಟಗಳಿಗೂ, ತೆಂಗು ಇತ್ಯಾದಿ ಫಲವಸ್ತುಗಳ ಮರಗಳಿಗೂ, ಅಡಕೆ ತೋಟಗಳಿಗೂ ಬೇಕಾಗುವ ಗೊಬ್ಬರಗಳು ಇವರಲ್ಲಿ ಯಾವಾಗಲೂ ದೊರೆಯುತ್ತವೆ.

ಪ್ರಸಿದ್ಧ "ಮೋಹಿನಿ ಕಾಫಿ ಹುಡಿ" ಮತ್ತು "ಕೆಳಗೂರ್ ಟೀ" ಇದರ ಏಜಂಟರು.

— ಸಣ್ಣವರ —

ಸುಬೋಧಶತಕ

ಟೆಕ್ಸ್‌ಟ ಬುಕ್ ಕಮಿಟಿಯಲ್ಲಿ ಮಂಜೂರಾದ

ಪಾಠಶಾಲಾ—ಪಠ್ಯಪುಸ್ತಕ.

೩ನೆದ್ದಿ ಬೆಳೆಸಿದ 2ನೇ ಆವೃತ್ತಿ-ಬೆಲೆ: 0-2-6

ಎಲ್ಲ ಪುಸ್ತಕವ್ಯಾಪಾರಿಗಳಲ್ಲೂ ಸಿಗುವುದು. ಒಂದಾಣೆಯ ಅಂಚೆಚೀಟನ್ನು ನಮಗೆ ಕಳುಹಿಸುವ ಉಪಾಧ್ಯಾಯರಿಗೆ ಒಂದು ಪ್ರತಿ ಮಾದರಿಗಾಗಿ ಕಳುಹುವೆವು.

ವಿಳಾಸ:—

ವಿಕ್ಟೋರಿಯಾ ಮುದ್ರಾಶಾಲೆ,
ಬಂಟ್ವಾಳ, ದ. ಕನ್ನಡ.

12, 8-5.

ಡಾಕ್ಟರ್ ಸಿ. ಮತಾಯಸರ ಸಿದ್ಧೌಷಧಗಳು.

ಮಸ್ಕ್ ಪಿಲ್ಸ್— ಈ ಮಾತ್ರೆಗಳು ಮಕ್ಕಳ ಚೇಷ್ಟೆಯ ವ್ಯಾಧಿಗೆ ಅದ್ಭುತಕರ ಔಷಧ. ಮಕ್ಕಳು ಯಾವಾಗಲೂ ಕೂಗುತ್ತಾ ಇರುವದು, ಕೈಕಾಲು ನಡುಗುವದು, ಮೂರ್ಛೆಯಾಗುವದು ಮುಂತಾದ ರೋಗಗಳನ್ನು ಗುಣಪಡಿಸುತ್ತದೆ. ರೋಗವಿಲ್ಲದವರಿಗೆ ಕೊಟ್ಟರೂ ಸುಖವಾಗಿರುವರು. ಒಳ್ಳೇ ತ್ರಾಣ ಕೊಡುವ ಶಕ್ತಿ ಇದೆ. ಕೇವಲ ಹಸುಮಗುವಿಗೂ ನಿರ್ಭಯವಾಗಿ ಕೊಡಬಹುದು. ಬೆಲೆ, 100 ಮಾತ್ರೆ I ಕ್ಲಾಸ್ 4 ರೂ; II ಕ್ಲಾಸ್ 1¼ ರೂ.

ಇದಲ್ಲದೆ ಟಿಸ್ಯೂ ಮದ್ದುಗಳೂ, ಹೊಮ್ಯೋಪೆತಿಕ್ ಔಷಧಗಳೂ, ಹೊಮೊ ಕೊಂಬಿನೊ ಔಷಧಗಳೂ ದೊರಕುತ್ತವೆ. ಹೆಚ್ಚಿನ ಮಾಹಿತಿಗೆ ಮತ್ತು ಇಂಗ್ಲಿಷ್ ಕ್ಯಾಟಲಾಗಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಡಾಕ್ಟರ್ ಸಿ. ಮತಾಯಸ್, ಎಂ. ಡಿ. (ಹೊವ್ಯೋ) ಎಂ. ಬಿ. (ಆಯುರ್)
ಪೂವರ್ ಸರ್ವಿಸ್ ಲೋಜ್, ಮಂಗಳೂರು.

ಶ್ರೇಷ್ಠತರಗತಿಯೇ ಅಧಿಕವ್ಯಾಪಾರದ ಲಕ್ಷಣ.

ಅದಕ್ಕಾಗಿಯೇ

"ರಾಜಾ ಸೈಕಲ್"

ಸಾಹಿತ್ಯಗಳು, ರಚನೆ ಮತ್ತು ಸೊಬಗು ಇವುಗಳಲ್ಲಿ ಅತ್ಯುತ್ತಮವಾದುದೆಲ್ಲವೂ ಇದರಲ್ಲಿ ಇದೆ.



ಸ್ವಾಕಿಪ್ಪರು:— **ದಿ ಸಿಟಿ ಸೈಕಲ್ ಕೋ., ಮಂಗಳೂರು.**

ಹೆಚ್ಚು ಮಾಹಿತಿಗೆ:—
ಸೋಲ್ ಕನ್ಸೈನರೀಸ್‌ಯವರಿಗೆ ಬರೆಯಿರಿ.

ರಾಜಾ ಸೈಕಲ್ ಅಂಡ್ ಮೋಟಾರ್ ವರ್ಕ್ಸ್,
"ರಾಜಾ ಬಿಲ್ಡಿಂಗ್ಸ್", ನರಸಿಂಹರಾಜಾ ರೋಡ್,
ಬೆಂಗಳೂರು ಸಿಟಿ,
ದಕ್ಷಿಣ ಇಂಡಿಯ.

Weldon & Co.,

KARANJE (SADANAND) BUILDINGS, HAMPANKATTA,

MANGALORE

Beg to announce to their numerous customers, and well-wishers that they have taken over as a going concern

THE

South Kanara Milk Supply Society, Mangalore

pure and fresh milk, curds, butter and ghee will be available at all times at most favourable prices.

A TRIAL WILL CONVINCE YOU.

The Premier Bank of India, Ltd.,

ದಿ ಪ್ರಿಮಿಯರ್ ಬೇಂಕ್ ಒಫ್ ಇಂಡಿಯಾ, ಲಿಮಿಟೆಡ್,

ಹೆಡ್ ಆಫೀಸ್—ಮದ್ರಾಸ್.

ಚಾಲ್ತಿ ಲೆಕ್ಕಾಚಾರ, ಸೇವಿಂಗ್ಸ್ ಬ್ಯಾಂಕ್ ಮತ್ತೂ ಪ್ರಾವಿಡೆಂಟ್ ಠೇವಣಾತಿ ಲೆಕ್ಕಾಚಾರಗಳನ್ನು ತೆರೆಯಲಾಗುತ್ತದೆ. ಒಂದು ವರ್ಷ ಹಾಗೂ ಎರಡು ವರ್ಷಗಳ ಕಾಲಾವಧಿಯ ನಿರಖು ಠೇವಣಾತಿಗಳನ್ನು ಅನುಕೂಲವಾದ ಬಡ್ಡಿ ದರಗಳೊಡನೆ ಸ್ವೀಕರಿಸಲಾಗುತ್ತದೆ. ಸಾಲಗಳನ್ನು ಯೋಗ್ಯವಾದ ಭದ್ರತೆಗಳ ಮೇಲೆ ಕೊಡಲಾಗುವುದಲ್ಲದೆ, ಎಲ್ಲ ಬಗೆಯ ಬ್ಯಾಂಕಿಂಗ್ ವ್ಯವಹಾರಗಳನ್ನೂ ಕೈಕೊಳ್ಳಲಾಗುತ್ತಿವೆ. ಹೆಚ್ಚಿನ ವಿವರಗಳ ಬಗ್ಗೆ ಹೆಡ್ ಆಫೀಸಿಗೆ ಬರೆದು ಕೇಳಿ.

S. V. RAO, D. Com.,
Managing Director.

ಅತ್ಯುತ್ಕೃಷ್ಟ ತರಗತಿಯ

ಹೊಮಿಯೊಪ್ಯಥಿಕ್ ಮತ್ತು ಬಾಯೊಕೆಮಿಕ್

ಔಷಧಗಳಿಗಾಗಿ

ಇವರಿಗೆ ಬರೆಯಿರಿ—

INDIAN HOMOEOPATHIC STORES,

10/11 Upper Circular Road, :: CALCUTTA.

ಕೆಟಲಾಗು ಇತ್ಯಾದಿ ಅಪೇಕ್ಷಿಸಿದಲ್ಲಿ ಕಳುಹಲಾಗುವುದು.

8, 19—6.

ದಿಲ್‌ಕುಷ್

ಒಂದೇ ಸಾರಿಯ ಸೇವನೆಯಿಂದ ಗುಣ ಆಗಿಲ್ಲವಾದರೆ ಹಣ ಪರತ.

ಈ ಔಷಧರಾಜ ಚ್ಯವನಾಮೃತ ಔಷಧ, ಮೂತ್ರಕೃಚ್ಛ್ರ ಮೂತ್ರತೊಂದರೆ ನವಚೈತನ್ಯದಾಯಕ ಮಹೌಷಧಗಳ ಶಾಸ್ತ್ರೀಯ ಸಮ್ಮಿಶ್ರಣವಾಗಿದ್ದು, ನಮ್ಮ ಪೂರ್ವಿಕರು ಬಹಳ ಶ್ರಮದಿಂದ ಮಹಾರಾಜರು ಮತ್ತು ನವಾಬರುಗಳಿಗಾಗಿ ಪೂರ್ವದಲ್ಲಿ ತಯಾರಿಸುತ್ತಿದ್ದರು. ಈಗ ನಾವು ಈ ಔಷಧವನ್ನು ಗಂಡಸರ ಮತ್ತು ಹೆಂಗಸರ ಸಾರ್ವಜನಿಕ ಉಪಯೋಗಕ್ಕಾಗಿ ತಯಾರಿಸುತ್ತಿದ್ದೇವೆ. ಅದು ಅವರನ್ನು ಯಾವಾಗಲೂ ಯೌವನಪೂರ್ಣರಾಗಿರಿಸುತ್ತದೆ. ಅವರ ಪ್ರಕೃತಿಯನ್ನು ಅದು ನವಚೈತನ್ಯಗೊಳಿಸುತ್ತದೆ ಮತ್ತು ಗುಣವನ್ನು ಆರಂಭದಿಂದಲೇ ಕಾಣಬಹುದು. ದಿನೇದಿನೇ ಅವರ ಸಾಮರ್ಥ್ಯವೂ ವೀರ್ಯವೂ ವರ್ಧಿಸುವುದು. ಸಂಕ್ಷೇಪತಃ ದಿಲ್‌ಕುಷ್ ಲೇಹದ ಸ್ವಲ್ಪ ಸೇವನೆಯು ಶರೀರಬಲವನ್ನೂ, ಆರೋಗ್ಯವನ್ನೂ ಮತ್ತು ನವಚೈತನ್ಯವನ್ನೂ ಕೊಡುವುದು.

ಒಮ್ಮೆ ಪರೀಕ್ಷಿಸಿ ಮತ್ತೆದರ ವರಪ್ರದಾನವನ್ನು ಪಡೆಯಿರಿ.

ಕ್ರಯ: ಹದಿನೈದು ದಿನಗಳ ಸೇವನೆಯ ಡಬ್ಬಿಯೊಂದರ ರೂ. ೨—೦—೦. ಮೂವತ್ತು ದಿನಗಳ ಸೇವನೆಯ ಡಬ್ಬಿಯೊಂದರ ರೂ. ೩—೦—೦.

ಬರೆಯಿರಿ ವಿಳಾಸ:

DR. K. SIVA PRASADA RAO
Rajahmundry, East Godavary Dt.

4, 26-6

(೩ನೇ ಪುಟದಿಂದ)

ಕ್ಕಿರುವ ಸಾರ್ವಜನಿಕ ಮತ್ತು ಸಾರ್ವದೈಶಿಕ ಉತ್ಕ್ರಾಂತಿಯನ್ನು ನಿರೀಕ್ಷಿಸಿ ಫಲವಿಲ್ಲ. ನಮ್ಮ ಸಮಾಜದಲ್ಲಿಯೇ ಸಾಮಾಜಿಕ ಉತ್ಕ್ರಾಂತಿಯನ್ನು ಮುಂದೊತ್ತುವ ವೀರ ತರುಣರು ಇನ್ನೂ ಹುಟ್ಟಲಿಲ್ಲವೆಂದು ಹೇಳಿದರೆ ನನ್ನನ್ನು ಯಾವ ತರುಣನೂ ಬಯ್ಯಲಿಕ್ಕಿಲ್ಲವೆಂದು ನಂಬುತ್ತೇನೆ.

ಆದುದರಿಂದ ಸಾಮಾಜಿಕ, ಧಾರ್ಮಿಕ ಮತ್ತು ನೈತಿಕ ಸುಧಾರಣೆಯಲ್ಲಿ ಅತ್ಯಂತ ಆತುರವುಳ್ಳ ಶ್ರೀ ಪೇಜಾವರ ಸ್ವಾಮಿಯರೇ ಉತ್ಕ್ರಾಂತಿಯಲ್ಲಿ ಮುಂದಾಳುತನವನ್ನು ಸ್ವೀಕರಿಸಿ ಏತಕ್ಕೆ ಮುಂದೆ ಬರಬಾರದು? ಅವರು ಸ್ವಯಂ ಸನ್ಯಾಸಿಗಳು, ರಕ್ತಸಂಬಂಧಿಗಳ ಮೋಹವನ್ನು ಬಿಟ್ಟವರು, ವೇಷಭೂಷಾದಿಗಳಲ್ಲಿ ವಿರಕ್ತರು, ಒಣ ಜಂಭ ಮತ್ತು ಹರಟೆಗಳಿಂದ ಮಿಗಿಲಾದವರು. ಅನೇಕದೇಶಸಂಚಾರದಿಂದಲೂ, ಅನೇಕ ಜನರ ಪರಿಚಯದಿಂದಲೂ, ಅನೇಕ ಗ್ರಂಥಗಳ, ಶಾಸ್ತ್ರಗಳ ಮತ್ತು ಪತ್ರಿಕೆಗಳ ಅವಲೋಕನದಿಂದಲೂ ಹೆಚ್ಚಿನ ಅನುಭವವುಳ್ಳವರು ಆದುದರಿಂದ ಇಂತಹ ಸಂದರ್ಭದಲ್ಲಿ ಈಗಿನ ಸಮಾಜಕ್ಕೆ ಅತ್ಯಗತ್ಯವಾಗಿ ಬೇಕಾಗಿರುವ ಸುಧಾರಣೆಗಳನ್ನು ಮುಂದೊತ್ತುವರೆ ತಾನೇ ಮುಂದಾಳಾಗಿ ಉತ್ಕ್ರಾಂತಿಯನ್ನೆಬ್ಬಿಸಲಿ. ಮೊತ್ತಮೊದಲು ಕೆಲವು ಸ್ವಾರ್ಥಿಗಳಿಂದ ಕೆಡಕು ಉಂಟಾದರೂ ಕಡೆಗೆ ಸ್ವಾರ್ಥಿಗಳೆಲ್ಲರೂ ಓಡಿಹೋಗಿ ಸಮಾಜದ ಕಲ್ಯಾಣದ ಶುಭೋದಯವು ಖಂಡಿತವಾಗಿಯೂ ಆಗುವುದು. ಇಂತಹ ಪರಿಸ್ಥಿತಿಯೇ ಶ್ರೀ ಶ್ರೀ ವಾದಿರಾಜ ಸ್ವಾಮಿಗಳ ಕಾಲದಲ್ಲಿಯೂ ಒದಗಿತ್ತೆಂಬುದನ್ನೂ, ಅವರು ಎಲ್ಲ ಹಂಗನ್ನೂ ತೊರೆದು ಇತರ ಮಠಾಧಿಪತಿಗಳ ಸಂಗಡ ದ್ವೇಷವನ್ನು ಕಟ್ಟಿಕೊಂಡಾದರೂ ಆಗಿನ ಕಾಲಕ್ಕೆ ಬೇಕಾಗಿದ್ದ ಸುಧಾರಣೆಗಳನ್ನು ಮುಂದೊತ್ತುವರೆ ಹಿಂಜರಿಯದೆ ಮೊದಲು ತಾನೇ ಒಬ್ಬಂಟಿಗನಾಗಿ ಅನೇಕ ಕಷ್ಟಗಳನ್ನು ಸಹಿಸಿ ಉತ್ಕ್ರಾಂತಿಯನ್ನು ಎಬ್ಬಿಸಿದರು. ಅವರ ತ್ಯಾಗದ ಮತ್ತು ಆಗಿನ ಸುಧಾರಣೆಯ ಫಲವಾಗಿಯೇ ಈ ಹೊತ್ತು ಇನ್ನೂ ನಮ್ಮ ಸಮಾಜವೂ ಮಠಗಳೂ ತಲೆಯೆತ್ತಿಕೊಂಡಿರುವುವು. ಆದುದರಿಂದಲೇ ಶ್ರೀ ಮಧ್ವಾಚಾರ್ಯರ ಮೇಲೆ ಅನೇಕ ಮಠಾಧಿಪತಿಗಳು ಪೀಠಗಳನ್ನು ಅಲಂಕರಿಸಿ ಹೋದರೂ ಅಲ್ಲಲ್ಲಿ ನೂರಾರು ವೃಂದಾವನಗಳನ್ನು ಕಣ್ಣಿನಿಂದ ಕಂಡರೂ ಶ್ರೀ ಶ್ರೀ ವಾದಿರಾಜ ಸ್ವಾಮಿಯವರ ಜ್ಞಾಪನೆಯು ಮಾತ್ರ ಪತಿಯೊಬ್ಬನ ತಲೆಯಲ್ಲಿಯೂ ಉಳಿದಿದೆ. ಇಂತಹ ಪರಿಸ್ಥಿತಿಯ ಉಪಯೋಗವನ್ನು ಪಡೆದು ಮುಂದೆ ಬರುವ ಧಾರ್ಮಿಕ ವೀರ ತರುಣನೇ ಮುಂದಿನ ಜನಾಂಗದ ಸ್ಮೃತಿಪಥದಲ್ಲಿ ಬೆಳಗುವನು ಎಂಬುದನ್ನು ಯಾರೂ ಮರೆಯಬಾರದು.

ಉತ್ತಿಷ್ಠತ! ಜಾಗ್ರತ!

ಸಮಾಜಕ್ಕೆ ಬೇಕಾದ ಸುಧಾರಣೆಗಳು ಯಾವವು, ಅದನ್ನು ಯಾರು ಯಾರು ಮಾಡಬಹುದು, ಅದರಿಂದ ಏನೇನು ಪ್ರಯೋಜನ ಸಿಗುವುದು ಎಂಬೀ ವಗೈರೆ ವಿಷಯಗಳನ್ನು ಮುಂದಿನ ಲೇಖಾಂಕಗಳಲ್ಲಿ ವಿವರಿಸುವೆನು.

ವೈದಿಕ ಬ್ರಾಹ್ಮಣ.

ಪಂಚಮ ಜಾರ್ಜರ ಸ್ಮಾರಕನಿಧಿಗೆ ಧನಸಹಾಯವಿತ್ತವರ ಪಟ್ಟಿ.

(ಮುಂದರಿದುದು)

ರಾ. ರಾ. ಎ. ಯಂ. ರಾಮಯ್ಯ ಎಸ್ಟ್ರಿಟ್ಸ್ ರೂಕ್ಸ್, ಮೈಸೂರು ಸಾರ್ವಜನಿಕ ಫೋರೆಸ್ಟ್ ಗಾರ್ಡ್‌ಗಳಾದ ಯುಗ್ಗ ಕೆ. ನಾರಾಯಣ ಜಿ. ಆಚಾರ್, ಕೆ. ಸ್ವಾಮಿಜಿ ಆಚಾರ್, ಬಿ. ರಾಮಣ್ಣ ಶೆಟ್ಟಿ ಆಚಾರ್, ಶ್ರೀನಿವಾಸ ಆಚಾರ್, ಬಿ. ಕದಿರಪ್ಪ ಆಚಾರ್, ಬಿ. ಪುಟ್ಟಸ್ವಾಮಿ ಆಚಾರ್, ಬಿ. ಅಪ್ಪು ಆಚಾರ್, ಯು. ರಾಮಪ್ಪ ಆಚಾರ್, ಭೀ. ಗಣಪತಿ ಆಚಾರ್, ಅಬುಬಕ್ಕರ್ ಆಚಾರ್, ಯಸ್. ಪಿ. ಚನ್ನಪ್ಪ ಆಚಾರ್, ವಿ. ಅಂಬು ಆಚಾರ್, ಕೆ. ರಾಮಸ್ವಾಮಿ ಆಚಾರ್, ಕೆ. ಗೋವಿಂದರಾಜ ಆಚಾರ್, ವಿ. ರಾಮೋಜಿ ಆಚಾರ್, ಕೆ. ಕಾಂತಪ್ಪ ಆಚಾರ್, ಕೊರಗಪ್ಪ ಆಚಾರ್, ಯು. ಮಹಾಲಿಂಗ ಆಚಾರ್, ಶಿವಪ್ಪ ಆಚಾರ್, ಯು. ಕೃಷ್ಣಪ್ಪ ಆಚಾರ್, ಯಸ್. ಕೆ. ಕಾಂತಪ್ಪ ಆಚಾರ್, ಕೆ. ಕೃಷ್ಣಪ್ಪ ಆಚಾರ್, ಬಿ. ಪುಟ್ಟಸ್ವಾಮಿ ಆಚಾರ್, ಕೆ. ಕೃಷ್ಣಪ್ಪ ಆಚಾರ್, ಕೆ. ಬೆಟ್ಟಸ್ವಾಮಿ ಆಚಾರ್, ಕೆ. ಕೃಷ್ಣಪ್ಪ

ವಿಶ್ವವಿಚಾರ

(ವಿಮಾನಪತ್ರ)

ಪೆಲೆಸ್ತೀನದ ಗಲಾಟೆ: — ಅರಬ್ಬಿಯರ ಆಸ್ತಿಪಾಸ್ತಿಗಳೆಲ್ಲ ಯೆಹೂದ್ಯರ ಪಾಲಾಗುತ್ತಿವೆ ಎಂಬೊಂದು ಊರಿ, ಇದರೊಂದಿಗೆ ಬ್ರಿಟಿಷ್ ಸರಕಾರ, ಯೆಹೂದ್ಯರ ಕೂಟದ ಮುಖಂಡ ಡಾ। ವೈಜಮೆನ, ಅರಬಿಯರ ಪರವಾಗಿ ೧೯೧೯ನೆ ಜನವರಿ ೫ನೆ ತಾರೀಕಿಗೆ ಅರಬ್ಬಿಯರ ಮತ್ತು ಯೆಹೂದ್ಯರ ಪರವಾಗಿ ಸಹಿ ಮಾಡಿದ ಅವಿೂರ ಫೈಜಲ ಇವರ ಮೈತ್ರಿಯ ಒಪ್ಪಂದದ ಶರ್ತಗಳಿಗೆ ವಿರೋಧವಾಗಿ ಆ ಒಪ್ಪಂದದ ಶರ್ತಗಳನ್ನು ನಿರಾಕರಿಸಿ ಡಾ। ವೈಜಮೆನ ಬರೆದ ಪತ್ರ ಇವೂ ಪೆಲೆಸ್ತೀನದ ಗಲಾಟೆಗೆ .ಕಾರಣವಾಗಿವೆ. ಈ ಮೈತ್ರಿಯ ಒಪ್ಪಂದವನ್ನು ತಯಾರಿಸಿದವನು ಅರೆಬಿಯದಲ್ಲಿ ಬಹಳ ವರ್ಷ ಅರಬ್ಬಿಯರೊಂದಿಗೆ ಹೊಕ್ಕುಬಳಕೆಯಿಂದಿದ್ದು ಇಲ್ಲಸಲ್ಲದ ಕುಹಕಗಳನ್ನು ಇಂಡಿಯದ ಗಡಿಯಲ್ಲಿ ಅಫ್ಘಾನರೊಡನೆ ನಡಿಸಿದ ಲೋರೆನ್ಸ್ .ಎಂಬವನು. ಠರಾವಣೆ ಇಂಗ್ಲಿಷ್ ಭಾಷೆಯಲ್ಲಿ. ಫೈಜಲನಿಗೆ ಇಂಗ್ಲಿಷ್ ಭಾಷೆ ತಿಳಿಯದು. ಆದ್ದರಿಂದ ಈ ಒಪ್ಪಂದದ ಆಡಿಯಲ್ಲಿ ಅರಬಿ ಭಾಷೆಯಲ್ಲಿ ಫೈಜಲನು ತನ್ನ ಆಕಾಂಕ್ಷೆಗಳನ್ನು ಬರೆದು ಸಹಿ ಹಾಕಿದನಂತೆ. ಈ ಆಕಾಂಕ್ಷೆಗಳಲ್ಲಿ ಅರಬ್ಬಿ ಭಾಷೆಯನ್ನಾಡುವ ಅರಬ್ಬಿಯರ ಬೇರೆ ಬೇರೆ ಪ್ರದೇಶಗಳನ್ನು ಏಕ ಚ್ಛತ್ರದೊಳಗೆ ತಂದು ತನ್ನನ್ನು ಅಥವಾ ತನ್ನ ಉತ್ತರಾಧಿಕಾರಿಗಳನ್ನು ಆ ಗದ್ದಿಗೆಗೆ ಏರಿಸುವುದು ಫೈಜಲನ ಮುಖ್ಯೋದ್ದೇಶ. ಅದನ್ನು ಭಾಷಾಂತರಿಸುವಾಗ ಅದರ ಉದ್ದೇಶವನ್ನು ಭಂಗ ಮಾಡಿದ್ದು ಲೊರೆನ್ಸ್ ಎಂದೂ ಅರಬ್ಬಿಯರ ಅಭಿಪ್ರಾಯ. ಈಗ ಲೊರೆನ್ಸ್ ಮತ್ತು ಅವಿೂರ ಫೈಜಲ್ ಇಬ್ಬರೂ ಇಹಲೋಕವನ್ನು ತ್ಯಜಿಸಿದ್ದಾರೆ. ಹೀಗಾಗಿ ಪೆಲೆಸ್ತೀನದಲ್ಲಿ ಯೆಹೂದ್ಯ ರಾಜ್ಯವನ್ನು ಪುನಃ ಸ್ಥಾಪಿಸುವುದೊಂದೇ ಉದ್ದೇಶ ಉಳಿಯಿತು. ಆದರೆ ಅರಬ್ಬಿಯರ ಪರವಾಗಿ ಬರೆದ ಶರ್ತವು ನಡೆಯಲಿಲ್ಲ. ಅರಬ್ಬಿಯರ ಒಂದು ದೊಡ್ಡ ರಾಜ್ಯವನ್ನು ಸ್ಥಾಪಿಸಬೇಕೆಂದು ಲೊರೆನ್ಸನ ಉದ್ದೇಶವಿತ್ತು ಎಂದು ಬ್ರಿಟಿಷರ ಮುಖ್ಯ ವಾದ. 'ಶೆಟ್ಟಿ ಲಾಭ ಇಜ್ಜಾಂದೆ ಬೊಳ್ಳಿಗ್ ಪೊವಾಯೆ' ಎಂಬದು ಜನಜನಿತ. ಅರಬ್ಬಿಯರ ದೊಡ್ಡ ರಾಜ್ಯವೊಂದು ಸ್ವತಂತ್ರವಾಗಿ ಏರ್ಪಟ್ಟರೆ ಬ್ರಿಟಿಷರಿಗೆ ಪ್ರಯೋಜನವೇನು? ಪೆಲೆಸ್ತೀನವನ್ನು ತುರ್ಕಿಯವರಿಂದ ಕಿತ್ತು ಬ್ರಿಟಿಷರ ಭೋಗ್ಯಾದಿ ಅಡವು ಮಾಡಿದ್ದರಿಂದ ಹಣಗಾರರಾದ ಯೆಹೂದ್ಯರ ಧನಸಹಾಯವು ಬ್ರಿಟಿಷರಿಗೆ ಖಾತ್ರಿಯಾದೀತು. ಇದಲ್ಲದೆ ಈಗಿನ ಪರಿಸ್ಥಿತಿಯಲ್ಲಿ ಮೂಲ್ಟಾ ಒಂದೇ ಅಲ್ಲದೆ ಇನ್ನೂ ಬ್ರಿಟಿಷ ನೌಕಾಸೈನ್ಯದ ಆಶ್ರಯಕ್ಕೆ ಪೆಲೆಸ್ತೀನದ ಬಂದರಾದ ಹೈಫಾ ಸಹಾ ತಯಾರಾಗುತ್ತದೆ. ಆಗ ಅರಬ್ಬಿಯರಿಗೆ ಸ್ವಾತಂತ್ರ್ಯ ಕೊಡುವಷ್ಟು ಉದಾರ ಬುದ್ಧಿಯು ಬ್ರಿಟಿಷರಿಗಾದರೂ ಬರುವುದು ಹೇಗೆ? ಅವಿೂರ ಫೈಜಲನು ಬ್ರಿಟಿಷರ ಬೆಂಬಲದಿಂದ ತುರ್ಕಿಯ ಅಧಿಕಾರವನ್ನು ಕಿತ್ತು ಬಿಟ್ಟ ಮಕ್ಕಾದ ಮುಖ್ಯಾಧಿಕಾರಿಯ ಮಗ. ಅವನನ್ನು ಸೂತ್ರದ ಗೊಂಬೆಯಾಗಿ ಒಂದು ರಾಜ್ಯ ಕೊಟ್ಟು ಕೈಯಾಡಿದವರು ಬ್ರಿಟಿಷರು. ಫೈಜಲನ ಮಹತ್ವಾಕಾಂಕ್ಷೆಯನ್ನು ಪೂರೈಸುವರೆಂದು ನಂಬಬಹುದೆ? ಉನಾಚಂದನಿಗೆ ಕ್ಲೈವ್ ಮೋಸಗೊಳಿಸಿದಂತೆ ಲೊರೆನ್ಸ್ ಅವಿೂರ ಫೈಜಲಿಗೆ ಮಂಕುಬೂದಿ ಚೆಲ್ಲಿದನು. ಆದ್ದರಿಂದ ಆ ಒಪ್ಪಂದವು ಪೂರ್ಣ ಶರ್ತಗಳ ಪೂರೈಕೆಯಾಗದೆ ಸಿಂಧುವಲ್ಲ ಎಂದು ಅರಬ್ಬಿಯರ ಅಂಬೋಣ. ಆ ಶರ್ತಗಳನ್ನು ಡಾ। ವೈಜಮೆನ್ ಯೆಹೂದ್ಯರ ಕಡೆಯಿಂದ ನಿರಾಕರಿಸಿದ್ದಾನೆ. ಇದೇ ಈ ಚಳವಳಕ್ಕೆ ಒಂದು ಮಹತ್ತಾದ ಕಾರಣವಂತೆ!

ಲೊರೆನ್ಸನು ಫೈಜಲನಿಗೆ ಸಂಯುಕ್ತ ಅರಬಿ ರಾಷ್ಟ್ರದ ಕನಸು ಉಂಟಾಗುವಂತೆ ಮಾಡಲು ಕಾರಣವೇನು? ಮೊದಲು ಪೆಲೆಸ್ತೀನವು ಯೆಹೂದ್ಯರ ರಾಷ್ಟ್ರ; ಅದನ್ನು ಅನಂತರ ಅರಬ್ಬಿ ಮುಸಲ್ಮಾನರು ಕಿತ್ತುಕೊಂಡರು. ಕ್ರಿಸ್ತ ಸ್ವಾಮಿಯ ಜನ್ಮಸ್ಥಾನವನ್ನು ತುರ್ಕಿ ಮುಸಲ್ಮಾನರಿಂದ ಕಿತ್ತುಕೊಳ್ಳಬೇಕೆಂದು ಯುರೋಪಿನ ಹಲವು ರಾಜ್ಯಗಳು ಹಲವು ಸಲ ಸೈನ್ಯ ಕಟ್ಟಿಕೊಂಡು ಪೆಲೆಸ್ತೀನಕ್ಕೆ ಹೋಗಿದ್ದರು. ಆದರೆ ಕ್ರೈಸ್ತ ಸೈನ್ಯಗಳ ಪರಸ್ಪರ ಮತ್ಸರದಿಂದ ಇದು ಸಾಧ್ಯವಾಗಲಿಲ್ಲ. ಮಹಾಯುದ್ಧದ ಕಾಲದಲ್ಲಿ ಜನರಲ್ ಎಲ್ಲನ್‌ಬೀಯು ಒಸ್ಟ್ರೇಲಿಯ, ಇಂಡಿಯ, ಬ್ರಿಟಿಷ ಮತ್ತು ಯೆಹೂದ್ಯರ ಸೈನ್ಯದ ಸಹಾಯದಿಂದ ಪೆಲೆಸ್ತೀನವನ್ನು ತುರ್ಕಿಯ ಮುಸಲ್ಮಾನರಿಂದ ಕಿತ್ತುಕೊಂಡನು. ಈ ಮಹಾಯುದ್ಧದ ಕಾಲದಲ್ಲಿ ಜರ್ಮನರಿಗೆ ಮಾತ್ರ ಗೊತ್ತಿದ್ದ ಒಂದು ರಾಸಾಯನಿಕ ಪದಾರ್ಥದ ಬೆರಿಕೆಯಿಂದ ಜರ್ಮನರ ಯುದ್ಧನೌಕೆಗಳಲ್ಲಿರುವ ಸ್ಫೋಟನದ ಮದ್ದಿನ ಪ್ರತಾಪವು ಭಯುಂಕರವಾಗಿತ್ತು. ಆ ರಾಸಾಯನಿಕ ಪದಾರ್ಥವನ್ನು ಕಂಡುಹಿಡಿಯುವವರಿಗೆ. ದೊಡ್ಡ ಬಹುಮಾನ ಸಿಗಬಹುದೆಂದು ಆ ಕಾಲದ ಬ್ರಿಟಿಷ್ ಮಂತ್ರಿವಿ। ಲೊಯ್ಡ ಜೊರ್ಜ ಪ್ರಕಟಿಸಿದನು. ಈ ಪದಾರ್ಥವನ್ನು ರಸಾಯನ ಶಾಸ್ತ್ರಜ್ಞನಾದ ಯೆಹೂದ್ಯನೊಬ್ಬ ವೈಜಮೆನನು ಕಂಡುಹಿಡಿದನು. ಯುದ್ಧ ಮುಗಿದ ಮೇಲೆ ಏನು ಪಾರಿತೋಷಕ ಬೇಕೆಂದು ವಿ। ಲೊಯ್ಡ ಜೊರ್ಜನು ವೈಜಮೆನನೊಡನೆ ಪ್ರಶ್ನಿಸಿದನು. ತನಗೆ ಹಣವೇನು ಬೇಕಿಲ್ಲ, ಯೆಹೂದ್ಯರಿಗೆ ಪ್ರಾಚೀನ ಕಾಲದಿಂದಲೂ ೨೦೦೦ ವರ್ಷಗಳನಂತರ ಪೆಲೆಸ್ತೀನವು ಕೈ ಸೇರಿತೆಂದು ಒಂದು ಪ್ರತೀತಿ ಇದೆ, ಅದನ್ನು ನಡಿಸಿಕೊಟ್ಟರೆ ತಾನು ಕೃತಾರ್ಥನಾಗುವೆನೆಂದು ವೈಜಮೆನನ ಉತ್ತರ. ಈ ಮಾತನ್ನು ಸಾರ್ಥಕ ಪಡಿಸುವುದಕ್ಕೇನೇ ಪೆಲೆಸ್ತೀನವನ್ನು ಬ್ರಿಟಿಷರ 'ಮೆಂಡೇಟ' (ಭೋಗ್ಯಾದಿ ಅಡವು) ದೊಳಗೆ ವಾರ್ಸಿಲದ ಒಪ್ಪಂದದಲ್ಲಿ ಇರಗೊಡಿಸಲಾಯಿತು. ವಿ। ಲೊಯ್ಡ ಜೊರ್ಜನ ಅನಂತರದ ಮಂತ್ರಿ ಲೊರ್ಡ್ ಬಾಲ್ಫೋರ್‌ನು ಈ ಮಾತನ್ನು ಸಮರ್ಥಿಸಿ, ಯೆಹೂದ್ಯರ ರಾಜ್ಯವನ್ನು ಪುನಃ ಸೃಷ್ಟಿಸುವುದಕ್ಕೆ ತುಂಬಾ ಸಹಾಯ ಮಾಡಿದನು. ಯೆಹೂದ್ಯರು ತನ್ನ ಕುಟುಂಬ ಮಕ್ಕಳು ಮರಿಗಳನ್ನು ಸಾಗಿಸಿ ಪೆಲೆಸ್ತೀನದಲ್ಲಿ ನೆಲೆಸಿಂತರು.

ಆದರೆ ಈ ಪ್ರಯತ್ನದಲ್ಲಿ ಹಾಲಿನಲ್ಲಿ ನೊಣ ಬಿದ್ದಂತಾದುದು ಲೊರೆನ್ಸನಿಂದ. ಲೊರೆನ್ಸನು ಪೆಲೆಸ್ತೀನವನ್ನು ಹಿಡಿಯುವುದಕ್ಕೆ ಅರಬ್ಬಿಯರದೊಂದು ಸೈನ್ಯವನ್ನು ಕಟ್ಟಿಕೊಂಡು ಜನರಲ್ ಎಲ್ಲನ್‌ಬೀಗೆ ಸಹಾಯ ಮಾಡಿದ್ದನು. ಆಗ ಅವಿೂರ ಫೈಜಲನು ಅರಬ್ಬಿ ಸೈನ್ಯ ಸಂಗ್ರಹಿಸಿಕೊಟ್ಟ ಉಪಕಾರಕ್ಕಾಗಿ ಅರಬ್ಬಿಯರ ದೊಡ್ಡದೊಂದು ಸಂಯುಕ್ತ ಸಾಮ್ರಾಜ್ಯವನ್ನು ಕಟ್ಟುವುದಕ್ಕೆ ಬ್ರಿಟಿಷರ ಸಹಾಯವನ್ನು ವಾಗ್ದತ್ತ ಮಾಡಿದ್ದನು. ಆದರೆ ವಾರ್ಸೆಲದ ಒಪ್ಪಂದದಲ್ಲಿ ಈ ಪ್ರಸ್ತಾಪವೇ ಇದ್ದಿಲ್ಲ. ಯೆಹೂದ್ಯರಿಗೆ ಮಾತ್ರ ಸಲಹೆಗಳು ದೊರಕಿದವು. ಫೈಜಲನಿಗೆ ಲೊರೆನ್ಸನು ಕೊಟ್ಟ ಮಾತು ಎಡೆಯಲ್ಲಿ ಹೋಯಿತು. ಲೊರೆನ್ಸ್ ಬ್ರಿಟಿಷ್ ಸೈನ್ಯದ ನಾಯಕತ್ವಕ್ಕೆ ರಾಜಿನಾಮೆ ಕೊಟ್ಟನು. ಪೆಲೆಸ್ತೀನವು ಬ್ರಿಟಿಷರ ಕೈಯೊಳಗೂ ಸಾಯ್ರಿಯವು ಫ್ರೆಂಚರ ರಕ್ಷಣೆಯೊಳಗೂ ಸೇರಿತು.



"ಹಿಸ್ ಮಾಸ್ಟರ್ಸ್ ವಾಯ್ಸ್"

ಶಬ್ದೋತ್ಪನ್ನದಲ್ಲಿ ಔನ್ನತ್ಯವನ್ನು ಪಡೆದಿರುತ್ತದೆ!

ಟ್ರಾನ್ಸ್‌ಪೋರ್ಟಬಲ್ ಮಾಡಲ್
ನೆಂ. 113
ಬೆಲೆ ರೂ 180

ಶಬ್ದಪುನರೋತ್ಪನ್ನತೆಯಲ್ಲಿ "ಹಿಸ್ ಮಾಸ್ಟರ್ಸ್ ವಾಯ್ಸ್" ಕಂಪೆನಿಯವರು ವರ್ಷಾಂತರಗಳ ಪರಿಶೋಧನಾಫಲಿತವಾಗಿ ಕೇವಲ ನಿರ್ಜೀವವಾದ ಗ್ರಾಮೋಫೋನು ರಿಕಾರ್ಡುಗಳಿಂದ ವಿಸ್ಮಯಗೊಳಿಸುವ ಜೀವನಾದವನ್ನು ಪ್ರಕಟಿಸಿ ಗಾಂಧರ್ವಗಾನವನ್ನು ಸರ್ವ ಜನರಿಗೂ ಸದಾಕಾಲ ಸುಲಭ್ಯವಾಗುವಂತೆ ಮಾಡಿರುವರು. ಇವುಗಳನ್ನೀಗಲೇ ನಮ್ಮ ವ್ಯಾಪಾರಿಗಳಲ್ಲಿ ಕೊಂಡು ಕೇಳಿ ಆನಂದಿಸುವಿರಿ.

ಕೇಟಲಾಗುಗಳು ಉಚಿತ.

ದಿ ಗ್ರಾಮಫೋನ್ ಕಂಪೆನಿ, ಲಿಮಿಟೆಡ್,
45, ಸೌತ್ ಪೆರೇಡ್, ಬೆಂಗಳೂರು.

ದೊರೆಯುವ ಸ್ಥಳ:—
ಎಮ್. ಎಚ್. ಶಾನುಭಾಗ ಎಂಡ್ ಸನ್ಸ್, ಮಂಗಳೂರು.

ಸ್ವಸ್ತಿಕಾ

ಅತ್ಯುತ್ಕೃಷ್ಟ ವನಸ್ಪತೀಯ
ಟಾಯ್ಲೆಟ್ ಸಾಬೂನುಗಳು

ಯೌವನಪೂರ್ಣವಾದ ಚರ್ಮಕ್ಕೂ ಮತ್ತು ಸುಂದರವಾದ ವೈಬಣ್ಣಕ್ಕೂ. ತೃಪ್ತಿಯಾಗದಿದ್ದರೆ ಹಣ ಹಿಂದೆ.

NEEM
ನೀಮ್ ಟಾಯ್ಲೆಟ್ ಸೋಪ್
ವಿಷಹರಿ ಗುಣಗಳಿಗಾಗಿ ಪ್ರಸಿದ್ಧ--ಚರ್ಮವ್ಯಾಧಿ, ಗಾಯ, ಕ್ರಿಮಿ, ಇತ್ಯಾದಿ ಎದುರಿಸುವ ದಕ್ಕೆ ಅಮೂಲ್ಯ ರಕ್ಷಣಸಾಧನ.

KANTI
ಕಾಂತಿ ಟಾಯ್ಲೆಟ್ ಸೋಪ್
ಸರ್ವೋತ್ಕೃಷ್ಟ ತರಗತಿಯ ಟಾಯ್ಲೆಟ್ ಸಾಬೂನಿನ ವಿಶೇಷ ದೊಡ್ಡದಾದ ಬಿಲ್ಲೆ.

SANDALWOOD
ಸ್ಯಾಂಡಲ್ ವುಡ್
ಟಾಯ್ಲೆಟ್ ಸೋಪ್
ಶುದ್ಧ ಗಂಧ ಕಟ್ಟೆ ತೈಲಗಳಿಂದ ತಯಾರಿಸಲ್ಪಟ್ಟ ದು. ಚರ್ಮಕ್ಕೆ ಸುಖಕರವೂ, ಚೈತನ್ಯದಾಯಕವೂ ಆಗಿದೆ.

ದಿ ಸ್ವಸ್ತಿಕಾ ಆಯಿಲ್ ಮಿಲ್ಸ್, ಲಿಮಿಟೆಡ್,
ಬೊಂಬಯಿ, 15.

೧೯೩೫ನೇ ಇಸ್ವಿಯಲ್ಲಿ ವಿಮಾ ಉದ್ಯಮವನ್ನು ಪ್ರಾರಂಭಿಸಿ ವರ್ಷ ವರ್ಷಕ್ಕೆ ಅಭಿವೃದ್ಧಿಯನ್ನು ತೋರಿಸುತ್ತಾ ಈಗ ಜೀವವಿಮೆಯನ್ನೂ ಕೈಕೊಂಡು ಅಖಿಲ ಕರ್ನಾಟಕದಲ್ಲಿ ಪ್ರಸಿದ್ಧಿ ಪಡೆದ

ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಧಾರವಾಡ.

ಕರ್ನಾಟಕದ ಮುಂದಾಳುಗಳಾದ ದೇಶಭಕ್ತ-
ಶ್ರೀಯುತ ಎಸ್. ಕೆ. ಹೊಸಮನಿ, ಬಿ. ಎ., ಎಲ್.ಎಲ್. ಬಿ., ಎಂ. ಎಲ್. ಎ.,
ಮತ್ತು ಚೆಯರ್ಮ್ಯಾನ್
ಶ್ರೀಯುತ ವಿ: ವಿ. ಹಾಲಭಾವಿ, ಬಿ. ಎ., ಎಲ್.ಎಲ್. ಬಿ.,
ರಿಟಾಯರ್ಡ್ ಫಸ್ಟ್ ಕ್ಲಾಸ್ ಸಬ್ ಜಡ್ಜ್, ಧಾರವಾಡ
ಇವರ ನೇತೃತ್ವದ ಕೆಳಗೆ ನಡೆದಿರುವ ಮತ್ತು ಕರ್ನಾಟಕದ ವ್ಯಾಪಾರ ಉದ್ಯೋಗಗಳನ್ನು ಬೆಳಿಸಲಿಚ್ಛಿಸುವ ಸ್ವದೇಶೀ ಕಂಪೆನಿಯಲ್ಲಿಯೇ ವಿಮೆ ಇಳಿಸಿರಿ.

ಧಾರವಾಡ, ಬೆಳಗಾಂವ, ಬಿಜಾಪುರ, ಕಾರವಾರ, ಬಳ್ಳಾರಿ, ರಾಯಚೂರ ಮತ್ತು ಮೈಸೂರ ಸ್ಟೇಟಿನಲ್ಲಿಯೂ, ಅಭಿಮಾನದಿಂದ ಕೆಲಸ ಮಾಡುವ ಕುಶಲ ಏಜಂಟರು ಬೇಕಾಗಿದ್ದಾರೆ.

ವಿಶೇಷ ಮಾಹಿತಿಯನ್ನು ಸಮುಕ್ಷನು ಇಲ್ಲವೇ ಪತ್ರದ್ವಾರದಿಂದ ತಿಳಿಕೊಳ್ಳಬೇಕು.

The Manager,
The Swaraj Banking & Insurance Co., Ltd., Dharwar.

ESTD: 1906.

CANARA BANK
LIMITED.

HEAD OFFICE: MANGALORE.

Subscribed Capital	....	....	6,00,000.
Paid up Capital	....	....	3,33,000.
Reserves	....	....	4,50,000.
Deposits	....	....	61,92,000.
Working Capital	....	....	73,40,000.

OFFICES

Bombay-Fort, Bombay-Mandvi, Hubli, Calicut Cochin, Ernakulam, Alleppey, Bangalore, Chikmagalur, Mangalore-Bunder, Mangalore-City, Kasaragod, Puttur, Udipi, Karkala, Coondapoor, Ganguli, Bantval, Davangere & Moolky.

ALL KINDS OF BANKING BUSINESS UNDERTAKEN.

ಕಂಠೀರವ

(ವಸಂತತಿಲಕವೃತ್ತಮ್)

ನಿಂದಂತು ನೀತಿನಿಪುಣಾ ಯದಿ ವಾ ಸ್ತುವಂತು ।
ಲಕ್ಷ್ಮೀಸ್ಸಮಾವಿಶತು ಗಚ್ಛತು ವಾ ಯಥೇಷ್ಟಮ್ ॥
ಅದ್ಯೈವ ವಾ ಮರಣಮಸ್ತು ಯುಗಾಂತರೇ ವಾ ।
ನ್ಯಾಯ್ಯಾತ್ಪಥಃ ಪ್ರವಿಚಲಂತಿ ಪದಂ ನ ಧೀರಾಃ ॥

[ಭರ್ತೃಹರಿ.

(ಚೌಪದಿ)

ನಿಂದಿಸಲಿ ವಂದಿಸಲಿ, ಸಂದ ಧೀರರು ತಾ- ।
ವಿಂದಿರೆಯು ಹೊಂದಿರಲಿ ನಂದಿರಲಿ, ಮತ್ತಾ ॥
ಇಂದಿಗೊ ಯುಗಾಂತರಕೊ ಬಂದಿರಲಿ ಮರಣಂ, ।
ಹಿಂದಿಡರು ನ್ಯಾಯಪಥದಿಂದೊಂದು ಚರಣಂ! ॥

[M. N.

XVIII] ಮಂಗಳೂರು, ತಾರೀಕು ೧೭—೭—೧೯೩೬ [೩೨

೧೮೫೮ ಧಾತು ಸಂವತ್ಸರದ ಆಷಾಢ ಬ| ೧೪ ಶುಕ್ರವಾರ.

ಲಕ್ನೋ ಪ್ರಾಂತದಲ್ಲಿ ಮಹಾ ಪ್ರವಾಹ.

ಮನುಷ್ಯನಿಗೆ ಒದಗತಕ್ಕ ಮಹಾ ಸಂಕಷ್ಟಗಳಲ್ಲಿ ದೈವಿಕವೆಂದೂ, ಸ್ವಯಂಕೃತವೆಂದೂ ಎರಡು ಬಗೆಗಳಿರುವಲ್ಲಿ, ಅತಿವೃಷ್ಟಿ, ಅನಾವೃಷ್ಟಿ, ಕ್ಷಾಮಡಾಮರ, ಮಹಾಪ್ರವಾಹ, ಭೂಕಂಪ ಮೊದಲಾದುವೆಲ್ಲ ದೈವಿಕವೆಂದು ಪರಿಗಣಿಸಲ್ಪಟ್ಟಿರುವುವು. ಈ ವಿಪತ್ತಿಗೆ ಗುರಿಯಾಗುವವರು ಸಾಮಾನ್ಯವಾಗಿ ಒಬ್ಬರಲ್ಲ; ಇಬ್ಬರಲ್ಲ; ನೂರಾರು ಮಂದಿ; ಸಾವಿರಾರು ಮಂದಿ. ಆಗಳಿನ ಅವರ ದುರವಸ್ಥೆಯನ್ನು ಬಣ್ಣಿಸಲಳವಲ್ಲ. ಆಗಳಿನ ಆ ಶೋಚನೀಯಾವಸ್ಥೆಯಲ್ಲಿ ಬಡನನೇನು, ಶ್ರೀಮಂತನೇನು—ಎಲ್ಲರೂ ಒಂದೇ.

ಇಂತಹ ದೈವಿಕವಾದ ತಾಪತ್ರಯಗಳು ನಮ್ಮ ಭಾರತ ಭೂಮಿಯಲ್ಲಿ ಅಪರೂಪವಲ್ಲ. ಅದೇನು ನಮ್ಮ ಬಡ ಭಾರತದ ದೌರ್ಭಾಗ್ಯವೋ! ಅಂತೂ ಒಂದಲ್ಲ ಒಂದು ತಾಪತ್ರಯವು, ಒಂದಲ್ಲ ಒಂದು ಸಮಯದಲ್ಲಿ, ಒಂದಲ್ಲ ಒಂದು ಪ್ರದೇಶವನ್ನು ಪೀಡಿಸುತ್ತಿರುವುದು ಭಾರತದ ದುರದೃಷ್ಟವಾಗಿದೆ. ಪ್ರಕೃತಿಯ ಭೀಕರ ಸ್ವರೂಪದ ಕೋಪದ ಮುಂದೆ ಮನುಷ್ಯನೇನು ಮಾಡಿಯಾನು? ಅವನು ಕಿಡಿಗಣ್ಣಿನ ಆ ಪ್ರಕೃತಿಯ ಮುಂದೆ ನಿಲ್ಲಬಲ್ಲನೆ? ಸೆಣಸಬಲ್ಲನೇ? ಅನಂತ ಪ್ರಕೃತಿಯ ಆ ರುದ್ರಾವತಾರದ ಮುಂದೆ ಕ್ಷುದ್ರ ಮನುಷ್ಯನೆಷ್ಟರವನು? ಒಂದು ಹುಲ್ಲು ಕಡ್ಡಿಗೂ, ಕಸಕ್ಕೂ ಕಡೆಯಲ್ಲವೇ? ಮನುಷ್ಯನ ವಿಜ್ಞಾನದ ಶೋಧ, ಅವನ ವಿಜ್ಞಾನದ ಪಾಂಡಿತ್ಯದ ಹೆಮ್ಮೆ ಆಗ, ಅಂತಹ ವಿಪತ್ತಿನ ಸಮಯದಲ್ಲಿ, ಯಾವ ಕೆಲಸಕ್ಕೆ ಬಂದಾವು?

ಪ್ರಕೃತಿಯ ಆರ್ಭಟದ ಎದುರಲ್ಲಿ ಮನುಷ್ಯನೊಂದು ಹುಳುವೆಂಬುದು ಹಿಂದೆ ಅದೆಷ್ಟೋ ಬಾರಿ ನಮ್ಮ ಅನುಭವಕ್ಕೆ ಬಂದಿದೆ. ಕ್ವೆಟ್ಟದ ಭೂಕಂಪದ ಮಾತಂತಿರಲಿ; ಮನುಷ್ಯನ ನಿಸ್ಸಾಹಾಯ್ಯತೆಯ ಕುರಿತು, ಅತಿವೃಷ್ಟಿಯೂ, ಅದರ ಪರಿಣಾಮವಾದ ಮಹಾ ಪ್ರವಾಹವೂ ಆಗಾಗ ಅನೇಕ ನಿದರ್ಶನಗಳನ್ನು ಒದಗಿಸಿಕೊಟ್ಟಿವೆ. ಕೆಲವು ವರ್ಷಗಳ ಹಿಂದೆ, ನಮ್ಮ ಜಿಲ್ಲೆಯ ದೊಡ್ಡ ನೆರೆಯ ಕಷ್ಟಪರಂಪರೆಗಳನ್ನು ನಾವೇ ಅನುಭವಿಸಲಿಲ್ಲವೇ? ಅಂತಹ ನೆರೆಯ ಹಾವಳಿ ನಮಗೆ ಈಗ ತಪ್ಪಿದ್ದರೂ, ದೇಶದ ಇತರ ಕಡೆಗಳಲ್ಲಿ ತಪ್ಪಿಲ್ಲ. ಈ ಬಾರಿ ಅದರ ಹಾವಳಿ, ಅನರ್ಥ ಪರಂಪರೆ ಲಕ್ನೋ ಪ್ರಾಂತದಲ್ಲಿ ದೊಡ್ಡದಾಗಿ ಕೇಳಿಬರುತ್ತಿದೆ!

ಸಂಯುಕ್ತ ಪ್ರಾಂತವು, ಮುಖ್ಯವಾಗಿ, ಲಕ್ನೋವಿನ ಸರಹದ್ದು ಇಂದೀಗ ಪ್ರಕೃತಿಯ ಉಗ್ರ ಕೋಪಕ್ಕೆ ಆಹುತಿಯಾಗಿದೆ. ಕಳೆದ ೭-೮ ದಿನಗಳಿಂದಲೂ, ಅಲ್ಲಿ ಅತಿವೃಷ್ಟಿ. ಪರಿಣಾಮವಾಗಿ ಗೋಮತಿಯಲ್ಲಿಯೂ, ಅದರ ಉಪನದಿಗಳಲ್ಲಿಯೂ ಪ್ರವಾಹವು ಉಕ್ಕೇರಿ, ತಗ್ಗಾದ ಗ್ರಾಮಗಳೂ ಹೊಲಗಳೂ ನೀರಿನಲ್ಲಿ ಮುಳುಗಿ ಹೋಗಿವೆ. ಪ್ರವಾಹವು ಲಕ್ನೋ ನಗರವನ್ನೇ ಸ್ವಾಹಾ ಮಾಡುವಂತೆ ಬೆದರಿಸುತ್ತಿದೆ! ೧೯೩೫ನೇ ಇಸ್ವಿಯ ಬಳಿಕ, ಅಲ್ಲಿ ಹಾಕಿರತಕ್ಕ ಆ ಆಣೇಕಟ್ಟಿನಲ್ಲಿ ಆಗಲೇ ಎಷ್ಟೋ ಕಡೆ ಕೊರಕಲುಗಳು ಬಿದ್ದಿವೆ; ಕಡಿದುಹೋಗಿವೆ. ದೋಣಿಯಲ್ಲಿ ಬರುತ್ತಿದ್ದ ಆ ೧೪ ಮಂದಿ, ದೋಣಿ ಮಗುಚಿ, ಮೃತರಾದರೆಂಬ ಅದೊಂದು ಪ್ರಾಣನಷ್ಟದ ಹೊರತಾಗಿ, ಇನ್ನಾವ ಪ್ರಾಣನಷ್ಟದ ಸಮಾಚಾರವೂ ಕೇಳಬರುತ್ತಿಲ್ಲವಾದರೂ, ನೂರಾರು ಮನೆಗಳು, ಗುಡಿಸಲುಗಳು ನಿರ್ನಾಮವಾಗಿವೆ; ಸಾವಿರಾರು ದನಕರುಗಳು ತೇಲಿ ಹೋಗಿವೆ; ಆಸ್ತಿಪಾಸ್ತಿಗಳ ಧ್ವಂಸವು ಅತ್ಯಧಿಕವಾಗಿದೆ. ನೀರಿನಿಂದ ಸುತ್ತುವರಿಯಲ್ಪಟ್ಟ ಹಳ್ಳಿಗಳಿಂದ ಜನರನ್ನು ಈಚಿಗೆ ಸಾಗಿಸಿ ಕಾಪಾಡುವುದು ಮಳೆ ನಿಲ್ಲದೆ, ಪ್ರವಾಹವಿಳಿಯದೆ, ಕಷ್ಟಸಾಧ್ಯವಾದ ಕೆಲಸವಾಗಿದೆ. ಮಳೆ ಎಂದು ನಿಲ್ಲುವುದೋ, ಪ್ರವಾಹವೆಂದು ಕಡಿಮೆಯಾಗುವುದೋ, ಅಲ್ಲಿನ ತನಕ ಈ ಬಡಪಾಯಿಗಳ ಪಾಡೇನೋ ಯಾರೂ ಹೇಳಲಾರರು. ಎಲ್ಲವೂ ಭಗವಂತನ ಇಚ್ಛೆ. ಮನುಷ್ಯಪ್ರಯತ್ನಕ್ಕೆ ಮೀರಿದ ಸಂಗತಿ!

ಈ ವಿಪತ್ಕಾಲದಲ್ಲಿ ಮಹಾಜನರೂ, ಸರಕಾರದವರೂ ಕೈಲಾದ ಸಹಾಯವನ್ನು ನೀಡುವಲ್ಲಿ ಎಂದಿಗೂ ಉದಾಸೀನರಾಗಿರುವುದಿಲ್ಲ. ಸಾಧ್ಯವಿರುವ ಎಲ್ಲ ಸಹಾಯವನ್ನೂ ಅವರು ವಿಪತ್ತಿನಲ್ಲಿ ಬಿದ್ದವರಿಗೆ ಕೊಟ್ಟೇ ಕೊಡುತ್ತಿದ್ದಾರೆ. ಅಲ್ಲಿನ ಸರಕಾರವು, ಪೀಡಿತರ ರಕ್ಷಣೆಗಾಗಿ, ೧೦ ಸಾವಿರ ರೂಪಾಯಿಗಳನ್ನೂ ಲಕ್ನೋ ಕಮಿಶನರ ವಶವಿರಿಸಿದೆ. ಇನ್ನೇನು ಮಾಡಲಾದೀತು? ಈಗ ಕೆಲವು ವರ್ಷಗಳಿಂದ, ತಪ್ಪದೆ, ಆ ಗಂಗಾಮಾತೆಯ ಪ್ರಕೋಪಕ್ಕೆ ಪಾತ್ರರಾಗಿರುವ ಆ ಸಂಯುಕ್ತ ಪ್ರಾಂತದ ಬಡ ಪ್ರಜೆಗಳ ಈ ಕನಿಕರ ಸ್ಥಿತಿಯ, ಹೃದಯವಿದ್ರಾವಕವಾದ ಅತ್ಯಂತ ಶೋಚನೀಯಾವಸ್ಥೆಯಲ್ಲಿ ನಾವೂ ಪರಿತಪಿಸಿ, ಸಹಸಂತಾಪವನ್ನು ತೋರುವುದಲ್ಲದೆ, ಮತ್ತೇನನ್ನು ಮಾಡಲಾದೀತು?

ದಿ ಏಶಿಯನ್ ಎಶ್ಯೂರೆನ್ಸ್ ಕೊ., ಲಿಮಿಟೆಡ್.

ಮೇಲ್ಕಂಡ ವಿಮಾಸಂಸ್ಥೆಯವರು ದಯೆಯಿಟ್ಟು ನಮಗೆ ಕಳುಹಿಸಿಕೊಟ್ಟ ಗತವರ್ಷದ ವರದಿಯನ್ನೂ, ೬ನೆಯ ಪಂಚವಾರ್ಷಿಕ ಮೌಲ್ಯವೇತನದ ರಿಪೋರ್ಟನ್ನೂ ಅತ್ಯಾದರದಿಂದ ಸ್ವೀಕರಿಸಿ ಪರಿಶೀಲಿಸುವಲ್ಲಿ, ಸಿಲ್ವರ್ ಜುಬಿಲಿಯ ವರ್ಷವಾದ ಈ ವತ್ಸರವೂ ಅತ್ಯಂತ ಶುಭಪ್ರದವಾಗಿದ್ದು, ಸುಮಾರು ೭೬ ಲಕ್ಷ,೨೨೦ ರೂಪಾಯಿಗಳ ಬೆಲೆಯ ಪಾಲಿಸಿಗಳನ್ನು ಕಂಪೆನಿಗೆ ಸಂಪಾದಿಸಿ ಕೊಟ್ಟು ಪ್ರಶಂಸಾಪಾತ್ರವಾಗಿರುವುದಲ್ಲದೆ; ೧೯೩೫ರಲ್ಲಿದ್ದ ಪ್ರೀಮಿಯಮ್ಮಿನ ಉತ್ಪತ್ತಿ ರೂ. ೧೧,೧೬,೪೧-೫-೮ರಿಂದ ಗತ ವರ್ಷದಲ್ಲಿ ೧೩,೪೩,೧೩೭-೮-೬ಕ್ಕೂ, ೧೯೩೫ರಲ್ಲಿ ಇದ್ದ ಬಡ್ಡಿಯ ಉತ್ಪತ್ತಿ ರೂಪಾಯಿ ೧,೪೬,೭೬೧—೧೩—೧೦, ಗತ ವರ್ಷದಲ್ಲಿ ರೂ. ೨,೦೮,೧೧೬—೧೪—೬ಕ್ಕೂ ಏರಿರುವುದೂ; ಹಾಗೆಯೇ ವರ್ಷದ ಆದಿಯಲ್ಲಿದ್ದ ವಿಮಾಘಂಡು ರೂ. ೪೪,೦೨,೪೩೨—೧೨—೬ ವರ್ಷದ ಅಂತ್ಯದಲ್ಲಿ ರೂ. ೪೨,೯೮,೪೨೦-೧-೧೧ಕ್ಕೆ ಹೆಚ್ಚಿರುವುದೂ ಉತ್ಕೃಷ್ಟ ವಿಮಾಸಂಸ್ಥೆಗಳ ಅಭಿವೃದ್ಧಿಯನ್ನೇ ಸೂಚಿಸತಕ್ಕುವುಗಳಾಗಿವೆ. ಆದರಲ್ಲಿಯೂ ವರದಿಯಲ್ಲಿ ಕಾಣಿಸಲಾದ ಮೌಲ್ಯವೇತನದ ವರ್ಷಗಳಾದ ೧೯೨೫, ೨೮, ೩೨ನೇ ಇಸ್ವಿಗಳ ಹಲವು ಅಂಕೆಸಂಖ್ಯೆಗಳನ್ನು ಗತವರ್ಷದವುಗಳೊಂದಿಗೆ ಸರಿಹೋಲಿಸಿದಲ್ಲಿ, ಈ ಕಂಪೆನಿಯ ಅತಿಶಯವಾದ ಅಭಿವೃದ್ಧಿಕ್ರಮವಾಗಿ ಹೇಗೆ ಆಗಿದೆ ಎಂಬುದು ಸ್ಪಷ್ಟವಾಗುತ್ತಿದೆ.

ಮೌಲ್ಯವೇತನ ಕಾಲದಲ್ಲಿ, ಎಕ್ಕುಟ್ಟೆರಿಗಳಾದ ಶ್ರೀ. ಮುರಾತೆಯವರು ಕಂಪೆನಿಯ ಸರ್ವತೋಮುಖವಾದ ವೃದ್ಧಿಯನ್ನು ಕೊಂಡಾಡಿದ್ದಾರೆ. ಉಂಬಳಿ ವಿಮೆಗೆ ಕೊಡಲಾಗುವ ರೂ. ೧೫ರ ಬೋನಸಿನ ಪ್ರಾಮುಖ್ಯತೆ ಎಷ್ಟೆಂದು ವಿವರಿಸಿದ್ದಾರೆ. ಕಷ್ಟಗಳ ಅವಧಿಯಾದ ಆ ೨೫ ವರ್ಷಗಳಲ್ಲಿ, ಈ ಕಂಪೆನಿ ಪಡೆದಿರುವ ಆ ಉತ್ತಮಸ್ಥಾನಕ್ಕಾಗಿ ಅಭಿನಂದಿಸಿ, ಮುಂದಿನ ೨೫ ವರ್ಷಗಳಲ್ಲಿ, ಕಂಪೆನಿ ಇನ್ನಷ್ಟು ಬಲವಾಗಲಿ, ವಿಮಾಕಾರ್ಯಭಾರಗಳನ್ನು ಇಂಡಿಯದಲ್ಲಿ ಇತೋಪ್ಯತಿಶಯವಾಗಿ ಪ್ರಚಾರಗೊಳಿಸಲಿ ಎಂದು ಹಾಡಿ ಹರಸಿದ್ದಾರೆ.

ಭಾರತ ವಿಮಾಸಂಸ್ಥೆಗಳಲ್ಲಿ ಉತ್ತಮ ಸ್ಥಾನಮಾನಗಳನ್ನು ಪಡೆದು, ಸುವ್ಯವಸ್ಥಿತವಾದ ಆಡಳಿತೆ, ಸಮರ್ಥರಾದ ಡೈರೆಕ್ಟರ ಮಂಡಲದಿಂದ ಕೂಡಿರುವ ಈ ಸಂಸ್ಥೆಯ ಶ್ರೇಯೋಭಿವೃದ್ಧಿಯನ್ನು ಸರ್ವಥಾ ಹಾರೈಸುತ್ತ, ನಮ್ಮ ಜಿಲ್ಲೆಯಲ್ಲಿ ಈ ಸಂಸ್ಥೆಯ ಪ್ರಾಮುಖ್ಯ ಸೂತ್ರಚಾಲಕರಾದ ಶ್ರೀ. ಪುತ್ತನ್ ರವರು, ನಮ್ಮನವರಿಂದ ಸ್ವಹಸ್ತ ಪರಹಸ್ತಗಳ ಮೂಲಕ ಪ್ರೋತ್ಸಾಹಿಸಲ್ಪಟ್ಟು, ಅವರ ವಿಚಕ್ಷಣತೆಯ ಕಾರ್ಯದಕ್ಷತೆಯು ಇನ್ನಷ್ಟು ಪ್ರಕಾಶಕ್ಕೆ ಬರುವಂತಾಗಲೆಂದು ನಾವು ಮನಃಪೂರ್ವಕವಾಗಿ ಬಯಸುತ್ತೇವೆ.

ಪುನರ್ಜನ್ಮ ಸೂಚನೆಗೆ ಸ್ವಪ್ನವೇ ದೃಷ್ಟಾಂತ!

ಪುನರ್ಜನ್ಮವುಂಟೆಂಬುದನ್ನು ವಿಜ್ಞಾನ ಶಾಸ್ತ್ರದಲ್ಲಿ ವಿಶ್ವಾಸವುಳ್ಳ ಈಗಿನ ಜನರೆಂದಿಗೂ ನಂಬುವುದಿಲ್ಲ; ಅದು ಸುಳ್ಳೆನ್ನುತ್ತಾರೆ. ಆದರೂ ಸಾಮಾನ್ಯ ಜನರು ವಿಶ್ವಾಸವಿಡಬಹುದಾದ ಕೆಲಕೆಲವು ಪುನರ್ಜನ್ಮದ ದೃಷ್ಟಾಂತಗಳು ಆಗಾಗ ನಮಗೆ ದೊರಕದೆ ಹೋಗುವುದಿಲ್ಲ. ಅಂತಹದೊಂದು ದೃಷ್ಟಾಂತವು ಇಲ್ಲಿದೆ!

ದಿಘಾಪಾಟಿಯದ ರಾಣಿಯವರಿಗೆ ಈಚಿಗೆ ಒಂದು ಕನಸು ಬಿದ್ದಿತು. ಅದರಲ್ಲಿ ಬೋಗ್ರದ ಪ್ಲೀಡರರಾದ ಬಾಬು ಜ್ಞಾನೇಂದ್ರನಾಥರವರ ಪತ್ನಿ ಈ ರಾಣಿಯವರಿಗೆ ಮಗಳೆಂಬಂತೆ ತೋರಿಬಂದಿತು. ಸುಮಾರು ೩೫ ವರ್ಷಗಳ ಹಿಂದೆ, ಇದೇ ರಾಣಿಯವರು ತಮ್ಮ ೩ ವರ್ಷ ಪ್ರಾಯದ ಹೆಣ್ಣು ಮಗುವನ್ನು ಕಳೆದುಕೊಂಡವರಾಗಿದ್ದು, ಅನಂತರ ಆ ಮಗು, ಬೋಗ್ರಾ ಪ್ರಾಂತದ ಪಾಂಚಬೀಬೀಯು ಜಮೀನ್ದಾರ ಬಾಬೂ ಕುಮುದನಾಥ ರ್ಯಾಯವರ ಮಗಳಾಗಿ ಹುಟ್ಟಿದಂತೆಯೂ, ಬಳಿಕ ಅದೇ ಆ ಹೆಣ್ಣು ಮಗಳನ್ನು ಆ ಜ್ಞಾನೇಂದ್ರನಾಥರಿಗೆ ಕೊಟ್ಟು ಮದುವೆ ಮಾಡಿದಂತೆಯೂ ಸ್ವಪ್ನವು ರಾಣಿಯವರಿಗೆ ಸೂಚಿಸಿತು. ಹಾಗೆಯೇ ಅದೇ ರಾತ್ರಿಯಲ್ಲಿಯೇ, ಅದೇ ಸಮಯದಲ್ಲಿಯೇ ಜ್ಞಾನೇಂದ್ರನಾಥರ ಪತ್ನಿಗೂ, ಆಕೆಯ ತಾಯಿ ಹಿಂದಿನ ಜನ್ಮದಲ್ಲಿ ದಿಘಾಪಾಟಿಯದ ರಾಣಿಯೇ ಎಂದೂ ಸ್ವಪ್ನವಾಯಿತು. ಈ ವಿಚಿತ್ರ ಸಂಗತಿಯು ನಡೆದ ಬಳಿಕ, ಆ ಪ್ಲೀಡರರ ಪತ್ನಿಯನ್ನು ರಾಣಿಯವರು ಅರಮನೆಗೆ ಕರೆಯಿಸಿಕೊಂಡು ರಾಣಿಯವರು ಆ ತಾಯಿ-ಮಗಳ ಸಂಬಂಧವನ್ನು ಸ್ಥಾಪಿಸಿಕೊಂಡುದಲ್ಲದೆ, ಮಗಳಿಗೆ ಅನೇಕ ಬೆಲೆ ಬಾಳುವ ಉಡುಗೊರೆ, ಬಳುವಳಿಗಳನ್ನೂ ಉಚಿತವಾಗಿ ದಯೆಪಾಲಿಸಿ ಮನ್ನಿಸಿದರು.

ಮಂಗಳೂರು.

ಸ್ಥಳೀಯ ಶ್ರೀ ಕೃಷ್ಣ ಸಿನೇಮ ಮಂದಿರದಲ್ಲಿ ಇದೇ ತಾ. ೧೫ರಿಂದ 'ಬೊಂಬ್ಬಾಕಿ ಸೇಟಾನ' ಎಂಬ ಸಾಮಾಜಿಕ ಚಿತ್ರ ಪ್ರದರ್ಶನವಾಗುತ್ತಿರುವುದು. ಆ ಮೇಲೆ 'ಫ್ರೇಂಕಿಂಸ್ಟನ್' ಭೂತದ ಪಾತ್ರ ವಹಿಸಿ ಜಗತ್ಪ್ರಸಿದ್ಧನಾದ ಬೋರಿಸ್ ಕಾರ್ಲಫನು ಅಭಿನಯಿಸಿದ 'ಬ್ರೈಡ್ ಓಫ್ ಫ್ರೇಂಕಿನ್‌ಸ್ಟನ್' ಎಂಬ ರೋಮಾಂಚಕ ಚಿತ್ರವು ತೋರಿಸಲ್ಪಡುವುದು. ಈ ಚಿತ್ರದಲ್ಲಿ ಕಾಲೋಫನು ರಾಕ್ಷಸನ ರೂಪದಿಂದ ಭೀಕರತೆಯ ಪರಮಾವಧಿಯನ್ನು ಪ್ರದರ್ಶಿಸಿ, ಪ್ರೇಕ್ಷಕರ ಹೃದಯ ಬಿರಿಯುವಂತೆ ಮಾಡುವನು.

ನಮ್ಮ ದಿವಂಗತ ಸಾರ್ವಭೌಮ ಐದನೇ ಜಾರ್ಜ್ ಚಕ್ರವರ್ತಿಯವರ ಸ್ಮಾರಕ ನಿಧಿಯ ಸಹಾಯಾರ್ಥವಾಗಿ ಆಗೋಸ್ತು ತಾ. ೧೫ಕ್ಕೆ ಶ್ರೀ ಕೃಷ್ಣ ಸಿನೇಮ ಮಂದಿರದಲ್ಲಿ ಒಂದೇ ಒಂದು ದಿನ 'ದಿ ಕೇಟ್ ಎಂಡ್ ದಿ ಫಿಡ್ಲ್' ಎಂಬ ನಾಮಾಂಕಿತ ಮೆಟ್ರೋ ಗೋಲ್ಡ್‌ವಿನ್ ಮೇಯರ್‌ರವರ ಪ್ರೇಮಗಾನಮಯ ಕಥಾ ಚಿತ್ರವು ಪ್ರದರ್ಶಿಸಲ್ಪಡುವುದು. ರಾಮನ್ ನೊವೆರೊ ಹುತ್ತು ಜಿನೆಟ್ ಮೆಕ್ಡನೋಲ್ಡ್ ಇವರೇ ನಟರು. ಸ್ಮಾರಕ ನಿಧಿಯ ಕಮಿಟಿಯ ಪರವಾಗಿ, ಅದರ ಅಧ್ಯಕ್ಷರಾದ ನಮ್ಮ ಜಿಲ್ಲಾ ಕಲೆಕ್ಟರ್ ಮಾನ್ಯ ಖಾನ್ ಬಹದ್ದೂರ್ ಮಹಮ್ಮದ್ ಹುಮಾಯೂನ್, ಬಿ. ಎ. ಇವರ ಸಾನ್ನಿಧ್ಯದಲ್ಲಿ ತೋರಿಸಲ್ಪಡುವ ಈ ಚಿತ್ರವನ್ನು ಸರ್ವರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಇದೇ ತಾ. ೧೫ನೇ ರಾತ್ರಿ ಬರ್ಕೆ ಎಂಬಲ್ಲಿ, ವಿಪರೀತ ಮಳೆಗಾಳಿಗಳ ದೆಸೆಯಿಂದ ಒಂದು ಮನೆಯ ಗೋಡೆ ಬಿದ್ದು ಒಳಗೆ ಮಲಗಿದ್ದ ಒಬ್ಬ ಮುದುಕಿಯು ಮೃತಪಟ್ಟಳು. ಅಲ್ಲದೆ ಅದೇ ಕೊಟಡಿಯಲ್ಲಿ ಮಲಗಿದ್ದ ಆಕೆಯ ಮಗನಿಗೆ ಜೋರಾದ ಪೆಟ್ಟು ತಗಲಿ, ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿರುವನು.

ನಮ್ಮ ಮುನಿಸಿಪಲ್ ಸಭೆಯ ಮುಂದಿನ ವಿಾಟಿಂಗು, ಅದರ ಆಫೀಸಿನಲ್ಲಿ, ಇದೇ ಬರುವ ತಾ. ೧೭ನೇ ಶುಕ್ರವಾರ ಸಂಜೆ ಗಂಟೆ ೫॥ಗೆ ಜರುಗಲಿರುವುದು.

ಕಾರ್ಕಳ ತಾಲೂಕಿನ ಹೆಬ್ರಿ ಗ್ರಾಮಕ್ಕೆ ಆಸು ಪಾಸಿನಲ್ಲಿರುವ ರಿಜರ್ವ್ ಕಾಡುಗಳಲ್ಲಿ, ಫಾರೆಸ್ಟ್ ರೇಂಜರಿನ ಸಮಕ್ಷಮ ಹುಲಿ, ಕತ್ತೆಕಿರುಬ, ಕಾಡುಹಂದಿ ಇವುಗಳನ್ನು ಬರುವ ಆಗೋಸ್ತು ತಾ. ೧೦ರಿಂದ ೧೬ನೇ ತಾರೀಕಿನ ವರೆಗೆ ಬೇಟೆಯಾಡಬಹುದೆಂದು ನಮ್ಮ ಜಿಲ್ಲಾ ಕಲೆಕ್ಟರರು ಎಲ್ಲಾ ಗ್ರಾಮಸ್ಥರಿಗೂ ಹುಕುಂ ಕೊಟ್ಟಿರುತ್ತಾರೆ. ಕಾರ್ಕಳ ತಹಶೀಲ್ದಾರರೂ, ಫಾ. ರೇ. ಆಫೀಸರರೂ, ಶಿಕಾರಿ ಪಾರ್ಟಿಗಳನ್ನು ಏರ್ಪಡಿಸುವಂತೆ ಕಲೆಕ್ಟರರು ನಿರೀಕ್ಷಿಸುತ್ತಿದ್ದಾರೆ. ಬೇಟೆಯಲ್ಲಿ ಸಾಹಸ ತೋರಿದವರಿಗೆ ಹಿಂದಿನ ಬೇಟೆಯಲ್ಲಿ ನಮೂದಿಸಿದ ಬಹುಮಾನಗಳೇ ಇವೆ.

ಬೊಂಬಾಯಿ ಅಧಿಪತ್ಯದ ಕೆಲವು ಕಡೆಗಳ ಹಾಗೂ ಮೈಸೂರು ಸೀಮೆಯ ಕೆಲವು ಕಡೆಗಳ ಟಪ್ಪಾಲುಗಳು ಸುತ್ತು ಬಳಸುವ ಜೋಲಾರು ಪೇಟೆಯ ಮಾರ್ಗದಿಂದ ಮಂಗಳೂರಿಗೆ ಸಾಗುವ ಕಾರಣ ಅದರಿಂದ ಮೈಲಿನ ಓಡಾಟಕ್ಕೆ ವಿಶೇಷ ವಿಳಂಬವಾಗುವುದೆಂದು ಧಾರವಾಡದ ಶ್ರೀ. ಎಸ್. ಕೆ. ಹೊಸಮನಿ, ಎಂ. ಎಲ್. ಎ. ಇವರು ನಮ್ಮ ಪೋಸ್ಟ್ ಮತ್ತು ಟೆಲಿಗ್ರಾಫ್ ಶಾಖೆಗಳ ಡೈರೆಕ್ಟರರಾದ ಶ್ರೀ. ಬೇವೂರರಲ್ಲಿ ಅರಿಕೆ ಮಾಡಿಕೊಂಡದ್ದರ ಮೇಲೆ, ಶ್ರೀ. ಬೇವೂರರು ಈ ಟಪ್ಪಾಲುಗಳು ಇನ್ನು ಮುಂದೆ ಕಡೂರು—ಬಂಟ್ವಾಳ ಮತ್ತೂ ಮಡಿಕೇರಿ—ಮಂಗಳೂರು ಮೋಟರ್ ಮೈಲ್ ಸರ್ವೀಸುಗಳ ಮೂಲಕ ಮಂಗಳೂರು ಸೇರುವಂತೆ ಏರ್ಪಡಿಸಿರುವುದಾಗಿ ತಿಳಿದುಬರುತ್ತದೆ. ಇದರಿಂದ ತುಂಬ ಅನುಕೂಲವಾದಂತಾಯಿತು.

ಡಾ. ಕೆ. ಗಿರಿಧರರಾಯರು ಇಲ್ಲಿಯ ವಾರ್ಡ್ ನಂಬ್ರ ೧೯ರ ಮುನಿಸಿಪಲ್ ಕೌನ್ಸಿಲರಾಗಿ ಪ್ರತಿಸ್ಪರ್ಧಿಗಳಿಲ್ಲದೆ ಆರಿಸಲ್ಪಟ್ಟಿರುವರು. ಅವರಿಗೆ 'ಕಂಠೀರವ'ನ ಅಭಿನಂದನೆಗಳು!

ವಿದೇಶ

ಸರ್ ಎಸ್. ರಾಧಾಕೃಷ್ಣನ್‌ರವರು ಜಿನೇವಾದಲ್ಲಿ ಜನಾಂಗ ಸಂಘ ಶಾಖೆಗಳಲ್ಲೊಂದರಲ್ಲಿ ಭಾಷಣ ಮಾಡುತ್ತ ಶಿಕ್ಷಣದ ಸರಿಯಾದ ರೀತಿ ಯಾವುದೆಂಬುದರ ಕುರಿತು ವಿವರಿಸಿದರು.

ಚೀನದಲ್ಲಿ ಸಿವಿಲ್ ಯುದ್ಧವು ಆರಂಭವಾಗಿದೆ.

ಲುಕಾನ್ಗೋ ಸಂಧಿ ಇದೇ ಜುಲ್ಯಾ ೨೫ಕ್ಕೆ ನಡೆಯದೆ, ಮುಂದೆ ನಡೆಯುವಂತೆ ಏರ್ಪಾಡಾಗುತ್ತದೆ. ಇದಕ್ಕೆ ಇಟೆಲಿ ದಯೆಮಾಡಿಸಬೇಕಾಗಿದ್ದರೆ, ಅದರ ಕೆಲವು ಷರತ್ತುಗಳನ್ನು ಪೂರೈಸಿಕೊಡಬೇಕಾಗಿದೆ.

ಪ್ಯಾಲಸ್ತೈನಿನಲ್ಲಿ ಬ್ರಿಟಿಷ್ ಸೈನಿಕರು ಭಯೋತ್ಪಾದಕರ ಮೇಲೆ ಗುಂಡು ಹಾರಿಸಿ ೭ ಮಂದಿ ಅರಬರನ್ನು ಕೊಂದಿರುವರು.

ಮೆಡ್ರಿಡಿನಲ್ಲಿ ಮುಷ್ಕರಗಾರರ ಹಾವಳಿಯು ಇನ್ನೂ ಕಡಿಮೆಯಾಗಿಲ್ಲ. ಲೆಫ್ಟಿನೆಂಟ್ ಜೋಸ್ ಡಿ. ಕೆಸ್ಟೀಲೋ ಎಂಬವರನ್ನು ದಂಗೆಗಾರರು ಗುಂಡು ಹೊಡೆದು ಕೊಂದರು. ಪ್ರತೀಕಾರವೇ ಆಲ್ಲಿನ ಕನಸರ್ವೇಟಿನ್ ರಾಜನೀತಿಜ್ಞರಲ್ಲಿ ಮುಖಂಡಲೆನ್ನಿಸಿದ ಕಾಲ್ವೊ ಸೊಟೆಲೊ ಎಂಬವರನ್ನೂ ಯಾರೋ ಖೂನಿ ಮಾಡಿ ಬಿಸಾಡಿದ್ದಾರೆ. ಈ ಸಂಬಂಧ ೧೩೫ ಮಂದಿ ಫೆಸಿಯಿಸ್ಟರ ಮತ್ತೂ ಕೆಲವು ಮಂದಿ ಪೋಲೀಸ್ ಹಾಗೂ ಮಿಲಿಟರಿ ಅಧಿಕಾರಿಗಳ ಕೈದಾಗಿದೆ.

ಅಮೇರಿಕದಲ್ಲಿ ಕಳೆದ ೧೧ ದಿವಸಗಳಲ್ಲಿ ಉಷ್ಣಾಧಿಕ್ಯದಿಂದ ಮೃತರಾದವರ ಸಂಖ್ಯೆ ಒಟ್ಟಿಗೆ ೧೪೩೧; ಬೆಳೆಗೆ ಸಂಭವಿಸಿದ ನಷ್ಟ ೩೦೦,೦೦೦,೦೦೦ ಡಾಲರು. ಒಂದೆರಡು ಹಳ್ಳಿಗಳಲ್ಲಿ ಹೆಣಗಳು ತುಂಬಿ ತೆಗೆಯುವವರೇ ದಿಕ್ಕಿಲ್ಲವಾಗಿದ್ದಿತಂತೆ.

ಹೌಸ್ ಆಫ್ ಲಾರ್ಡ್ಸ್‌ನಲ್ಲಿ ಯಾವ ಸುಧಾರಣೆಗಳನ್ನು ಮಾಡಲೂ ಈಗ ಸಾಧ್ಯವಿಲ್ಲವೆಂದು ಪ್ರಧಾನರು ತಿಳಿಸಿರುವರು.

ಮೇಜರ್ ರೌಲ್ಯಾಂಡ್‌ಸನ್— ಈತನಿಂದ ಸಾಲಗಾರರಿಗೆ ೬೮ ಸಾವಿರ ಪೌನು ಸಲ್ಲಬೇಕಾಗಿದ್ದಿತು. ಈತನು ಆತ್ಮಹತ್ಯೆ ಮಾಡಿಕೊಂಡ. ಈತನಿಗೆ ಇನ್ಶೂರೆನ್ಸ್ ಪಾಲಿಸಿಗಳಿದ್ದುವು. ಇನ್ಶೂರೆನ್ಸ್ ಕಂಪೆನಿ, 'ಈತನು ಬುದ್ಧಿಪೂರ್ವಕವಾಗಿ ಕೊಲೆ ಮಾಡಿಕೊಂಡುದು; ಹಣವೀತನಿಗೆ ಸಲ್ಲತಕ್ಕುದಲ್ಲ' ಎಂದು ಸಾಧಿಸಿತು. ಆದರೆ ಲಂಡನಿನ ಹೈಕೋರ್ಟು ಆ ಕಂಪೆನಿಗೆ 'ಆ ೪೨ ಸಾವಿರ ಪೌಂಡು ನೀವು ತೆತ್ತು ಬಿಡಿ' ಎಂದಿತು!

ಆಸ್ಟ್ರಿಯಾ ಮತ್ತೂ ಜರ್ಮನಿಗಳೊಳಗೆ ಒಂದು ಕರಾರಾಗಿದೆ. ಇದರಿಂದ ಯುರೋಪಿನ ರಾಷ್ಟ್ರಗಳಲ್ಲಿ ಆಲ್ಲೋಲೆಕಲ್ಲೋಲವಾಗಿದೆ. ಇಟೆಲಿಗೆ ಇದರಿಂದ ಪರಮಾನಂದ! ಫ್ರಾನ್ಸಿಗೆ ಪರಮ ದುಃಖ! ಮುಂದೆ ಇಟೆಲಿಗೂ ಜರ್ಮನಿಗೂ ಒಂದು ಸಂಧಿಯಾಗಬಹುದೇ?

ನಾನ್‌ಕಿಂಗ್ ಪ್ರಾಂತದ ಒಳಿ ಸರಕಾರದ ಸೈನ್ಯಗಳಿಗೂ, ದಕ್ಷಿಣ ಭಾಗದ ಒಂದು ಸೈನ್ಯಕ್ಕೂ ತೀವ್ರವಾದ ಯುದ್ಧವಾಗುತ್ತಿದೆ.

ಪ್ಯಾಲಸ್ತೈನಿಗೆ ಮೂರು ತುಕ್ಕಡಿ ಬ್ರಿಟಿಷರ ಸೈನ್ಯಗಳನ್ನು ಕಳುಹಿಸಲಾಗಿದೆ. ಇನ್ನೂ ಹೆಚ್ಚಿನ ಸೈನ್ಯಗಳನ್ನು ತಯಾರಿಸಿ ನಿಲ್ಲಿಸಿದೆ.

ಕಳೆದ ಫೆಬ್ರವರಿಯಲ್ಲಿ ಜಪಾನಿನಲ್ಲಿ ನಡೆದ ಮಿಲಿಟರಿ ದಂಗೆಯಲ್ಲಿ ಮರಣದಂಡನೆಗೆ ಗುರಿಯಾಗಿದ್ದ ೧೫ ಮಂದಿಯನ್ನು, ಜಪಾನ್ ಸರಕಾರವು, ಗುಂಡು ಹೊಡೆಯಿಸಿ, ವಧಿಸಿತು.

ಬರ್ಲಿನಿನಲ್ಲಿ ಹಾವನ್ನು ತಿನ್ನುವ ಒಂದು ಇಲಿಯನ್ನು ಅಲ್ಲಿನ ತಮಾಷಿ ಬಂಗಲೆಗೆ ತಂದಿರಿಸಿದ್ದಾರೆ. ಇದರ ಉದ್ದ ೬ ಅಡಿ. ಇದು ವಿಷವುಳ್ಳ ಪ್ರಾಣಿಯಲ್ಲ. ಆದರೂ ಎಂತಹ ವಿಷಭರಿತವಾದ ಹಾವನ್ನಾದರೂ ಇದು ಕೊಂದು, ತಿಂದು ಜೀರ್ಣಿಸಿಕೊಳ್ಳಬಹುದು.

ನಮ್ಮ ದಿವಂಗತ ಸಾರ್ವಭೌಮರ ಸ್ಮಾರಕನಿಧಿಗೆ ರಗ್ಬಿ ಫುಟ್‌ಬಾಲ್ ಸಂಘದವರು ೫ ಸಾವಿರ ಪೌಂಡು ವಂತಿಗೆ ಕೊಟ್ಟಿದ್ದಾರೆ.

ಪ್ಯಾಲಸ್ತೈನಿನಲ್ಲಿ ದಂಗೆಗಾರರು ಜೆರುಸಲೇಮಿನ ಪಶ್ಚಿಮದ ಒಂದು ಮುಖ್ಯ ರೈಲ್ವೇ ಲೈನನ್ನು ನಾಶ ಮಾಡಿ, ಮತ್ತೊಂದು ಕಡೆ ಒಂದು ಸೇತುವೆಯನ್ನೂ ಕೆಡವಿದರು. ಇತ್ತ ದಂಗೆಗಾರರಿಗೆ ಆಶ್ರಯವಿತ್ತ ಒಂದು ಗ್ರಾಮದ ೪ ಮನೆಗಳನ್ನು ಡಾಯ್ನಮೈಟ್ ಹಾಕಿ ಹಾರಿಸಲಾಯಿತು.

ಮಕ್ಕಳನ್ನು ಅಪಹರಿಸುವವರಿಗೆ ಜರ್ಮನಿಯಲ್ಲಿ ಇನ್ನು ಮುಂದೆ ಮರಣ ದಂಡನೆ.

ಜಾಹಿರಿಯ ಗಣಿಗಳನ್ನು ಸಂದರ್ಶಿಸಲು ಚೀಫ್ ಮೈನಿಂಗ್ ಇಂಜಿನಿಯರ್ ಮಿ. ಜೆ. ಸಿ. ಕನ್ನಿಂಗ್‌ಹ್ಯಾಂರವರೂ, ಗಣಿಗಳ ಇನ್ಸ್‌ಪೆಕ್ಟರ್ ಮಿ. ಎ. ಜೆ. ಲ್ಯಾಂಗ್‌ರವರೂ, ಮ್ಯಾನೇಜರ್ ಶ್ರೀ. ಎಲ್. ಎ. ಬ್ಯಾನರ್ಜಿಯವರೂ ಕಂಟ್ರಾಕ್ಟರ್ ಶ್ರೀ. ಜೈರಾಮ್ ಸೇತ್ನಾರವರೂ, ಓವರ್‌ಮ್ಯಾನ್ ಶ್ರೀ. ಕೆ. ಪಿ. ದಾಸರವರೂ ಹೀಗೆ ೫ ಮಂದಿ ತೆರಳಿದ್ದಾಗ, ಗಣಿಯಲ್ಲಿ ಧಕ್ಕನೆ ಸಿಡಿತವುಂಟಾಗಿ, ಎಲ್ಲರಿಗೂ ವಿಪರೀತ ಪೆಟ್ಟಾಯಿತು. ಮೊದಲಿನ ಮೂವರು ಆಸ್ಪತ್ರೆಯಲ್ಲಿ ಮೃತಪಟ್ಟರು. ಕೊನೆಯವರಿಬ್ಬರ ಪರಿಸ್ಥಿತಿ ಸಮಾಧಾನಕರವಾಗಿದೆ.

ಹಿಂದೂದೇಶ

ಕೊಲೊಂಬೊದಲ್ಲಿ ಗುಂಡಿನ ಏಟಿಗೆ ಗುರಿಯಾಗಿದ್ದ ೨೫ ವರ್ಷದ ತರುಣರಾದ ಪೊಲೀಸ್ ಸಬ್ ಇನಸ್ಪೆಕ್ಟರ್ ಮಿ. ಫೋಸ್ಟರರವರು ಆಸ್ಪತ್ರೆಯಲ್ಲಿ ಮೃತರಾದರು. ಈ ಸಂಬಂಧ ೩ ಮಂದಿಯು ಕೈದಾಗಿದೆ.

ದಿಲ್ಲಿಯಲ್ಲಿ ಸುಮಾರು ೮,೫೫೫ ಮಂದಿ ಕಲ್ಲು ಕಡಿಯುವವರು ತಮಗೆ ಸಂಬಳ ಹೆಚ್ಚಿಸಬೇಕೆಂದು ಕಾರ್ಯತ್ಯಾಗ ಮಾಡಿದ್ದಾರೆ. ಇವರಿಂದ ದೊಡ್ಡ ದೊಡ್ಡ ಕಂಟ್ರಾಕ್ಟರರು ಬಹಳ ತೊಂದರೆಗೆ ಒಳಗಾಗಿದ್ದಾರೆ.

'ಆರಸರ ಮೇಲೆ ಯುದ್ಧ ಮಾಡಲು ಹವಣಿಸಿದರು' ಎಂಬ ರಾಜದ್ರೋಹದ ಆರೋಪಕ್ಕೆ ಒಳಗಾಗಿ ೩ ವರ್ಷಗಳ ಕಠಿನ ದಂಡನೆಗೊಳಗಾಗಿದ್ದ ಅಜಿತ್ ಕುಮಾರ ಬೋಸ್ ಎಂಬಾತನನ್ನು ಕಲ್ಕತ್ತಾ ಹೈ ಕೋರ್ಟಿನವರು ನಿರಪರಾಧಿ ಎಂದು ಬಿಡುಗಡೆ ಮಾಡಿದರು.

ಸಿಂಧ್ ದೇಶದ ಹೈದರಾಬಾದ್ ನಗರದಲ್ಲಿ ಒಂದು ಆಶ್ಚರ್ಯಕರವಾದ ಕಳವು! ಆಲ್ಲಿನ ಒಂದು ಹಿಟ್ಟಿನ ಕಾರ್ಖಾನೆಯಲ್ಲಿ, ಬೆಳಗಿನ ಹೊತ್ತು, ಒಂದು ದೊಡ್ಡ ಕಬ್ಬಿಣದ ಟ್ರಿಜರಿಯನ್ನು, ಗೋಡೆಯಲ್ಲಿ ತೂತು ತೆಗೆದು, ಹೊರಗೆ ತಂದು ಅದನ್ನು ಒಂದು ಮೈಲಿ ದೂರದ ವರೆಗೂ ಸಾಗಿಸಿಕೊಂಡು ಹೋಗಿ ಆಲ್ಲಿ ಅದರ ಬಾಗಿಲೊಡೆದು, ಅದರೊಳಗಿದ್ದ ನಗದು, ಆಭರಣ ಮುಂತಾದುವನ್ನೆಲ್ಲ ಜಾರಿಸಿದ್ದಾರೆ— ಈ ಹಗಲುಕಳ್ಳರು ಯಾರೆಂದು ಈಗ ಪತ್ತೆಗೆ ಆರಂಭವಾಗಿದೆ.

ಪ್ರತ್ಯೇಕಿಸಲ್ಪಟ್ಟ ಬರ್ಮಾವು ಇಂಡಿಯದೊಂದಿಗೂ, ಜಪಾನಿನೊಂದಿಗೂ ಪ್ರತ್ಯೇಕವಾದ ವ್ಯಾಪಾರ ಸಂಧಿಗಳನ್ನು ಮಾಡಿಕೊಳ್ಳುವ ಆಲೋಚನೆಯಲ್ಲಿದೆ.

ಪಂಡಿತ ಜವಹರಲಾಲರ ಗಂಟಲಿನ ಆಸ್ವಸ್ಥತೆಯು ಇನ್ನೂ ಪರಿಹಾರವಾಗದ ಕಾರಣ ಅವರ ಕರಾಚಿಯ ಕಾರ್ಯಕ್ರಮವು ಸಂಕ್ಷೇಪಿಸಲ್ಪಟ್ಟಿದೆ.

ಬೀರಾರಿನ ಮಲಕಾಪುರದ ಸಮೀಪ ಒಂದು ರೈಲ್ವೇ ಅವಘಡವು ಸಂಭವಿಸಿ, ಒಬ್ಬ ರೈಲ್ವೆ ವರ್ಕ್ಸ್ ಇನಸ್ಪೆಕ್ಟರರೂ, ಮೂರು ಮಂದಿ ಕೆಲಸಗಾರರೂ ಮೃತರಾದರು. ಮತ್ತೆ ೬ ಮಂದಿಗೆ ಗಾಯಗಳಾಗಿವೆ.

ಬೆರಲಿಯಲ್ಲಿ ಆ ಜಿಲ್ಲಾ ಬೋರ್ಡಿನ ಅಧ್ಯಕ್ಷರ ಚುನಾವಣೆಯು, ಪೋಲೀಸರ ಕಾವಲಿನ ಸಮೇತ, ನಡೆಯಿತು. ಪಂಡಿತ ದ್ವಾರಕಾಪ್ರಸಾದವರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು.

ಲಾಹೋರಿನಲ್ಲಿ ಒಂದು ಮುಸ್ಲಿಮರ ಮೀಟಿಂಗು. ಮೀಟಿಂಗಿನಲ್ಲಿ ಒಬ್ಬಾನೊಬ್ಬ ಮುಸ್ಲಿಂ ಮುಖಂಡರು ಆಕ್ಷೇಪಕರವಾದ ರೀತಿಯಲ್ಲಿ ಮಾತಾಡಿದರೆಂದು ಜಗಳವೆದ್ದು, ಗಲಭೆಯಾಗಿ, ಪೋಲೀಸರು ಮೃದುವಾಗಿ ಲಾತೀ ಏಟಿನ ರುಚಿಯನ್ನು ತೋರಿಸಬೇಕಾದ ಸಂದರ್ಭವೊದಗಿತು. ಒಬ್ಬ ಸಬ್ ಇನಸ್ಪೆಕ್ಟರರಿಗೆ ಕಲ್ಲಿನೇಟಿನ ರುಚಿಯೂ ಸ್ವಲ್ಪ ಮಟ್ಟಿಗೆ ತಿಳಿಯಿತು.

ಹಿಂದುಸ್ಥಾನದ ಕ್ರಿಕೆಟ್ ಆಟದ ಬೋರ್ಡಿನ ಪ್ರೆಸಿಡೆಂಟರಾದ ಭೋಪಾಳದ ನವಾಬರು, ಶ್ರೀ. ಅಮರನಾಥರ ಸಂಬಂಧವಾದ ಯಾವತ್ತು ವಿದ್ಯಮಾನಗಳನ್ನು ಚೆನ್ನಾಗಿ ವಿಮರ್ಶಿಸಿದವರಾಗಿ, ಅವರನ್ನು ಪುನಃ ಇಂಗ್ಲೆಂಡಿಗೆ ಹಿಂದಿರುಗಿ ಕಳುಹಿಸಲು ನಿರ್ಧರಿಸಿರುವರೆಂದು ತಿಳಿದುಬರುತ್ತಿದೆ.

ಕರಾಚಿಯ ವರ್ತಕ ಸಂಘದ ಕೆಲವು ವಿಮಾನದ ಕಾಗದಪತ್ರಗಳು ತಲುಪಿಲ್ಲವೆಂದು, ಗೈರುವಿಲೆಯಾಗಿದೆ ಎಂದು ಆ ಸಂಘವು ಪೋಸ್ಟಲ್ ಅಧಿಕಾರಿಗಳಿಗೆ ದೂರಿದೆ.

ರಂಗೂನ್ ಪ್ರಾಂತದ ಬೇಸಿನ್‌ನಲ್ಲಿ ಭಾರಿ ಬೆಂಕಿ ಎದ್ದು ಮುನಿಸಿಪಲ್ ಬಟ್ಟೇ ಅಂಗಡಿ ಬೀದಿ ಸಂಪೂರ್ಣ ನಷ್ಟವಾಗಿದೆ. ನಷ್ಟ ಸುಮಾರು ೧೦ ಲಕ್ಷ ರುಪಾಯಿಗಳು!

ಕೊಮಿಲ್ಲಾ ಪ್ರಾಂತದ ಶ್ರೀಪುರ ಸಂಸ್ಥಾನದಿಂದ ಹಾವಿನ ಹಗೆಯ ಕುರಿತಾದ ಒಂದು ವಿಚಿತ್ರ ವಾರ್ತೆ. ಆಲ್ಲೊಂದು ೭ ಅಡಿಯ ನಾಗರಹಾವು; ಒಂದು ಅಶ್ವತ್ಥದ ವೃಕ್ಷದಲ್ಲಿದ್ದಿತು. ಯಾರಿಗೂ ತೊಂದರೆ ಇದ್ದಿಲ್ಲ. ಗ್ರಾಮದ ಹಿಂದೂಗಳು ಹಾಲೆರೆದು ಪೂಜಿಸುತ್ತಿದ್ದರು. ಒಂದು ದಿನ ಒಬ್ಬ ಮುಸ್ಲಿಮನು ತಮಾಷೆಗಾಗಿ ಈ ಹಾವಿಗೆ ಕಲ್ಲೆಸೆಯುತ್ತಲೇ, ಹಾವು ಸಿಟ್ಟಿಗೆದ್ದು ಅವನನ್ನು ಆಟ್ಟಿಕೊಂಡು ಬಂದಿತು. ಅವನು ತಪ್ಪಿಸಿಕೊಂಡ. ಆ ಮೇಲೆ ಅವನು ಒಂದು ಕೊಳಕ್ಕೆ ಸ್ನಾನಕ್ಕೆ ಹೋಗುತ್ತಲೂ, ಹಾವು ಅಲ್ಲಿಗೂ ಬೆನ್ನಟ್ಟಿ ಬಂದು ನೀರಿಗೆ ಹಾರಿತು. ಮುಸ್ಲಿಮನು ಅಲ್ಲಿಂದಲೂ ಪಲಾಯನ ಮಾಡಿದ. ಕೊನೆಗೆ, ರಾತ್ರಿ ಈತನು ನುಸಿಬಲೆ ಕಟ್ಟಿ, ಕಾವಲಿಗೆ ಲಾತೀಧಾರಿಗಳಾದ ಜನರನ್ನು ಇಟ್ಟು, ತನ್ನ ಮನೆಯ ಕೊಠಡಿಯಲ್ಲಿ ಮಲಗಿದ. ಆದರೂ ಮಾಡಿನಲ್ಲಿ ಸುರುಳಿ ಸುತ್ತಿ ಕಾಯುತ್ತಿದ್ದ ಹಾವು, ಸಮಯ ನೋಡಿ, ಕೆಳಗೆ ಹಾಸಿಗೆಯ ಮೇಲೆ ಬಿದ್ದು, ಅವನನ್ನು ಕಚ್ಚಿ ಕೊಂದೇ ಬಿಟ್ಟಿತು!

ಕರ್ನಾಟಕ

ಬೆಂಗಳೂರಿನ ಹೊಸ ಮುನ್ಸಿಪಲ್ ಕಟ್ಟಡಗಳನ್ನು ಶ್ರೀ. ಎಸ್. ಪಿ. ರಾಜಗೋಪಾಲಾಚಾರಿಯವರು ತೆರೆವ ಆರಂಭಮಹೋತ್ಸವವನ್ನು ನೆರವೇರಿಸಿದರು.

'ಮೈಸೂರು ಸಿಲ್ಕ್ ಸೆಂಟರ್' ಎಂಬ ರೇಷ್ಮೆ ನೇಯ್ಗೆ ಸಂಸ್ಥೆಯೊಂದನ್ನು ಹೊಸ ಹೊಳಲು ಗ್ರಾಮದಲ್ಲಿ ಶ್ರೀಮತಿ ಲೋಕಸುಂದರಿ ರಾಮನ್‌ರವರು ತೆರೆದರು.

ಶ್ರೀ ಕೃಷ್ಣರಾಜೇಂದ್ರ ಕರ್ಣಾಟಕ ಪರಿಷನ್ಮಂದಿರದಲ್ಲಿ ಗಮಕ ಕಲೆಯ ಪರೀಕ್ಷೆಯಲ್ಲಿ ಕೃತಾರ್ಥರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿಪತ್ರಗಳನ್ನು ದಾನ ಮಾಡುವ ಸಮಾರಂಭವು ಶ್ರೀಮಾನ್ ಎನ್. ಎಸ್. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಗಮಕಕಲಾ ಪಂಡಿತರಾದ ಶ್ರೀ. ಬಿಂದೂರಾಯರಿಗೆ ಶ್ರೀ. ಸುಬ್ಬರಾಯರು, ಪರಿಷತ್ತಿನ ಪರವಾಗಿ ಯೋಗ್ಯ ಸನ್ಮಾನ ಕೊಟ್ಟು, ಗಮಕ ಕಲೆಯ ಮಹತ್ವವನ್ನು ಕೊಂಡಾಡಿದರು.

ಮೈಸೂರಿನ ದೇವರಾಜ ಮಾರ್ಕೆಟಿನ ಅಂಗಡಿಗಳ ಮೇಲಿನ ಬಾಡಿಗೆಯನ್ನು ಹೆಚ್ಚಿಸುವರೆಂಬ ವಾರ್ತೆಯನ್ನು ಕೇಳಿ, ಆ ಮಾರ್ಕೆಟಿನ ವರ್ತಕ ಸಂಘದ ಒಂದು ಮೀಟಿಂಗು ನಡೆದು, ಆ ಸೂಚನೆಯು ಕುರಿತು ನಿಷೇಧವನ್ನು ವ್ಯಕ್ತಗೊಳಿಸುವ ಒಂದು ತರಾವು ಮಂಜೂರಾಗಿದೆ.

ಮೈಸೂರಿನ ಶ್ರೀಮನ್ಮಹಾರಾಜರವರು ಪರಿವಾರ ಸಹಿತರಾಗಿ ಫ್ಲೇಮಥಿಂದ ಪ್ಯಾರಿಸಿಗೆ ತಲುಪಿರುವರೆಂದು ತಿಳಿದುಬರುತ್ತಿದೆ.

ಮದುವೆಯಾಗಿದ್ದ ಒಬ್ಬ ಮೈನರ್ ಬಾಲಿಕೆಯನ್ನು ಅಪಹರಿಸಿ ಬೆಂಗಳೂರಿನ ನಗರ್ತ ಪೇಟೆಯ ಒಬ್ಬ ನಾಯಕಸಾನಿಗೆ ೨೦ ರೂಪಾಯಿಗಳಿಗೆ ಮಾರಿದ್ದ ತಪ್ಪಿಗಾಗಿ ಹನುಮಂತ ಮತ್ತೂ ಸಂಜಮ್ಮ ಎಂಬ ಇಬ್ಬರಿಗೆ ತಲಾ ೫-೫ ವರ್ಷಗಳ ಕಠಿನ ಸಜೆಯು ಪ್ರಾಪ್ತಿಯಾಗಿದೆ.

ಗುಲ್ಬರ್ಗದಲ್ಲಿ ಮದ್ದು ಹಾಕಿ ಬಂಡೆಯನ್ನು ಹಾರಿಸುವಾಗ, ೩ ಮಂದಿಗೆ ಪ್ರಮಾದವಶಾತ್ತಾಗಿ ವಿಪರೀತ ಪೆಟ್ಟಾಗಿದೆ. ಒಬ್ಬನು ಸತ್ತಿದ್ದಾನೆ.

ಮೈಸೂರು ಆರಮನೆಯ ಶ್ರೀ ಯೋಗ ಶಾಲೆಯ ಪ್ರೊಫೆಸರ್ ಕೃಷ್ಣಮಾಚಾರಿಯವರು ತಮ್ಮ ಶಿಷ್ಯರೊಂದಿಗೆ ಧಾರವಾಡದ ಮುನಿಸಿಪಲ್ ಭವನದಲ್ಲಿ ಯೋಗಾಸನಗಳದೊಂದು ಪ್ರಯೋಗವನ್ನು ಪ್ರದರ್ಶಿಸಿ ಜನರ ಮೆಚ್ಚಿಕೆಗೆ ಪಾತ್ರರಾದರು.

ನರಸಿಂಹ ಲೇಹಂ

(ಸ್ವರ್ಣ ಸಹಿತ) ನಿಶ್ಯಕ್ತರಿಗೊಂದು ವರಪ್ರದಾನ.

ರಕ್ತ, ಶಕ್ತಿ, ಚೈತನ್ಯ, ತ್ರಾಣ ಮತ್ತು ಮನುಷ್ಯತ್ವವನ್ನು ವೃದ್ಧಿಗೊಳಿಸುತ್ತದೆ. ಉಷ್ಣ ಮತ್ತು ಬಹುಮೂತ್ರವನ್ನು ಗುಣಪಡಿಸುತ್ತದೆ. 2 ಕರಡಿಗೆಗಳು ಸಾಕು.

20 ತೊಲೆಗಳ ಕರಡಿಗೆಯೊಂದರ ರೂ. 2—8—0.

ವಿ. ಪಿ. ಪ್ರತ್ಯೇಕ.

P. C. A. & Co., Ayurvedic Samaj
Peridepi, Nellore Dt.

FREE,—ಮುಫತ್,—ಪುಕಸಟ್ಟೆ!

ಮಹನೀಯರೆ,

ವಾಚನಾಲಯಗಳಲ್ಲಿಡಲು ಯೋಗ್ಯವಾದ ಮತ್ತು ಅಂದವಾದ ಬೈಂಡಿನ ಪುಸ್ತಕಗಳು, ಪ್ರತಿಯೊಬ್ಬರು ಓದಬೇಕಾದ ಕನ್ನಡ ಕಥೆ ಪುಸ್ತಕ, ನಾಟಕ, ಕೀರ್ತನೆ ಲಾ ಪುಸ್ತಕಗಳು ಮತ್ತು ರಾಮಾಯಣ, ಭಾಗವತ, ಭಾರತ, ವಗೈರೆಗಳಿಂದ ನಿಬಿಡೀಕೃತವಾಗಿ ಈಗಲೆ ಹೊರಗೆ ಬಂದಿರುವ ಕ್ಯಾಟಲಾಗಿಗೆ ಕೂಡಲೇ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬೇಕಾಗಿ ವಿನಂತಿ.

ಶ್ರೀ ಸರಸ್ವತೀ ಭಂಡಾರ,
ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು.
ಆವಿನ್ಯೂ ರೋಡ್, ಬೆಂಗಳೂರು, ಸಿಟಿ.

500 ರೂಪಾಯಿಗಳ ಬಹುಮಾನ.
ಬಿಳೇ ಕುಷ್ಠಕ್ಕೆ (ತೊನ್ನಿಗೆ) ಅತ್ಯಾಶ್ಚರ್ಯಕರವಾದ ಔಷಧಿ.

ಈ ವನಸ್ಪತಿಯ ಕೆಲವು ದಿನಗಳ ಪ್ರಯೋಗದಿಂದಲೇ, ಬಿಳೇ ಕುಷ್ಠವು (ತೊನ್ನು) ನಿರ್ಮೂಲವಾಗಿ ಸಂಪೂರ್ಣ ಗುಣವಾಗುತ್ತದೆ. ಬರೇ ಕೆಲವು ಸಲ ಮಾತ್ರ ಉಪಯೋಗಿಸಿ, ಈ ಭಯಂಕರ ರೋಗವನ್ನು ಪರಿಹರಿಸಿಕೊಳ್ಳಿ. ಈ ವನಸ್ಪತಿಯು ಒಬ್ಬ ಮಹಾತ್ಮನಿಂದ ದತ್ತವಾಗಿರತಕ್ಕದ್ದು. ಯಾವತ್ತು ಔಷಧಗಳನ್ನೂ ಮಾಡಿ ನಿರಾಶರಾಗಿದವರು, ಇದನ್ನು ಪ್ರಯೋಗಿಸತಕ್ಕದ್ದು. ಇದು ಮೋಸಗಾರಿಕೆಯದೆಂದು ತೋರಿಸಿಕೊಟ್ಟರೆ 500 ರೂಪಾಯಿಗಳ ಬಹುಮಾನವಿದೆ. ಬೆಲೆ ರೂ. 1—8—0. ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

S. N. SINHA,
No. 36, P. O. Mirchaiganj (PATNA)

ಪಿತ್ತಕೋಶವನ್ನು ಕಲೋಮಲ್ ಇಲ್ಲದೆ-ಎಚ್ಚರಿಸಿರಿ.

ಮೋಟಾರು ಗಾಡಿಯನ್ನು ನೂಕುವಷ್ಟು ಉತ್ಸಾಹ ಉಂಟಾಗುವುದು.

ಪ್ರತಿ ದಿನವೂ ಎರಡು ಪೈಂಟಿನಷ್ಟು ಪಿತ್ತರಸವು ಪಿತ್ತಕೋಶದಿಂದ ಜೀರ್ಣಕೋಶಕ್ಕೆ ಹರಿಯಬೇಕು. ಹೀಗೆ ಹರಿಯದಿದ್ದರೆ, ನಿಮ್ಮ ಆಹಾರವು ಜೀರ್ಣಿಸದೆ ಮಲಕೋಶದಲ್ಲಿ ಕೊಳೆಯುತ್ತದೆ. ಇದರಿಂದ ಹೊಟ್ಟೆಯಲ್ಲಿ ವಾಯು ಉತ್ಪತ್ತಿಯಾಗಿ ಮಲಬದ್ಧತೆಯುಂಟಾಗುತ್ತದೆ. ನಿಮ್ಮ ಶರೀರ ಯಂತ್ರವೆಲ್ಲಾ ವಿಷಮಯವಾಗಿ, ಪ್ರಪಂಚವೇ ಬೇಡವೆಂಬ ಮನೋ ಜಿಗುಪ್ಸೆಯುಂಟಾಗುತ್ತದೆ.

ಲವಣಗಳು, ರುಚಿಕರವಾದ ಸೌಮ್ಯ ಮತ್ತು ಕಠಿನತರ ಜುಲಾಪುಗಳು, ಇವೆಲ್ಲಾ ತಾತ್ಕಾಲಿಕ ಕ್ಕೆಮಾತ್ರ ಉಪಯೋಗವಾದವುಗಳಲ್ಲದೆ ಮೂಲ ಕಾರಣವನ್ನು ತಾಕಲವುದಿಲ್ಲ. ಆರೀತಿ ಮಾಡಬೇಕಾದರೆ ಜಗತ್ಪ್ರಸಿದ್ಧವಾದ "ಕಾರ್ಟರ್ಸ್ ಲಿಟಿಲ್ ಲಿವರ್ ಪಿಲ್ಸ್"ಗಳು ಮೇಲೆ ಹೇಳಿದ ೨ ಪೈಂಟು ಪಿತ್ತವನ್ನು ತಪ್ಪದೆ ಸಲೀಸಾಗಿ ಉತ್ಪತ್ತಿಮಾಡುತ್ತದೆ. ನಿರಪಾಯ, ಸೌಮ್ಯ ಮತ್ತು ಪೂರ್ಣಗುಣಕಾರಿಯಿದೆ. ಯಾವಾಗಲೂ ಕಾರ್ಟರ್ಸ್ ಲಿಟಿಲ್ ಲಿವರ್ ಪಿಲ್ಸ್‌ಗಳನ್ನೇ ಕೇಳಿರಿ. ಪ್ರತಿಯೊಂದು ಕೆಂಪು ಪೊಟ್ಟಣದ ಮೇಲೆ ಕಾರ್ಟರರ ಹೆಸರನ್ನು ನೋಡಿರಿ ಬೆಲೆ ೧೦ ಆಣೆ.

100 ರುಪಾಯಿಗಳ ಬಹುಮಾನ.
ಸಿದ್ಧ ಗುಪ್ತ ಮಂತ್ರ.

ಲಕ್ಷಾಂತರ ರುಪಾಯಿಗಳ ವೆಚ್ಚದಿಂದಲೂ ಸಾಧಿಸಲಾಗದ ಕೆಲಸವು, ಈ ಮಂತ್ರವನ್ನು ಬರೇ ಕೆಲವು ಸಲ ಪುನರುಚ್ಚರಿಸುವುದರಿಂದಲೇ ಸಾಧ್ಯವಾಗುವುದು. ಇದನ್ನು ಪರಿಣಾಮಕಾರಿಯಾಗಿ ಮಾಡಲು, ಯಾವ ವಿಧವಾಗಿಯೂ ಕಪ್ಪುಪಡಬೇಕಾದ ಅವಶ್ಯಕತೆ ಇಲ್ಲ. ಯಾವ ಸಿದ್ಧತೆಯು ಇಲ್ಲದೇ ಅದು ಫಲಿಸುತ್ತದೆ. ನಿಮಗೆ ಬೇಕಾದವಳು ಎಷ್ಟೇ ಕಠಿನ ಹೃದಯಳೂ ಕ್ರೂರ ಬುದ್ಧಿಯವಳೂ ಆಗಿರಲಿ.

ವಿದೇಶ

ಸರ್ ಎಸ್. ರಾಧಾಕೃಷ್ಣನ್‌ರವರು ಜಿನೇವಾದಲ್ಲಿ ಜನಾಂಗ ಸಂಘ ಶಾಖೆಗಳಲ್ಲೊಂದರಲ್ಲಿ ಭಾಷಣ ಮಾಡುತ್ತ ಶಿಕ್ಷಣದ ಸರಿಯಾದ ರೀತಿ ಯಾವುದೆಂಬುದರ ಕುರಿತು ವಿವರಿಸಿದರು.

ಚೀನದಲ್ಲಿ ಸಿವಿಲ್ ಯುದ್ಧವು ಆರಂಭವಾಗಿದೆ.

ಲುಕಾನ್ಗೋ ಸಂಧಿ ಇದೇ ಜುಲ್ಯಾ ೨೫ಕ್ಕೆ ನಡೆಯದೆ, ಮುಂದೆ ನಡೆಯುವಂತೆ ಏರ್ಪಾಡಾಗುತ್ತದೆ. ಇದಕ್ಕೆ ಇಟೆಲಿ ದಯೆಮಾಡಿಸಬೇಕಾಗಿದ್ದರೆ, ಅದರ ಕೆಲವು ಷರತ್ತುಗಳನ್ನು ಪೂರೈಸಿಕೊಡಬೇಕಾಗಿದೆ.

ಪ್ಯಾಲಸ್ತೈನಿನಲ್ಲಿ ಬ್ರಿಟಿಷ್ ಸೈನಿಕರು ಭಯೋತ್ಪಾದಕರ ಮೇಲೆ ಗುಂಡು ಹಾರಿಸಿ ೭ ಮಂದಿ ಅರಬರನ್ನು ಕೊಂದಿರುವರು.

ಮೆಡ್ರಿಡಿನಲ್ಲಿ ಮುಷ್ಕರಗಾರರ ಹಾವಳಿಯು ಇನ್ನೂ ಕಡಿಮೆಯಾಗಿಲ್ಲ. ಲೆಫ್ಟಿನೆಂಟ್ ಜೋಸ್ ಡಿ. ಕೆಸ್ಟೀಲೋ ಎಂಬವರನ್ನು ದಂಗೆಗಾರರು ಗುಂಡು ಹೊಡೆದು ಕೊಂದರು. ಪ್ರತೀಕಾರವೇ ಆಲ್ಲಿನ ಕನಸರ್ವೇಟಿನ್ ರಾಜನೀತಿಜ್ಞರಲ್ಲಿ ಮುಖಂಡಲೆನ್ನಿಸಿದ ಕಾಲ್ವೊ ಸೊಟೆಲೊ ಎಂಬವರನ್ನೂ ಯಾರೋ ಖೂನಿ ಮಾಡಿ ಬಿಸಾಡಿದ್ದಾರೆ. ಈ ಸಂಬಂಧ ೧೩೫ ಮಂದಿ ಫೆಸಿಯಿಸ್ಟರ ಮತ್ತೂ ಕೆಲವು ಮಂದಿ ಪೋಲೀಸ್ ಹಾಗೂ ಮಿಲಿಟರಿ ಅಧಿಕಾರಿಗಳ ಕೈದಾಗಿದೆ.

ಅಮೇರಿಕದಲ್ಲಿ ಕಳೆದ ೧೧ ದಿವಸಗಳಲ್ಲಿ ಉಷ್ಣಾಧಿಕ್ಯದಿಂದ ಮೃತರಾದವರ ಸಂಖ್ಯೆ ಒಟ್ಟಿಗೆ ೧೪೩೧; ಬೆಳೆಗೆ ಸಂಭವಿಸಿದ ನಷ್ಟ ೩೦೦,೦೦೦,೦೦೦ ಡಾಲರು. ಒಂದೆರಡು ಹಳ್ಳಿಗಳಲ್ಲಿ ಹೆಣಗಳು ತುಂಬಿ ತೆಗೆಯುವವರೇ ದಿಕ್ಕಿಲ್ಲವಾಗಿದ್ದಿತಂತೆ.

ಹೌಸ್ ಆಫ್ ಲಾರ್ಡ್ಸ್‌ನಲ್ಲಿ ಯಾವ ಸುಧಾರಣೆಗಳನ್ನು ಮಾಡಲೂ ಈಗ ಸಾಧ್ಯವಿಲ್ಲವೆಂದು ಪ್ರಧಾನರು ತಿಳಿಸಿರುವರು.

ಮೇಜರ್ ರೌಲ್ಯಾಂಡ್‌ಸನ್— ಈತನಿಂದ ಸಾಲಗಾರರಿಗೆ ೬೮ ಸಾವಿರ ಪೌನು ಸಲ್ಲಬೇಕಾಗಿದ್ದಿತು. ಈತನು ಆತ್ಮಹತ್ಯೆ ಮಾಡಿಕೊಂಡ. ಈತನಿಗೆ ಇನ್ಶೂರೆನ್ಸ್ ಪಾಲಿಸಿಗಳಿದ್ದುವು. ಇನ್ಶೂರೆನ್ಸ್ ಕಂಪೆನಿ, 'ಈತನು ಬುದ್ಧಿಪೂರ್ವಕವಾಗಿ ಕೊಲೆ ಮಾಡಿಕೊಂಡುದು; ಹಣವೀತನಿಗೆ ಸಲ್ಲತಕ್ಕುದಲ್ಲ' ಎಂದು ಸಾಧಿಸಿತು. ಆದರೆ ಲಂಡನಿನ ಹೈಕೋರ್ಟು ಆ ಕಂಪೆನಿಗೆ 'ಆ ೪೨ ಸಾವಿರ ಪೌಂಡು ನೀವು ತೆತ್ತು ಬಿಡಿ' ಎಂದಿತು!

ಆಸ್ಟ್ರಿಯಾ ಮತ್ತೂ ಜರ್ಮನಿಗಳೊಳಗೆ ಒಂದು ಕರಾರಾಗಿದೆ. ಇದರಿಂದ ಯುರೋಪಿನ ರಾಷ್ಟ್ರಗಳಲ್ಲಿ ಆಲ್ಲೋಲೆಕಲ್ಲೋಲವಾಗಿದೆ. ಇಟೆಲಿಗೆ ಇದರಿಂದ ಪರಮಾನಂದ! ಫ್ರಾನ್ಸಿಗೆ ಪರಮ ದುಃಖ! ಮುಂದೆ ಇಟೆಲಿಗೂ ಜರ್ಮನಿಗೂ ಒಂದು ಸಂಧಿಯಾಗಬಹುದೇ?

ನಾನ್‌ಕಿಂಗ್ ಪ್ರಾಂತದ ಒಳಿ ಸರಕಾರದ ಸೈನ್ಯಗಳಿಗೂ, ದಕ್ಷಿಣ ಭಾಗದ ಒಂದು ಸೈನ್ಯಕ್ಕೂ ತೀವ್ರವಾದ ಯುದ್ಧವಾಗುತ್ತಿದೆ.

ಪ್ಯಾಲಸ್ತೈನಿಗೆ ಮೂರು ತುಕ್ಕಡಿ ಬ್ರಿಟಿಷರ ಸೈನ್ಯಗಳನ್ನು ಕಳುಹಿಸಲಾಗಿದೆ. ಇನ್ನೂ ಹೆಚ್ಚಿನ ಸೈನ್ಯಗಳನ್ನು ತಯಾರಿಸಿ ನಿಲ್ಲಿಸಿದೆ.

ಕಳೆದ ಫೆಬ್ರವರಿಯಲ್ಲಿ ಜಪಾನಿನಲ್ಲಿ ನಡೆದ ಮಿಲಿಟರಿ ದಂಗೆಯಲ್ಲಿ ಮರಣದಂಡನೆಗೆ ಗುರಿಯಾಗಿದ್ದ ೧೫ ಮಂದಿಯನ್ನು, ಜಪಾನ್ ಸರಕಾರವು, ಗುಂಡು ಹೊಡೆಯಿಸಿ, ವಧಿಸಿತು.

ಬರ್ಲಿನಿನಲ್ಲಿ ಹಾವನ್ನು ತಿನ್ನುವ ಒಂದು ಇಲಿಯನ್ನು ಅಲ್ಲಿನ ತಮಾಷಿ ಬಂಗಲೆಗೆ ತಂದಿರಿಸಿದ್ದಾರೆ. ಇದರ ಉದ್ದ ೬ ಅಡಿ. ಇದು ವಿಷವುಳ್ಳ ಪ್ರಾಣಿಯಲ್ಲ. ಆದರೂ ಎಂತಹ ವಿಷಭರಿತವಾದ ಹಾವನ್ನಾದರೂ ಇದು ಕೊಂದು, ತಿಂದು ಜೀರ್ಣಿಸಿಕೊಳ್ಳಬಹುದು.

ನಮ್ಮ ದಿವಂಗತ ಸಾರ್ವಭೌಮರ ಸ್ಮಾರಕನಿಧಿಗೆ ರಗ್ಬಿ ಫುಟ್‌ಬಾಲ್ ಸಂಘದವರು ೫ ಸಾವಿರ ಪೌಂಡು ವಂತಿಗೆ ಕೊಟ್ಟಿದ್ದಾರೆ.

ಪ್ಯಾಲಸ್ತೈನಿನಲ್ಲಿ ದಂಗೆಗಾರರು ಜೆರುಸಲೇಮಿನ ಪಶ್ಚಿಮದ ಒಂದು ಮುಖ್ಯ ರೈಲ್ವೇ ಲೈನನ್ನು ನಾಶ ಮಾಡಿ, ಮತ್ತೊಂದು ಕಡೆ ಒಂದು ಸೇತುವೆಯನ್ನೂ ಕೆಡವಿದರು. ಇತ್ತ ದಂಗೆಗಾರರಿಗೆ ಆಶ್ರಯವಿತ್ತ ಒಂದು ಗ್ರಾಮದ ೪ ಮನೆಗಳನ್ನು ಡಾಯ್ನಮೈಟ್ ಹಾಕಿ ಹಾರಿಸಲಾಯಿತು.

ಮಕ್ಕಳನ್ನು ಅಪಹರಿಸುವವರಿಗೆ ಜರ್ಮನಿಯಲ್ಲಿ ಇನ್ನು ಮುಂದೆ ಮರಣ ದಂಡನೆ.

ಜಾಹಿರಿಯ ಗಣಿಗಳನ್ನು ಸಂದರ್ಶಿಸಲು ಚೀಫ್ ಮೈನಿಂಗ್ ಇಂಜಿನಿಯರ್ ಮಿ. ಜೆ. ಸಿ. ಕನ್ನಿಂಗ್‌ಹ್ಯಾಂರವರೂ, ಗಣಿಗಳ ಇನ್ಸ್‌ಪೆಕ್ಟರ್ ಮಿ. ಎ. ಜೆ. ಲ್ಯಾಂಗ್‌ರವರೂ, ಮ್ಯಾನೇಜರ್ ಶ್ರೀ. ಎಲ್. ಎ. ಬ್ಯಾನರ್ಜಿಯವರೂ ಕಂಟ್ರಾಕ್ಟರ್ ಶ್ರೀ. ಜೈರಾಮ್ ಸೇತ್ನಾರವರೂ, ಓವರ್‌ಮ್ಯಾನ್ ಶ್ರೀ. ಕೆ. ಪಿ. ದಾಸರವರೂ ಹೀಗೆ ೫ ಮಂದಿ ತೆರಳಿದ್ದಾಗ, ಗಣಿಯಲ್ಲಿ ಧಕ್ಕನೆ ಸಿಡಿತವುಂಟಾಗಿ, ಎಲ್ಲರಿಗೂ ವಿಪರೀತ ಪೆಟ್ಟಾಯಿತು. ಮೊದಲಿನ ಮೂವರು ಆಸ್ಪತ್ರೆಯಲ್ಲಿ ಮೃತಪಟ್ಟರು. ಕೊನೆಯವರಿಬ್ಬರ ಪರಿಸ್ಥಿತಿ ಸಮಾಧಾನಕರವಾಗಿದೆ.

ಹಿಂದೂದೇಶ

ಕೊಲೊಂಬೊದಲ್ಲಿ ಗುಂಡಿನ ಏಟಿಗೆ ಗುರಿಯಾಗಿದ್ದ ೨೫ ವರ್ಷದ ತರುಣರಾದ ಪೊಲೀಸ್ ಸಬ್ ಇನಸ್ಪೆಕ್ಟರ್ ಮಿ. ಫೋಸ್ಟರರವರು ಆಸ್ಪತ್ರೆಯಲ್ಲಿ ಮೃತರಾದರು. ಈ ಸಂಬಂಧ ೩ ಮಂದಿಯು ಕೈದಾಗಿದೆ.

ದಿಲ್ಲಿಯಲ್ಲಿ ಸುಮಾರು ೮,೫೫೫ ಮಂದಿ ಕಲ್ಲು ಕಡಿಯುವವರು ತಮಗೆ ಸಂಬಳ ಹೆಚ್ಚಿಸಬೇಕೆಂದು ಕಾರ್ಯತ್ಯಾಗ ಮಾಡಿದ್ದಾರೆ. ಇವರಿಂದ ದೊಡ್ಡ ದೊಡ್ಡ ಕಂಟ್ರಾಕ್ಟರರು ಬಹಳ ತೊಂದರೆಗೆ ಒಳಗಾಗಿದ್ದಾರೆ.

'ಆರಸರ ಮೇಲೆ ಯುದ್ಧ ಮಾಡಲು ಹವಣಿಸಿದರು' ಎಂಬ ರಾಜದ್ರೋಹದ ಆರೋಪಕ್ಕೆ ಒಳಗಾಗಿ ೩ ವರ್ಷಗಳ ಕಠಿನ ದಂಡನೆಗೊಳಗಾಗಿದ್ದ ಅಜಿತ್ ಕುಮಾರ ಬೋಸ್ ಎಂಬಾತನನ್ನು ಕಲ್ಕತ್ತಾ ಹೈ ಕೋರ್ಟಿನವರು ನಿರಪರಾಧಿ ಎಂದು ಬಿಡುಗಡೆ ಮಾಡಿದರು.

ಸಿಂಧ್ ದೇಶದ ಹೈದರಾಬಾದ್ ನಗರದಲ್ಲಿ ಒಂದು ಆಶ್ಚರ್ಯಕರವಾದ ಕಳವು! ಆಲ್ಲಿನ ಒಂದು ಹಿಟ್ಟಿನ ಕಾರ್ಖಾನೆಯಲ್ಲಿ, ಬೆಳಗಿನ ಹೊತ್ತು, ಒಂದು ದೊಡ್ಡ ಕಬ್ಬಿಣದ ಟ್ರಿಜರಿಯನ್ನು, ಗೋಡೆಯಲ್ಲಿ ತೂತು ತೆಗೆದು, ಹೊರಗೆ ತಂದು ಅದನ್ನು ಒಂದು ಮೈಲಿ ದೂರದ ವರೆಗೂ ಸಾಗಿಸಿಕೊಂಡು ಹೋಗಿ ಆಲ್ಲಿ ಅದರ ಬಾಗಿಲೊಡೆದು, ಅದರೊಳಗಿದ್ದ ನಗದು, ಆಭರಣ ಮುಂತಾದುವನ್ನೆಲ್ಲ ಜಾರಿಸಿದ್ದಾರೆ— ಈ ಹಗಲುಕಳ್ಳರು ಯಾರೆಂದು ಈಗ ಪತ್ತೆಗೆ ಆರಂಭವಾಗಿದೆ.

ಪ್ರತ್ಯೇಕಿಸಲ್ಪಟ್ಟ ಬರ್ಮಾವು ಇಂಡಿಯದೊಂದಿಗೂ, ಜಪಾನಿನೊಂದಿಗೂ ಪ್ರತ್ಯೇಕವಾದ ವ್ಯಾಪಾರ ಸಂಧಿಗಳನ್ನು ಮಾಡಿಕೊಳ್ಳುವ ಆಲೋಚನೆಯಲ್ಲಿದೆ.

ಪಂಡಿತ ಜವಹರಲಾಲರ ಗಂಟಲಿನ ಆಸ್ವಸ್ಥತೆಯು ಇನ್ನೂ ಪರಿಹಾರವಾಗದ ಕಾರಣ ಅವರ ಕರಾಚಿಯ ಕಾರ್ಯಕ್ರಮವು ಸಂಕ್ಷೇಪಿಸಲ್ಪಟ್ಟಿದೆ.

ಬೀರಾರಿನ ಮಲಕಾಪುರದ ಸಮೀಪ ಒಂದು ರೈಲ್ವೇ ಅವಘಡವು ಸಂಭವಿಸಿ, ಒಬ್ಬ ರೈಲ್ವೆ ವರ್ಕ್ಸ್ ಇನಸ್ಪೆಕ್ಟರರೂ, ಮೂರು ಮಂದಿ ಕೆಲಸಗಾರರೂ ಮೃತರಾದರು. ಮತ್ತೆ ೬ ಮಂದಿಗೆ ಗಾಯಗಳಾಗಿವೆ.

ಬೆರಲಿಯಲ್ಲಿ ಆ ಜಿಲ್ಲಾ ಬೋರ್ಡಿನ ಅಧ್ಯಕ್ಷರ ಚುನಾವಣೆಯು, ಪೋಲೀಸರ ಕಾವಲಿನ ಸಮೇತ, ನಡೆಯಿತು. ಪಂಡಿತ ದ್ವಾರಕಾಪ್ರಸಾದವರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು.

ಲಾಹೋರಿನಲ್ಲಿ ಒಂದು ಮುಸ್ಲಿಮರ ಮೀಟಿಂಗು. ಮೀಟಿಂಗಿನಲ್ಲಿ ಒಬ್ಬಾನೊಬ್ಬ ಮುಸ್ಲಿಂ ಮುಖಂಡರು ಆಕ್ಷೇಪಕರವಾದ ರೀತಿಯಲ್ಲಿ ಮಾತಾಡಿದರೆಂದು ಜಗಳವೆದ್ದು, ಗಲಭೆಯಾಗಿ, ಪೋಲೀಸರು ಮೃದುವಾಗಿ ಲಾತೀ ಏಟಿನ ರುಚಿಯನ್ನು ತೋರಿಸಬೇಕಾದ ಸಂದರ್ಭವೊದಗಿತು. ಒಬ್ಬ ಸಬ್ ಇನಸ್ಪೆಕ್ಟರರಿಗೆ ಕಲ್ಲಿನೇಟಿನ ರುಚಿಯೂ ಸ್ವಲ್ಪ ಮಟ್ಟಿಗೆ ತಿಳಿಯಿತು.

ಹಿಂದುಸ್ಥಾನದ ಕ್ರಿಕೆಟ್ ಆಟದ ಬೋರ್ಡಿನ ಪ್ರೆಸಿಡೆಂಟರಾದ ಭೋಪಾಳದ ನವಾಬರು, ಶ್ರೀ. ಅಮರನಾಥರ ಸಂಬಂಧವಾದ ಯಾವತ್ತು ವಿದ್ಯಮಾನಗಳನ್ನು ಚೆನ್ನಾಗಿ ವಿಮರ್ಶಿಸಿದವರಾಗಿ, ಅವರನ್ನು ಪುನಃ ಇಂಗ್ಲೆಂಡಿಗೆ ಹಿಂದಿರುಗಿ ಕಳುಹಿಸಲು ನಿರ್ಧರಿಸಿರುವರೆಂದು ತಿಳಿದುಬರುತ್ತಿದೆ.

ಕರಾಚಿಯ ವರ್ತಕ ಸಂಘದ ಕೆಲವು ವಿಮಾನದ ಕಾಗದಪತ್ರಗಳು ತಲುಪಿಲ್ಲವೆಂದು, ಗೈರುವಿಲೆಯಾಗಿದೆ ಎಂದು ಆ ಸಂಘವು ಪೋಸ್ಟಲ್ ಅಧಿಕಾರಿಗಳಿಗೆ ದೂರಿದೆ.

ರಂಗೂನ್ ಪ್ರಾಂತದ ಬೇಸಿನ್‌ನಲ್ಲಿ ಭಾರಿ ಬೆಂಕಿ ಎದ್ದು ಮುನಿಸಿಪಲ್ ಬಟ್ಟೇ ಅಂಗಡಿ ಬೀದಿ ಸಂಪೂರ್ಣ ನಷ್ಟವಾಗಿದೆ. ನಷ್ಟ ಸುಮಾರು ೧೦ ಲಕ್ಷ ರುಪಾಯಿಗಳು!

ಕೊಮಿಲ್ಲಾ ಪ್ರಾಂತದ ಶ್ರೀಪುರ ಸಂಸ್ಥಾನದಿಂದ ಹಾವಿನ ಹಗೆಯ ಕುರಿತಾದ ಒಂದು ವಿಚಿತ್ರ ವಾರ್ತೆ. ಆಲ್ಲೊಂದು ೭ ಅಡಿಯ ನಾಗರಹಾವು; ಒಂದು ಅಶ್ವತ್ಥದ ವೃಕ್ಷದಲ್ಲಿದ್ದಿತು. ಯಾರಿಗೂ ತೊಂದರೆ ಇದ್ದಿಲ್ಲ. ಗ್ರಾಮದ ಹಿಂದೂಗಳು ಹಾಲೆರೆದು ಪೂಜಿಸುತ್ತಿದ್ದರು. ಒಂದು ದಿನ ಒಬ್ಬ ಮುಸ್ಲಿಮನು ತಮಾಷೆಗಾಗಿ ಈ ಹಾವಿಗೆ ಕಲ್ಲೆಸೆಯುತ್ತಲೇ, ಹಾವು ಸಿಟ್ಟಿಗೆದ್ದು ಅವನನ್ನು ಆಟ್ಟಿಕೊಂಡು ಬಂದಿತು. ಅವನು ತಪ್ಪಿಸಿಕೊಂಡ. ಆ ಮೇಲೆ ಅವನು ಒಂದು ಕೊಳಕ್ಕೆ ಸ್ನಾನಕ್ಕೆ ಹೋಗುತ್ತಲೂ, ಹಾವು ಅಲ್ಲಿಗೂ ಬೆನ್ನಟ್ಟಿ ಬಂದು ನೀರಿಗೆ ಹಾರಿತು. ಮುಸ್ಲಿಮನು ಅಲ್ಲಿಂದಲೂ ಪಲಾಯನ ಮಾಡಿದ. ಕೊನೆಗೆ, ರಾತ್ರಿ ಈತನು ನುಸಿಬಲೆ ಕಟ್ಟಿ, ಕಾವಲಿಗೆ ಲಾತೀಧಾರಿಗಳಾದ ಜನರನ್ನು ಇಟ್ಟು, ತನ್ನ ಮನೆಯ ಕೊಠಡಿಯಲ್ಲಿ ಮಲಗಿದ. ಆದರೂ ಮಾಡಿನಲ್ಲಿ ಸುರುಳಿ ಸುತ್ತಿ ಕಾಯುತ್ತಿದ್ದ ಹಾವು, ಸಮಯ ನೋಡಿ, ಕೆಳಗೆ ಹಾಸಿಗೆಯ ಮೇಲೆ ಬಿದ್ದು, ಅವನನ್ನು ಕಚ್ಚಿ ಕೊಂದೇ ಬಿಟ್ಟಿತು!

ಕರ್ನಾಟಕ

ಬೆಂಗಳೂರಿನ ಹೊಸ ಮುನ್ಸಿಪಲ್ ಕಟ್ಟಡಗಳನ್ನು ಶ್ರೀ. ಎಸ್. ಪಿ. ರಾಜಗೋಪಾಲಾಚಾರಿಯವರು ತೆರೆವ ಆರಂಭಮಹೋತ್ಸವವನ್ನು ನೆರವೇರಿಸಿದರು.

'ಮೈಸೂರು ಸಿಲ್ಕ್ ಸೆಂಟರ್' ಎಂಬ ರೇಷ್ಮೆ ನೇಯ್ಗೆ ಸಂಸ್ಥೆಯೊಂದನ್ನು ಹೊಸ ಹೊಳಲು ಗ್ರಾಮದಲ್ಲಿ ಶ್ರೀಮತಿ ಲೋಕಸುಂದರಿ ರಾಮನ್‌ರವರು ತೆರೆದರು.

ಶ್ರೀ ಕೃಷ್ಣರಾಜೇಂದ್ರ ಕರ್ಣಾಟಕ ಪರಿಷನ್ಮಂದಿರದಲ್ಲಿ ಗಮಕ ಕಲೆಯ ಪರೀಕ್ಷೆಯಲ್ಲಿ ಕೃತಾರ್ಥರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿಪತ್ರಗಳನ್ನು ದಾನ ಮಾಡುವ ಸಮಾರಂಭವು ಶ್ರೀಮಾನ್ ಎನ್. ಎಸ್. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಗಮಕಕಲಾ ಪಂಡಿತರಾದ ಶ್ರೀ. ಬಿಂದೂರಾಯರಿಗೆ ಶ್ರೀ. ಸುಬ್ಬರಾಯರು, ಪರಿಷತ್ತಿನ ಪರವಾಗಿ ಯೋಗ್ಯ ಸನ್ಮಾನ ಕೊಟ್ಟು, ಗಮಕ ಕಲೆಯ ಮಹತ್ವವನ್ನು ಕೊಂಡಾಡಿದರು.

ಮೈಸೂರಿನ ದೇವರಾಜ ಮಾರ್ಕೆಟಿನ ಅಂಗಡಿಗಳ ಮೇಲಿನ ಬಾಡಿಗೆಯನ್ನು ಹೆಚ್ಚಿಸುವರೆಂಬ ವಾರ್ತೆಯನ್ನು ಕೇಳಿ, ಆ ಮಾರ್ಕೆಟಿನ ವರ್ತಕ ಸಂಘದ ಒಂದು ಮೀಟಿಂಗು ನಡೆದು, ಆ ಸೂಚನೆಯು ಕುರಿತು ನಿಷೇಧವನ್ನು ವ್ಯಕ್ತಗೊಳಿಸುವ ಒಂದು ತರಾವು ಮಂಜೂರಾಗಿದೆ.

ಮೈಸೂರಿನ ಶ್ರೀಮನ್ಮಹಾರಾಜರವರು ಪರಿವಾರ ಸಹಿತರಾಗಿ ಫ್ಲೇಮಥಿಂದ ಪ್ಯಾರಿಸಿಗೆ ತಲುಪಿರುವರೆಂದು ತಿಳಿದುಬರುತ್ತಿದೆ.

ಮದುವೆಯಾಗಿದ್ದ ಒಬ್ಬ ಮೈನರ್ ಬಾಲಿಕೆಯನ್ನು ಅಪಹರಿಸಿ ಬೆಂಗಳೂರಿನ ನಗರ್ತ ಪೇಟೆಯ ಒಬ್ಬ ನಾಯಕಸಾನಿಗೆ ೨೦ ರೂಪಾಯಿಗಳಿಗೆ ಮಾರಿದ್ದ ತಪ್ಪಿಗಾಗಿ ಹನುಮಂತ ಮತ್ತೂ ಸಂಜಮ್ಮ ಎಂಬ ಇಬ್ಬರಿಗೆ ತಲಾ ೫-೫ ವರ್ಷಗಳ ಕಠಿನ ಸಜೆಯು ಪ್ರಾಪ್ತಿಯಾಗಿದೆ.

ಗುಲ್ಬರ್ಗದಲ್ಲಿ ಮದ್ದು ಹಾಕಿ ಬಂಡೆಯನ್ನು ಹಾರಿಸುವಾಗ, ೩ ಮಂದಿಗೆ ಪ್ರಮಾದವಶಾತ್ತಾಗಿ ವಿಪರೀತ ಪೆಟ್ಟಾಗಿದೆ. ಒಬ್ಬನು ಸತ್ತಿದ್ದಾನೆ.

ಮೈಸೂರು ಆರಮನೆಯ ಶ್ರೀ ಯೋಗ ಶಾಲೆಯ ಪ್ರೊಫೆಸರ್ ಕೃಷ್ಣಮಾಚಾರಿಯವರು ತಮ್ಮ ಶಿಷ್ಯರೊಂದಿಗೆ ಧಾರವಾಡದ ಮುನಿಸಿಪಲ್ ಭವನದಲ್ಲಿ ಯೋಗಾಸನಗಳದೊಂದು ಪ್ರಯೋಗವನ್ನು ಪ್ರದರ್ಶಿಸಿ ಜನರ ಮೆಚ್ಚಿಕೆಗೆ ಪಾತ್ರರಾದರು.

ನರಸಿಂಹ ಲೇಹಂ

(ಸ್ವರ್ಣ ಸಹಿತ) ನಿಶ್ಯಕ್ತರಿಗೊಂದು ವರಪ್ರದಾನ.

ರಕ್ತ, ಶಕ್ತಿ, ಚೈತನ್ಯ, ತ್ರಾಣ ಮತ್ತು ಮನುಷ್ಯತ್ವವನ್ನು ವೃದ್ಧಿಗೊಳಿಸುತ್ತದೆ. ಉಷ್ಣ ಮತ್ತು ಬಹುಮೂತ್ರವನ್ನು ಗುಣಪಡಿಸುತ್ತದೆ. 2 ಕರಡಿಗೆಗಳು ಸಾಕು.

20 ತೊಲೆಗಳ ಕರಡಿಗೆಯೊಂದರ ರೂ. 2—8—0.

ವಿ. ಪಿ. ಪ್ರತ್ಯೇಕ.

P. C. A. & Co., Ayurvedic Samaj
Peridepi, Nellore Dt.

FREE,—ಮುಫತ್,—ಪುಕಸಟ್ಟೆ!

ಮಹನೀಯರೆ,

ವಾಚನಾಲಯಗಳಲ್ಲಿಡಲು ಯೋಗ್ಯವಾದ ಮತ್ತು ಅಂದವಾದ ಬೈಂಡಿನ ಪುಸ್ತಕಗಳು, ಪ್ರತಿಯೊಬ್ಬರು ಓದಬೇಕಾದ ಕನ್ನಡ ಕಥೆ ಪುಸ್ತಕ, ನಾಟಕ, ಕೀರ್ತನೆ ಲಾ ಪುಸ್ತಕಗಳು ಮತ್ತು ರಾಮಾಯಣ, ಭಾಗವತ, ಭಾರತ, ವಗೈರೆಗಳಿಂದ ನಿಬಿಡೀಕೃತವಾಗಿ ಈಗಲೆ ಹೊರಗೆ ಬಂದಿರುವ ಕ್ಯಾಟಲಾಗಿಗೆ ಕೂಡಲೇ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬೇಕಾಗಿ ವಿನಂತಿ.

ಶ್ರೀ ಸರಸ್ವತೀ ಭಂಡಾರ,
ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು.
ಆವಿನ್ಯೂ ರೋಡ್, ಬೆಂಗಳೂರು, ಸಿಟಿ.

500 ರೂಪಾಯಿಗಳ ಬಹುಮಾನ.
ಬಿಳೇ ಕುಷ್ಠಕ್ಕೆ (ತೊನ್ನಿಗೆ) ಅತ್ಯಾಶ್ಚರ್ಯಕರವಾದ ಔಷಧಿ.

ಈ ವನಸ್ಪತಿಯ ಕೆಲವು ದಿನಗಳ ಪ್ರಯೋಗದಿಂದಲೇ, ಬಿಳೇ ಕುಷ್ಠವು (ತೊನ್ನು) ನಿರ್ಮೂಲವಾಗಿ ಸಂಪೂರ್ಣ ಗುಣವಾಗುತ್ತದೆ. ಬರೇ ಕೆಲವು ಸಲ ಮಾತ್ರ ಉಪಯೋಗಿಸಿ, ಈ ಭಯಂಕರ ರೋಗವನ್ನು ಪರಿಹರಿಸಿಕೊಳ್ಳಿ. ಈ ವನಸ್ಪತಿಯು ಒಬ್ಬ ಮಹಾತ್ಮನಿಂದ ದತ್ತವಾಗಿರತಕ್ಕದ್ದು. ಯಾವತ್ತು ಔಷಧಗಳನ್ನೂ ಮಾಡಿ ನಿರಾಶರಾಗಿದವರು, ಇದನ್ನು ಪ್ರಯೋಗಿಸತಕ್ಕದ್ದು. ಇದು ಮೋಸಗಾರಿಕೆಯದೆಂದು ತೋರಿಸಿಕೊಟ್ಟರೆ 500 ರೂಪಾಯಿಗಳ ಬಹುಮಾನವಿದೆ. ಬೆಲೆ ರೂ. 1—8—0. ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

S. N. SINHA,
No. 36, P. O. Mirchaiganj (PATNA)

ಪಿತ್ತಕೋಶವನ್ನು ಕಲೋಮಲ್ ಇಲ್ಲದೆ-ಎಚ್ಚರಿಸಿರಿ.

ಮೋಟಾರು ಗಾಡಿಯನ್ನು ನೂಕುವಷ್ಟು ಉತ್ಸಾಹ ಉಂಟಾಗುವುದು.

ಪ್ರತಿ ದಿನವೂ ಎರಡು ಪೈಂಟಿನಷ್ಟು ಪಿತ್ತರಸವು ಪಿತ್ತಕೋಶದಿಂದ ಜೀರ್ಣಕೋಶಕ್ಕೆ ಹರಿಯಬೇಕು. ಹೀಗೆ ಹರಿಯದಿದ್ದರೆ, ನಿಮ್ಮ ಆಹಾರವು ಜೀರ್ಣಿಸದೆ ಮಲಕೋಶದಲ್ಲಿ ಕೊಳೆಯುತ್ತದೆ. ಇದರಿಂದ ಹೊಟ್ಟೆಯಲ್ಲಿ ವಾಯು ಉತ್ಪತ್ತಿಯಾಗಿ ಮಲಬದ್ಧತೆಯುಂಟಾಗುತ್ತದೆ. ನಿಮ್ಮ ಶರೀರ ಯಂತ್ರವೆಲ್ಲಾ ವಿಷಮಯವಾಗಿ, ಪ್ರಪಂಚವೇ ಬೇಡವೆಂಬ ಮನೋ ಜಿಗುಪ್ಸೆಯುಂಟಾಗುತ್ತದೆ.

ಲವಣಗಳು, ರುಚಿಕರವಾದ ಸೌಮ್ಯ ಮತ್ತು ಕಠಿನತರ ಜುಲಾಪುಗಳು, ಇವೆಲ್ಲಾ ತಾತ್ಕಾಲಿಕ ಕ್ಕೆಮಾತ್ರ ಉಪಯೋಗವಾದವುಗಳಲ್ಲದೆ ಮೂಲ ಕಾರಣವನ್ನು ತಾಕಲವುದಿಲ್ಲ. ಆರೀತಿ ಮಾಡಬೇಕಾದರೆ ಜಗತ್ಪ್ರಸಿದ್ಧವಾದ "ಕಾರ್ಟರ್ಸ್ ಲಿಟಿಲ್ ಲಿವರ್ ಪಿಲ್ಸ್"ಗಳು ಮೇಲೆ ಹೇಳಿದ ೨ ಪೈಂಟು ಪಿತ್ತವನ್ನು ತಪ್ಪದೆ ಸಲೀಸಾಗಿ ಉತ್ಪತ್ತಿಮಾಡುತ್ತದೆ. ನಿರಪಾಯ, ಸೌಮ್ಯ ಮತ್ತು ಪೂರ್ಣಗುಣಕಾರಿಯಿದೆ. ಯಾವಾಗಲೂ ಕಾರ್ಟರ್ಸ್ ಲಿಟಿಲ್ ಲಿವರ್ ಪಿಲ್ಸ್‌ಗಳನ್ನೇ ಕೇಳಿರಿ. ಪ್ರತಿಯೊಂದು ಕೆಂಪು ಪೊಟ್ಟಣದ ಮೇಲೆ ಕಾರ್ಟರರ ಹೆಸರನ್ನು ನೋಡಿರಿ ಬೆಲೆ ೧೦ ಆಣೆ.

100 ರುಪಾಯಿಗಳ ಬಹುಮಾನ.
ಸಿದ್ಧ ಗುಪ್ತ ಮಂತ್ರ.

ಲಕ್ಷಾಂತರ ರುಪಾಯಿಗಳ ವೆಚ್ಚದಿಂದಲೂ ಸಾಧಿಸಲಾಗದ ಕೆಲಸವು, ಈ ಮಂತ್ರವನ್ನು ಬರೇ ಕೆಲವು ಸಲ ಪುನರುಚ್ಚರಿಸುವುದರಿಂದಲೇ ಸಾಧ್ಯವಾಗುವುದು. ಇದನ್ನು ಪರಿಣಾಮಕಾರಿಯಾಗಿ ಮಾಡಲು, ಯಾವ ವಿಧವಾಗಿಯೂ ಕಪ್ಪುಪಡಬೇಕಾದ ಅವಶ್ಯಕತೆ ಇಲ್ಲ. ಯಾವ ಸಿದ್ಧತೆಯು ಇಲ್ಲದೇ ಅದು ಫಲಿಸುತ್ತದೆ. ನಿಮಗೆ ಬೇಕಾದವಳು ಎಷ್ಟೇ ಕಠಿನ ಹೃದಯಳೂ ಕ್ರೂರ ಬುದ್ಧಿಯವಳೂ ಆಗಿರಲಿ.

ನಿಜಾಮು ಕರ್ಣಾಟಕ.

(ಸ್ವ. ಸುದ್ದಿಗಾರರಿಂದ)

ಮೋತೀಮಹಲ ವಿಚಾರಣಾ ಸಮಿತಿ.

ಮೋತೀಮಹಲ ವಿಚಾರಣಾ ಸಮಿತಿ ತನ್ನ ಕೆಲಸ ಮುಗಿಸಿತು. ಒಟ್ಟು ೯ ಸಭೆಗಳಾದವೆ. ೪೫ ಮಂದಿ ಸಾಕ್ಷಿಗಳು ವಿಚಾರಿಸಲ್ಪಟ್ಟರು. ೮ ಮಂದಿ ಹೆಂಗಸರನ್ನು ವಿಚಾರಿಸಲಾಯಿತು. ಸಮಿತಿಯವರು ಆವರವರ ಮನೆಗೇ ಹೋಗಿ ಹೆಂಗಸರ ಸಾಕ್ಷ್ಯವನ್ನು ತೆಗೆ ಕೊಂಡರು.

ಸಾಕ್ಷಿಗಳಲ್ಲಿ ಬಹಳ ಮಂದಿ—ಹೆಂಗಸರೆಲ್ಲರೂ ಸಹ—ಪೋಲೀಸರು, ಫಾಯರ ಬ್ರಿಗೇಡಿನವರು, ಸಿನೇಮದವರು ಯಾರೂ ಯಾವ ತರದ ಸಹಾಯವನ್ನೂ ಆ ದಿನ ರಾತ್ರಿ ಮಾಡಲಿಲ್ಲ, ಯಾರನ್ನೂ ಉಳಿಸುವ ಪ್ರಯತ್ನದಲ್ಲಿ ತೊಡಗಲಿಲ್ಲ ಎಂದು ಗಟ್ಟಿಯಾಗಿ ಹೇಳಿದರು. ಸಿನೇಮ ಪ್ರೇಕ್ಷಕರಾಗಿದ್ದ ಗಂಡಸರಾದರೂ ತಮಗೆ ನೆರವಾಗಿದ್ದರೆ ಇಷ್ಟು ಭಯಂಕರ ಗಡ್ಬಡಲವಾಗುತಿರ್ಲಿಲ್ಲ ಎಂದು ಹೆಂಗಸರು ಹೇಳಿದರು.

ಹೆಂಗಸರಲ್ಲಿ ಸಾಕ್ಷಿ ಕೊಟ್ಟವರು ಪ್ರತಿಷ್ಠಿತ ಜನರಿದ್ದಾರೆ. ಶ್ರೀ. ರಾಮಚಂದ್ರ ನಾಯಕರ ಹೆಂಡತಿ ಸಾವಿತ್ರೀಬಾಯಿ ನಾಯಕರಿಗೆ, ಆಟ್ಟದ ಮೇಲಿನಿಂದ ಜೀವಕ್ಕಾಗಿ ಕೆಳಗೆ ಹಾರಿದಾಗ ಹಣೆಗೆ ಗಾಯ ತಗಲಿ ಬಹಳ ಅಪಾಯವಾಗಿತ್ತು. ಅಕೆಗೆ ಈಗ ಗುಣವಾಗುತ್ತಿದೆ. ಯಾರೋ ಪುಣ್ಯಾತ್ಮ ಕೆಳಗಿನಿಂದ ಜಾರಲಿಕ್ಕೆ ಅನುವಾಗುವಂತೆ ಹಲಗೆಯನ್ನು ಹಿಡಿದರೆ ಶ್ರೀ. ಮೂಲತಿ ಬಾಯರನ್ನು ಹಿಂದೆ ಸರಿಸಿ ತಾನು ಮೊದಲೀ ಜಾರಿದನಂತೆ ಒಬ್ಬ ಬ್ಲೇಜರ ಕೋಟಿನ 'ಜಂಟಲ್ಮೆನ್'. ಆಪ್ಪರಲ್ಲಿ ಉರಿ ಸವಿಾಪಿಸಿ, ಆ ಹಲಗೆ ಆ ಪುಣ್ಯಾತ್ಮ ಮರೆಯಾದರು. ಒಂದೇ ಮಾರ್ಗ; ಅಗ್ನಿ ಸಮಾಧಿ. ಇಲ್ಲಿ ಜಿಗಿದು ಬದುಕಿದರೆ ಬದುಕಬೇಕು. ಇದೆಲ್ಲ ಗಡ್ಬಲದಲ್ಲಿ ಅಕೆಯ ಕೈಯೊಳಗಿನ ಬಂಗಾರದ ಬಳೆ ಪೇಗ್ಲೋ ಪತ್ತೆಯಿಲ್ಲದಾಗಿದೆ.

ಜಮುನಾಬಾಯಿ—೧೭ ವರುಷದ ಮಾರವಾಡಿ ಹುಡುಗಿ, ಶ್ರೀಮಂತ ಮನೆತನದವಳು. ಅಕೆ, ಅಕೆಯ ತಾಯಿ, ತಂಗಿ ಮೂವರೂ ಅಂದು ಬಲಿಯಾಗುವವರಿದ್ದರು. ಎಲ್ಲರಂತೆ ಗ್ಯಾಲರಿಗೆ ಓಡಿಬಂದು, ಅಕೆ ಮೊದಲು ಗಂಡುಗಚ್ಚಿ ಹಾಕಿ, ಬಾವಿಯಲ್ಲಿ ಈಸಲು ಜಿಗಿಯುವಂತೆ ಜಿಗಿದಳು. ಏನೂ ಪೆಟ್ಟಾಗಲಿಲ್ಲ. ತಾಯಿ ವಯಸ್ಸಾದವಳು, ಸ್ಕೂಲಕಾಯ—ನಾನು ಸಕ್ತೆನೆಂದು ನಿಮ್ಮ ತಂದೆಗೆ ಹೇಳು, ನೀನು ಬದುಕು, ಹೋಗು ಎಂದು ಕಣ್ಣೀರಿಟ್ಟಳು. ಜಮುನಾಬಾಯಿ ಹಟ ಹಿಡಿದಳು—'ನೀನು ಜಿಗಿಯದಿರಲು, ನಾನೂ ಮನೆಗೆ ಹೋಗುವುದಿಲ್ಲ, ಇಲ್ಲೇ ಪ್ರಾಣ ಬಿಡುತ್ತೇನೆ' ಅಂದಳು. ವಿಧಿಯಿಲ್ಲದೆ ತಾಯಿ ತಂಗಿಯನ್ನು ಕೆಳಗೊಗೆದು ಜಿಗಿದಳು.

ಹೆಂಗಸರಲ್ಲಿ ಲೆಫ್ಟಿನೆಂಟ್ ಮುಜಫರುದ್ದೀನರ ಹೆಂಡತಿ ಅಪರಫುನ್ನೀಸಾ ಬೇಗಂರ ಸಾಹಸ ಬಹಳ ಸ್ತುತ್ಯವಾದುದು. ಆಕೆ ತನ್ನ ಇಜಾರದ ಮೇಲಿನ ಸೀರೆಯನ್ನು ಬಿಚ್ಚಿ, ಅದನ್ನು ಗ್ಯಾಲರಿಯ ಕಟಗರಕ್ಕೆ ಕಟ್ಟಿ, ಅದರ ಮೂಲಕವೇ ತಾನು ಇಳಿಯಲು ಕೆಲವು ಹೆಂಗಸರಿಗೆ ಸಹಾಯ ಮಾಡಿ, ತಾನೂ ಇಳಿದಳು. ಇಷ್ಟು ಪ್ರಸಂಗಾವಧಾನ ಗಂಡಸರಿಗಿದ್ದಿದ್ದರೆ ಈ ಅನಾಹುತ ತಪ್ಪಬಹುದಾಗಿತ್ತು.

ಒಟ್ಟಾರೆ ಈ ವಿಚಾರಣ ಪ್ರಸಂಗ ಆದದ್ದು ಹೀಗೆ.—ಸಿನೇಮಾದಲ್ಲಿ ಆಟ್ಟದ ಮೇಲೆ ಹೆಂಗಸರಿಗಾಗಿ—ಪರದಾ ಸೌಕರ್ಯಕ್ಕಾಗಿ ಆದು ಮೇಲಿರುತ್ತದೆ—ಸ್ಥಳವಿರುತ್ತದೆ. ಅದಕ್ಕೆ ಹಿಂಭಾಗದಲ್ಲಿ, ಚಿತ್ರದ ಯಂತ್ರದ ಕ್ಯಾಬಿನ್ನಿನ ಮಗ್ಗುಲಲ್ಲಿ, ಒಂದು ಬಾಗಿಲು, ಪಾವಟಿಗೆ ಇದೆ. ಆಟ್ಟದ ನೆಲವೆಲ್ಲ ಹಲಗೆ ಹಾಸಿದುದು. ಪಾವಟಿಗೆ ಹಲಗೆಯವು. ಬೆಂಕಿ ಮೊದಲು ಪಾವಟಿಗೆಗೇ ತನ್ನ ಪಾಪಿ ನಾಲಗೆ ಚಾಚಿತು. ಹೀಗಾಗಿ ಯಾರಿಗೂ ಆ ಪಾವಟಿಗೆಗಳ ಮೇಲಿಂದ ಇಳಿಯಲಿಕ್ಕೆ ಬರುವಂತಿದ್ದಿಲ್ಲ. ಬೇರೆ ಯಾವದೂ ಹಾದಿಯಿಲ್ಲ. ಅಟ್ಟದಿಂದ ಸಿನೇಮ ಗೃಹದೊಳಗೆ ಬೆಂಕಿನ ಮೇಲೇ ಜಿಗಿಯಬೇಕು. ಜಿಗಿದವರೆಲ್ಲ ಉಳಿದರು. ಆಟ್ಟಕ್ಕೆ ಹುಡುಗರು, ಮಕ್ಕಳು ಕೆಳಗೆ ಬೀಳದಂತೆ ಭದ್ರತೆಗಾಗಿ ಕಬ್ಬಿಣದ ಕಟಗರ ಸಿ ಆಡಿಯದು ಹಾಕಿತ್ತು ಸುತ್ತಲೂ. ಆ ಕಟಗರ ಹತ್ತಿ, ಕಡೆಯ ಅಂಚಿನ ಮೇಲೆ ನಿಂತು ಹಾರಬೇಕು. ಚಟುವಟಿಕೆಯವರೂ, ಸಾಧಾರಣ ಜನರೂ ಹಾಗೆ ಮಾಡಿದರು. ಸ್ಕೂಲಕಾಯರೂ, ಜಗಿಯುವುದೆಂದರೆ ತಿಳಿಯದೆ ನನಾಬರ ಮನೆತನದವರೂ ಬಲಿಯಾದರು. ಉಳಿದ ಕಾಲದಲ್ಲಿ ಇವರ ಮಕ್ಕಳಿಗೆ ಜೀವನೀಡಿದ ಕಟಗರ—ಇವರ ಜೀವಕ್ಕೆ ಮುಳುವಾಯಿತು. ಸುಟ್ಟು ಹೋದವರಲ್ಲಿ ಪ್ರಭುಗಳ ಹತ್ತರ ಬಂಧು ಬಾವೂವ ಅಲೀ ಖಾನರ ಮಗಳೂ, ಮೊದಲು ಕೊತ್ವಾಲರಾಗಿದ್ದ ಇನಾಮದ ಜಂಗರ ಮಗಳೂ ಇದ್ದರು. ಕೋರೇಕಲ್ ಶಂಕರರಾವ್ ಎಂಬ ಬ್ರಾಹ್ಮಣನ ಮನೆ ಹಾಳಾಗಿ ಹೋಯಿತು. ಅವನ ತಾಯಿ, ತಂಗಿ, ಹೆಂಡತಿ ಎಲ್ಲಾ ಆಹುತಿಯಾದರು.

ಬೆಂಕಿ ಲಂಬರ್ ರೂಮಿನಿಂದ ಹೊರಟಿತೆಂದೂ ಅಲ್ಲಿ ಫಿಲ್ಮುಗಳಿದ್ದುದರಿಂದ ಇಷ್ಟು ವಿಪರೀತವಾಯಿತೆಂದೂ ತಜ್ಞರ ಹೇಳಿಕೆಯಾಯಿತು. ಬೆಂಕಿ ಹತ್ತಿದುದು ಹೇಗೆ ಎಂಬುದು ತಿಳಿಯಲಿಲ್ಲ. ವಿದ್ಯುತ್ತಿನ ಒಂದು ಪ್ರಳಯತಾಂಡವವಾಗಿರಬೇಕೆಂದು ಜನರಿಗನಿಸಿದೆ.

NIMBIN

ಜೀರ್ಣಕಾರಿಯಾದ ರಕ್ತ ಶುದ್ಧಿಯ ಟಾನಿಕ್.

- ನಿಂಬಿನ್—ರಕ್ತದಿಂದ ವಿಷಮಯವಾದ ಅಶುದ್ಧತೆಗಳನ್ನು ಹೋಗಲಾಡಿಸುತ್ತದೆ.
- ನಿಂಬಿನ್—ರೋಗದ ಮೂಲದ ವರೆಗೆ ವ್ಯಾಪಿಸತಕ್ಕ ಔಷಧವಾಗಿದೆ.
- ನಿಂಬಿನ್—ನಿಜವಾಗಿಯೂ ಆಯುರ್ವಾಯವನ್ನು ಹೆಚ್ಚಿಸಿ, ಶರೀರದಲ್ಲಿನ ರಕ್ತದ ಅಂಗಭೂತದ್ರವ್ಯಗಳನ್ನು ವೃದ್ಧಿಗೊಳಿಸುತ್ತದೆ.
- ನಿಂಬಿನ್—ಕರುಳಿನಲ್ಲೇನೂ ಉಳಿಯದೆನಿಶ್ಶೇಷವಾಗಿ ಬರಿದಾಗುವಂತೆ ಖಚಿತಗೊಳಿಸುತ್ತದೆ.
- ನಿಂಬಿನ್—ಜೀರ್ಣಶಕ್ತಿಯನ್ನು ಸುಧಾರಿಸಿ ಅತ್ಯುತ್ಕೃಷ್ಟವಾದ ಹಸಿವೆಯನ್ನುಂಟು ಮಾಡುತ್ತದೆ.
- ನಿಂಬಿನ್—ರಕ್ತವನ್ನು ಪರಿಶುದ್ಧಗೊಳಿಸಿ, ನಿಮ್ಮನ್ನು ಉಜ್ವಲವಾದ ಆರೋಗ್ಯಸ್ಥಿತಿಯಲ್ಲಿ ಇರಿಸುತ್ತದೆ.
- ನಿಂಬಿನ್—ಚರ್ಮದ ಸೌಂದರ್ಯವನ್ನು ಕೆಡಿಸತಕ್ಕ ಎಲ್ಲ ಚರ್ಮವ್ಯಾಧಿಗಳನ್ನೂ ನಿವಾರಿಸುತ್ತದೆ.

ಮೈಬಣ್ಣಕ್ಕಾಗಿಯೂ, ಶರೀರದ ಸುವ್ಯವಸ್ಥೆಗಾಗಿಯೂ ನಿಂಬಿನನ್ನೇ ಉಪಯೋಗಿಸಿರಿ.

ಬಾಟಲಿಯೊಂದಕ್ಕೆ ಬೆಲೆ ರೂ. 1—10—0.
ಪೋಸ್ಟೇಜ್ ಮತ್ತೂ ಪ್ಯಾಕಿಂಗ್ ಪ್ರತ್ಯೇಕ.

Sole Distributors:

Variety Trading Corporation,
257, Chickpet, Bangalore City.

Stockists: **Appah & Co.,**
China Bazaar Street, Madras.

ನೋಟಿಸು.

ಕಾಸರಗೋಡು ತಾಲೂಕು ಕಳನಾಡು ಗ್ರಾಮದ ವರವಂಗ್ರೆಯಲ್ಲಿರುವ ಕುಂಞಂಮು ಬ್ಯಾರಿಗಳ ಮಗ ಅಬ್ಬುಬಕರನು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ—

ನನ್ನ ತಾಯಿ ಐಚು ಯಾನೆ ಐಸಮ್ಮನ ಮಕ್ಕಳಾದ ನಾನು ಮತ್ತು ನನ್ನ ಸಹೋದರರು ಕೂಡಾ ಕೊಳಂಬಿನಲ್ಲಿದ್ದು ನನ್ನ ತಾಯಿ ಸದರಿ ಐಸಮ್ಮನು ಮಾತ್ರ ಇಲ್ಲಿ ಇರುವಲ್ಲಿ ಇತ್ತಲಾಗೆ ಕಳೆದ ಎಪ್ರಿಲು ತಿಂಗಳಲ್ಲಿ ನನ್ನ ತಾಯಿಯು ಕಠಿಣ ಕಾಹಿಲೆಯುಲ್ಲಿದ್ದು ನಾನು ಮಗೈರೆ ಆವಳ ಮಕ್ಕಳು ಯಾರೊಬ್ಬರೂ ಇಲ್ಲದ ಸಮಯ ಸದರಿ ಐಸಮ್ಮನೆ ಪುಳ್ಳಿಯಾನೆ ನನ್ನ ಸಹೋದರ ಆಬ್ದುಲ್ಲನ ಮಗಳ ಗಂಡನಾದ ಕಳನಾಡು ಗ್ರಾಮದ ಕೊಚನಾಟಲ್ಲಿರುವ ಬೆಲಿಯ ಅಂದು ಬ್ಯಾರಿಗಳ ಮಗ ಮಹಮ್ಮದ ಯಾನೆ ಮಮ್ಮಣಿ ಹಾಜಿಯು ಬಂದು ನಮ್ಮ ತಾಯಿ ಸದರಿ ಐಸಮ್ಮನ ಹೆಸರಲ್ಲಿ ನಮ್ಮ ಹಣದಿಂದ ಕ್ರಯಕ್ಕೆ ಪಡೆದು, ನಮ್ಮ ಹಣದಿಂದ ಹೇರಳ ಕೃತಗಳು ಮಾಡಿ ಅನುಭವಿಸಿ ಬರುವ ಬಾಗ್ಯತು ವಗೈರೆ ಆಸ್ತಿಯನ್ನು ಸ್ವಾಧೀನಮಾಡಿಕೊಳ್ಳುವ ಇರಾದೆಯಿಂದ ಸದರಿ ಐಸಮ್ಮನು ಕಠಿಣ ಕಾಹಿಲೆಯಿಂದ ಮರಣಾವಸ್ಥೆಯಲ್ಲಿದ್ದು ಸ್ಮೃತಿಇಲ್ಲದ ಸಮಯ ಆವಳ ತಿಳುವಳಿಕೆ ವ ಒಪ್ಪಿಗೆ ವಿನಹಾ ಆವಳ ಹೆಬ್ಬೆಟ್ಟಿನ ಮುದ್ರೆಗಳನ್ನು ಖಾಲಿ ಕಾಗದಗಳಲ್ಲಿ ತೆಗದು ಆವುಗಳ ಮೇಲೆ ಸದರಿ ಮಮ್ಮಣಿ ಹಾಜಿ ಹೆಸರಲ್ಲಿ ವಗೈರೆ ಪ್ರೋ. ನೋಟುಗಳು ಮುಂತಾಗಿ ಸೈಪ್ಟಿಸಿರುವದಾಗಿ, ನಾನು ನನ್ನ ತಾಯಿಯು ಮರಣದ ಸಂಗತಿ ತಿಳಿದು ಕೊಳಂಬಿನಿಂದ ಇಲ್ಲಿ ಬಂದನಂತರ ನನ್ನ ತಿಳುವಳಿಕೆಗೆ ಬಂಽರುತ್ತದೆ. ಹಾಗೆ ಏನಾದರೂ ನೋಟುಗಳು ವಗೈರೆ ನನ್ನ ತಾಯಿಯು ಬರಕೊಟ್ಟ ಹಾಗೆ ಆವಳ ಹೆಬ್ಬೆಟ್ಟಿನ ಮುದ್ರೆಯ ಮೇಲೆ ಸದರಿ ಮಮ್ಮಣಿ ಹಾಜಿಯು ಯಾ ಬೇರೆಯವರ ಹೆಸರಲ್ಲಿ ಸೃಷ್ಟಿಸಿದ್ದಾದರೆ ಅಂಥಾ ಸನದುಗಳು ಯಾ ಆವುಗಳ ಮೇಲ್ ಬೀಟುಗಳು ಬೇರೆ ಯಾರಾದರೂ ಪಡಕೊಂಡದ್ದಾದರೆ ಅಂಥವುಗಳು ಸಹ ಮೃತಳ ಹೆಸರಲ್ಲಿ ಇರುವ ನನ್ನ ಸದರಿ ಆಸ್ತಿ ಮೇಲಾಗಲೀ ಆವಳ ಮೇಲಾಗಲಿ ಬಾಧಿಸತಕ್ಕದ್ದಲ್ಲ, ಸಿಂಧು ಯಾ ಮಂಜೂರು ಆಗತಕ್ಕದ್ದಲ್ಲವೆಂತ ಕೂಡಾ ಈ ಮೂಲಕ ತಿಳಿಸೋಣಾಗುತ್ತದೆ.

ಕಳನಾಡು ಗ್ರಾಮ, ತಾ. 13—7—1936. } A. K. Aboobakar.

WIN RS. 5,000

-MOTOR CAR, Radio Sets, Gramophones, Typewriters and Study Scholarships.

Rs. 2,500—or a MOTOR CAR—First Prize (all correct)
Rs. 1,000—Second Prize (one error)
Rs. 500—Third Prize (two errors)
Rs. 500—Five Prizes of Rs. 100 each.
Rs. 300—Six Prizes of Radio Sets, Gramophone and Typewriters.
Rs. 200—Ten Scholarships for training in any of the under-mentioned subjects.

AND SEVERAL EXTRA PRIZES.

Here are five "SUBJECT" words which you have to place in order of their simplicity and usefulness to youngmen:

TYPEWRITING CORRESPONDENCE
OFFICE-ROUTINE SHORTHAND BOOKKEEPING

EXAMPLE—The first place is given to TYPEWRITING, as it is the first essential and most useful subject nowadays.

Now find out your choice and place the second, third, fourth and fifth words in the following column:

1	2	3	4	5
TYPEWRITING				

The sealed solution is deposited with the Continental Bank of India, Ltd., Bombay.

The result will be published in papers on 1st August, 1936.

RULES—1. An Entrance fee of Re. 1- per entry must accompany every entry by M. O. or postal order. 2. Any number of entries may be sent written on plain paper with full and legible address of the sender. 3. The Director's decision shall be final and legally binding in all matters. 4. In case of tie, the prize money shall be distributed equally among the successful winners. 5. The entrance fee is not refundable. 6. The result can be posted to the competitors sending an addressed and stamped envelope.

THE FEDERAL PRESS
DADAR, BOMBAY.

ಜಾತಕಫಲ.

ಮುಂದಿನ 12 ತಿಂಗಳುಗಳ ಜಾತಕಫಲ ಇಂಗ್ಲೀಷಿನಲ್ಲಿ—ಕೊಚ್ಚಿಯ ದಿವಂಗತ ಮಹಾರಾಜರವರಿಂದ ಪ್ರೊಫೆಸ್ಸರ್ ಎಂಬ ಬಿರುದನ್ನೂ ಭಂಗಾರದ ಪದಕವನ್ನೂ ಪಡೆದಿರುವ ಪ್ರಸಿದ್ಧ ಮಲೆಯಾಳಿ ಜ್ಯೋತಿಷ್ಯರಿಂದ—ರೂ. 2/-. ಸಂಪೂರ್ಣ ಜಾತಕಫಲ ರೂ. 10/-. ಭವಿಷ್ಯದ ಕುರಿತು 5 ಪ್ರಶ್ನೆಗಳಿಗೆ ರೂ. 1/-.

ಮಂತ್ರಗಳು.

ಜೀವನ, ಪ್ರಣಯ, ಪರೀಕ್ಷೆ, ವ್ಯಾಜ್ಯ, ನಂಬು ಇತ್ಯಾದಿಗಳಲ್ಲಿ ಜಯ, ಮತ್ತು ಅನಿಷ್ಟ ಗ್ರಹಗಳ, ಭೂತಪ್ರೇತಾದಿಗಳ ಬಾಧೆಯನ್ನು ನಿವಾರಿಸಲಿಕ್ಕಾಗಿ ಬೆಳ್ಳಿಯ ತಾಯಿತ ರೂ. 2—8—0; ಇನ್ನಷ್ಟು ಉತ್ತಮ ಪರಿಣಾಮಕಾರಿಯಾದುದು ರೂ. 5/- (ಹೆಚ್ಚಿನ ವಿವರಗಳಿಗೆ ಸ್ಟ್ಯಾಂಪಿಟ್ಟು ಬರೆಯಿರಿ.)

ಜನನದ ತಾರೀಕನ್ನೂ, ಸಮಯವನ್ನೂ ನಿರೀಕ್ಷಿಸಿರಿ. ಗೊತ್ತಿಲ್ಲದಿದ್ದರೆ, ಬರೆಯುವ ಸಮಯವನ್ನು ನಮೂದಿಸಿರಿ. ಪೋಸ್ಟೇಜ್ 6 ಆಣೆಗಳು ಪ್ರತ್ಯೇಕ.

Prof. KOCHUPARET, Z., Kottayam P. O., S. India.

ದೇಶಾಭಿಮಾನಿಗಳೆಲ್ಲಾ ಪ್ರೋತ್ಸಾಹಿಸಬೇಕಾದ ದೇಶೀಯ ಕೈಗಾರಿಕೆ.

ದಿ ತ್ರಿಲೋಕ ಸ್ಟೀಲ್ ಟ್ರಂಕ್ ವರ್ಕ್ಸ್, ಮದ್ರಾಸು.

ಇವರ ಉತ್ಕೃಷ್ಟ, ನಾಜೂಕಾದ ಹಾಗೂ ಬಹಳ ಬಾಳಿಕೆಯ ತ್ರಿಲೋಕ (ನಾರದ) ಮಾರ್ಕಿನ ಸ್ಟೀಲ್ ಟ್ರಂಕುಗಳು ಮತ್ತು ಸೂಟ್‌ಕೇಸುಗಳು.



. ಈ ಕಾರ್ಖಾನೆಯಲ್ಲಿ ತಯಾರಾಗುವ ಪ್ರತಿ ಒಂದು ಸಾಮಾನು ಬಹುವರ್ಷಗಳಲ್ಲಿ ತರಬೇತು ಹೊಂದಿದ ಕೆಲಸಗಾರರಿಂದಲೇ ತಯಾರಾಗುತ್ತಿವೆ. ಆದುದರಿಂದಲೇ ಇಲ್ಲಿನ ವಸ್ತುಗಳು ಅಂದಚಂದದಲ್ಲೂ ಬಂದೋಬಸ್ತಿನಲ್ಲೂ ಕುಂದಿಲ್ಲವೆಂಬುದು ನಿಸ್ಸಂದೇಹ. ಇಲ್ಲಿ ಬಗೆಬಗೆ ಅಳತೆಯ ಟ್ರಂಕುಗಳು, ಸೂಟ್‌ಕೇಸುಗಳು, ಹಣದ ಪೆಟ್ಟಿಗೆಗಳು, ಅಭರಣಗಳನ್ನಿರಿಸುವ ಕೈಪೆಟ್ಟಿಗೆಗಳು, ಟೇಬಲಿಗೆ ಫಿಕ್ಸ್ ಮಾಡುವ ಕ್ಯಾಷ್‌ಬೋಕ್ಸ್‌ಗಳು ಮುಂತಾದುವು ಸರ್ವಕಾಲವೂ ವಿಕ್ರಯಕ್ಕೆ ಸಿದ್ಧವಿರುತ್ತವೆ.

ವ್ಯಾಪಾರಸ್ಥರಿಗೆ ಸುಸಂದರ್ಭ. ನಮ್ಮ 'ಷೋ'ರೂಮಿಗೆ ಒಮ್ಮೆ ಸಂದರ್ಶಿಸಿ ಅಥವಾ ಒಂದು ಸಣ್ಣ ಆರ್ಡರು ಕೊಟ್ಟು ಇದರ ನಿಜತ್ವವನ್ನು ಪರೀಕ್ಷಿಸಿರಿ. ನಿಮಗೆ ಖಚಿತವಾಗುವುದು.

ಹೆಚ್ಚಿನ ವಿವರಕ್ಕೆ ಮತ್ತು ಕ್ರಯದ ಪಟ್ಟಿಗೆ ಈ ವಿಳಾಸಕ್ಕೆ ಬರೆಯಿರಿ.

ದಿ ತ್ರಿಲೋಕ ಸ್ಟೀಲ್ ಟ್ರಂಕ್ ವರ್ಕ್ಸ್,
ಪ್ರೊಪ್ರೈಟರ್:—ಜಿ. ಟಿ. ಮಾಣಿಕ ನಾಯಗರ್.

ಹೆಡ್ ಆಫೀಸು: —22, ಬೇಕರ್ ಸ್ಟ್ರೀಟ್, ಜಿ. ಟಿ. ಮದ್ರಾಸು.

ಬ್ರಾಂಚ್ ಆಫೀಸು:—ರೈಲ್ವೇ ಗುಡ್ಸ್‌ಶೆಡ್ ಬಳಿ, ಮಂಗಳೂರು, ದ. ಕ.

ಫಲರಸ.
(ಅಶುಕೋಷ)

'ಫಲದಾನ', 'ಫಲಶೋಭನ', 'ಫಲಾಹಾರ' ಮೊದಲಾದ ಪದಗಳೂ, 'ಫಲಂ ಮನೋರಥ ಫಲಂ' ಮೊದಲಾದ ಮಂತ್ರಗಳೂ ನಮ್ಮ ಸಂಸ್ಕಾರಗಳಲ್ಲಿಯೂ ಜೀವನಕ್ರಮದಲ್ಲಿಯೂ ಅನುಸರಿಸಿ ಬಂದಿವೆ. 'ಇಂದು ಉಪವಾಸ. ಕೇವಲ ಫಲಾಹಾರದಿಂದಿರಬೇಕು' ಎಂಬ ಮಾತು ಯಾವಾಗಲೂ ಹಣ್ಣುಗಳು ದೊರೆಯುತ್ತಿದ್ದರೆ ಉಪವಾಸಗಳ ನೆವದಿಂದ ತಿಂಗಳಿಗೊಂದೆರಡು ಬಾರಿಯಾದರೂ ಮನುಷ್ಯರು ಅತ್ಯದ ಆಹಾರವನ್ನು ಬಿಟ್ಟು ಹಣ್ಣುಗಳನ್ನೇ ಉಪಯೋಗಿಸಬೇಕು ಎಂದು ನಮ್ಮ ಪೂರ್ವಿಕರು ಮಾಡಿದ ಕಟ್ಟಳೆ. ನಮ್ಮ ಹಿರಿಯರಾದ ಮಹರ್ಷಿಮುನಿಗಳು ಕೇವಲ ಫಲಾಹಾರ—ಶಾಕಾಹಾರಗಳಿಂದ ನೂರಾರು ವರ್ಷಗಳು ಬದುಕಿದ್ದರೆಂದು ನಾವು ನಂಬುತ್ತೇವೆ.

ಆದರೆ ಈಗಿನ ನಮಗೆ ಹಣ್ಣುಗಳ ಅಥವಾ ಅವುಗಳ ರಸದ ಉಪಯೋಗವು ಮರೆತುಹೋಗಿ, ನಾವು ಪಾಶ್ಚಾತ್ಯರಿಂದ ಅವುಗಳ ಉಪಯೋಗದ ಉಪದೇಶ ಪಡೆಯಬೇಕಾಗಿದೆ. ಬೇರೆ ಆಹಾರ ಪದಾರ್ಥಗಳಲ್ಲಿರುವ ಪೋಷಕ ದ್ರವ್ಯಗಳಿಂದ ಪ್ರತ್ಯೇಕವಾದ ಪೋಷಕದ್ರವ್ಯಗಳು ಹಣ್ಣುಗಳಲ್ಲಿವೆ. ಹಣ್ಣು ಸಕ್ಕರೆ, ಎಸಿಡ್, ಡಿಪ್ಪಿಸ್‌ಗಳು ಹಣ್ಣುಗಳಲ್ಲಿ ದ್ರವರೂಪದಲ್ಲಿವೆ. ಹಣ್ಣಿನ ಜಿಪ್ಪೆಗಳಲ್ಲಿ ಸೆಲ್ಯುಲೋಜ್, ಪ್ರೊಟೀನ್, ಇತರ ಲವಣಗಳೂ ಇವೆ.

ಫಲರಸಗಳೆಲ್ಲಾ ಸಾಧಾರಣವಾಗಿ ಸಿಹಿಯಾಗಿದ್ದು ಅವುಗಳಲ್ಲಿ ಸೆಲ್ಯುಲೋಜ್ ಒಂದರ ಹೊರತು ಇತರ ದ್ರವ್ಯಗಳೆಲ್ಲಾ ಸೇರಿರುತ್ತವೆ. ಫಲರಸದಲ್ಲಿ ಸೋಡಿಯಂ, ಪೊಟಾಷಿಯುಂಗಳು ಇರುವುದರಿಂದ ರಕ್ತದಲ್ಲಿಯೂ ಸ್ನಾಯುತಂತುಗಳಲ್ಲಿಯೂ ಇರಬೇಕಾದ ಲವಣಗಳನ್ನವು ವೃದ್ಧಿಪಡಿಸುವುವು.

ಹಣ್ಣುಗಳ ರಸದಲ್ಲಿ ಹಣ್ಣುಗಳಿಗೆ ಸುವಾಸನೆ ಕೊಡುವಂತಹ ಒಂದು ರೀತಿಯ ಸುಗಂಧ ತೈಲವಿದ್ದು ಆ ತೈಲವು ಜೀರ್ಣಶಕ್ತಿಯನ್ನು ವೃದ್ಧಿಪಡಿಸುವ ಗುಣವುಳ್ಳುದಾಗಿದೆ.

ಫಲರಸಗಳನ್ನು ಹಿಂಡಿ ತೆಗೆದು ಅವುಗಳ ಸುವಾಸನೆ-ಸುರುಚಿಗಳು ಕೆಡದಂತೆ ಬಹುಕಾಲ ಇರಿಸುವ ಉಪಾಯಗಳನ್ನು ಶೋಧಕರು ಕಂಡುಹಿಡಿದಿದ್ದಾರೆ. ಪಾಶ್ಚಾತ್ಯ ದೇಶಗಳಲ್ಲಿ ಮದ್ಯಪಾನ ನಿರೋಧ ಪ್ರಚಾರವು ನಡೆಯಲಾರಂಭವಾದಂದಿನಿಂದ ಜನರಲ್ಲಿ ದ್ರಾಕ್ಷಾರಸ ಮೊದಲಾದ ಫಲರಸಗಳನ್ನುಪಯೋಗಿಸುವ ಚಟವು ಹೆಚ್ಚುತ್ತಿದೆ.

ನೇರಳೆ, ಜಂಬುನೇರಳೆ, ದ್ರಾಕ್ಷೆ, ಅನಾನಸು ಮೊದಲಾದವುಗಳ ರಸವು ಹಾಲಿಗೆ ಸಮಾನವಾದವುಗಳು. ಈ ಫಲಗಳ ರಸಗಳಲ್ಲಿ ಸಕ್ಕರೆ ಸೇರಿದೆ. ಆದರೆ ಸಿಂಬೆ, ಕಿತ್ತಳೆಗಳ ರಸದಲ್ಲಿ ಸಕ್ಕರೆಯ ಅಂಶವು ಕಡಮೆ.

ಫಲರಸದಲ್ಲಿ ತುರಿಕಜ್ಜಿ ಮೊದಲಾದ ಚರ್ಮರೋಗಗಳನ್ನು ನಿವಾರಿಸುವ ಶಕ್ತಿಯುಂಟು, ಆದ್ದು ಸಿಹಿಯಾದ ಫಲಗಳೊಂದಿಗೆ ಇತರ ಕಾಯಿಪಲ್ಲೆಗಳನ್ನೂ ಬೆಣ್ಣೆಯನ್ನೂ ಸೇವಿಸುವುದರಿಂದ ಆ ಫಲಗಳಲ್ಲಿರುವ ಪೋಷಕಶಕ್ತಿಯು ಮತ್ತಷ್ಟು ಹೆಚ್ಚುತ್ತದೆ.

ಆರೋಗ್ಯ ವಿಜ್ಞಾನ

ಆರೋಗ್ಯದ ಹತ್ತು ತುಣುಕುಗಳು.
(ಲೇ:—ಯ. ನಾ. ವಿಶ್ವಾಮಿತ್ರ).

೧. ರಾತ್ರಿ-ಬೇಗನೆ ಮಲಗಿ ನಾಲ್ಕು ಗಂಟೆಯೊಳಗೆ ಏಳು, ಎದ್ದೊಡನೆ ಕಾಲುತಾಸಿನ ವರೆಗಾದರೂ ನಿನ್ನ ಇಷ್ಟದೇವತೆಯನ್ನು ಭಕ್ತಿಯಿಂದ ಪ್ರಾರ್ಥಿಸು. ಇದರಿಂದ ನಿನ್ನ ಮನಸ್ಸು ನಿರ್ಮಲವಾಗುವುದು. ಪ್ರಾತಃಕಾಲವನ್ನು ಉತ್ಸಾಹದಿಂದ ಕಳೆ. ಅಂದರೆ ಇಡೀ ದಿನವೂ ನೀನು ನಗುನಗುತ್ತಾ ಆರೋಗದಿಂದಲೇ ಇರುವಿ.

೨. ಸೂರ್ಯನು ಮೂಡುವ ಮೊದಲು ಮುಖಹಲ್ಲುಗಳನ್ನು ನಿರ್ಮಲ ಮಾಡಿ, ಉಷಃಪಾನ ಮಾಡು. ಇದರಿಂದ ಹೊಟ್ಟೆಯು ಸಶಕ್ತ-ನಿರೋಗಿಯಾಗುವುದು.

೩. ದೇಹವು ಸಹಿಸುವಂತಿದ್ದರೆ ಹೊತ್ತು ಹುಟ್ಟುವ ಮೊದಲು ತಣ್ಣೀರಿನಿಂದ (ಬಾವಿ, ಕೆರೆ, ನದಿಗಳಲ್ಲಿ) ಘರ್ಷಣಸ್ನಾನವನ್ನು ಮಾಡು. ಸ್ಪರ್ಶೇಂದ್ರಿಯದ ತರುಣನು ಮುಂಜಾನೆ ಮತ್ತು ಸಂಜೆ ಎರಡೂ ಹೊತ್ತು ತಣ್ಣೀರಿನಿಂದ ಸ್ನಾನ ಮಾಡಲಿ.

೪. ಮನಸ್ಸನ್ನೂ ಇಂದ್ರಿಯಗಳನ್ನೂ ಜಯಿಸಲು ಅನವರತ ಸಾಧನೆ ಮಾಡು. ಮನಸ್ಸನ್ನೂ ಇಂದ್ರಿಯಗಳನ್ನೂ ಜಯಿಸದಿದ್ದರೆ ನಿನಗೆ ಶಾಶ್ವತ ಆರೋಗ್ಯವು ಲಭಿಸಲಾರದು. ನೀನು ಗೃಹಸ್ಥಾಶ್ರಮಿಯಾಗಿದ್ದರೆ ಪತ್ನೀಸಂಗದ ಸಮಯವನ್ನು ಆದಷ್ಟು ದೂರ ಹಾಕು. ಆರೋಗ್ಯದ ಗುಟ್ಟು ಬ್ರಹ್ಮಚರ್ಯ ಒಂದರಲ್ಲೇ ಇದೆ ಎಂಬುದನ್ನು ಮರೆಯಬೇಡ.

೫. ದಿನಕ್ಕೆರಡು ಸಲ, ಕನಿಷ್ಠಪಕ್ಷ ಒಮ್ಮೆಯಾದರೂ, ಶರೀರವು ಜೋರೆಂದು ಬೆವರುವ ತನಕ ವ್ಯಾಯಾಮವನ್ನು ಮಾಡು. ಪಾಶ್ಚಾತ್ಯರ ವ್ಯಾಯಾಮಕ್ಕಿಂತಲೂ ನಮ್ಮ ದೇಶೀಯ ಅಂಗಸಾಧನೆಗಳೇ ಶ್ರೇಷ್ಠವಾದುವೆಂದು ವ್ಯಾಯಾಮಶಾಸ್ತ್ರಾಚಾರ್ಯ ಬಾಲಬ್ರಹ್ಮಚಾರಿ ಪ್ರೊಫೆಸರ್ ಮಾಣಿಕರಾಯರೂ, ಜಗಜಟ್ಟಿ ಗಾಮ, ಗುಲಾಮ ಮೊದಲಾದ ವ್ಯಾಯಾಮವಿಶಾರದರೂ ಸಾರುತ್ತಿರುವರು. ವ್ಯಾಯಾಮಗಳಲ್ಲಿ ಸೂರ್ಯನಮಸ್ಕಾರವೇ ಸರ್ವೋತ್ತಮವಾದುದರಿಂದ ಮಂತ್ರಪೂರ್ವಕವಾಗಿ ಅಭ್ಯಾಸ ಮಾಡು. ವಿದ್ಯಾರ್ಥಿಗಳು–ಮಾನಸಿಕ ವ್ಯವಸಾಯಿಗಳು–ಪ್ರಾಣಾಯಾಮ, ಶೀರ್ಷಾಸನಗಳ ಮರ್ಮವನ್ನು ತಿಳಿದು ಆಚರಣೆಗೆ ತಂದುಕೊಳ್ಳುವುದು ಉತ್ತಮ. ಸ್ತ್ರೀಸಂಗ–ಸ್ಪರ್ಶೇಂದ್ರಿಯವಾದ ದಿನ ಮುಂಜಾನೆ ತಣ್ಣೀರುಸ್ನಾನಮಾಡಿ ವ್ಯಾಯಾಮ ಮಾಡು. ಇದರಿಂದ ಕಳೆದುಹೋದ ಶಕ್ತಿಯು ಪುನಃ ಸೇರುವುದು.

೬. ನಿರ್ಮಲವಾದ ವಾಯು, ಆಹಾರ, ನೀರನ್ನೇ ಸೇವನೆ ಮಾಡು. ನಡೆನುಡಿಗಳಲ್ಲಿ ಮಿತವಾಗಿರು. ಆಡಂಬರ ಬೇಡ. ಊಟವು ಮಿತವಾಗಿ, ಸಾತ್ವಿಕವಾಗಿ, ಸಾಧ್ಯವಿದ್ದಷ್ಟು ನೈಸರ್ಗಿಕವಾಗಿರಲಿ. ಮಾಂಸಾಹಾರ ತ್ಯಜಿಸು. ಊಟ ಮಾಡುವಾಗ ಎದುರು ಗೋಡೆಯಲ್ಲಿ ಮಾ। ಗಾಂಧಿ, ಸ್ವಾಮಿ ವಿವೇಕಾನಂದ, ಮಹರ್ಷಿ ದಯಾನಂದ, ಮಾ। ರಾಮಕೃಷ್ಣ ಪರಮಹಂಸ ದೇವ, ಬ್ರಹ್ಮಚಾರಿ ಮಾಣಿಕರಾಯರ ಪಠಗಳನ್ನಿಟ್ಟುಕೊಂಡು ತುತ್ತಿಗೊಮ್ಮೆ ಆ ಕಡೆ ದೃಷ್ಟಿ ಹರಿಸುತ್ತಾ, ಅವರ ಶಕ್ತಿ, ತೇಜಸ್ಸು, ಓಜಸ್ಸು, ಕೀರ್ತಿ, ಇಂದ್ರಿಯನಿಗ್ರಹ ಮೊದಲಾದ ಸದ್ಗುಣಗಳು ನಿನ್ನನ್ನು ಸೇರುತ್ತಿವೆ—ಸೇರಿವೆ ಎಂಬ ಭಾವನೆಯಿಂದ ಊಟ ಮಾಡು. ನೀನೂ ಖಂಡಿತ ಆ ಮಹಾತ್ಮರಂತೆ ಲೋಕಮಾನ್ಯನಾಗುವಿ.

೭. ಹಗಲು ನಿದ್ರೆಮಾಡಬೇಡ. ಸದಾ ಉದ್ಯೋಗಿಯಾಗಿರು. ಉತ್ತಮವಾದ ಒಂದು ಧ್ಯೇಯವನ್ನಿಟ್ಟುಕೊಂಡು (ಕರ್ಣಾಟಕ ದೇಶ—ಭಾಷೆಯ ಉದ್ಧಾರ ಇತ್ಯಾದಿ) ಹೋರಾಡು. ಸೋಲಿಗೆ ಬೆದರಬೇಡ. ನಿನ್ನ ಕೆಲಸಗಳಲ್ಲಿ ತನ್ಮಯನಾಗುವ ಅಭ್ಯಾಸ ಮಾಡು.

೮. ದುರ್ವ್ಯಸನಗಳನ್ನು ತ್ಯಜಿಸು. ಮಲಬದ್ಧತೆ ಇದ್ದಲ್ಲಿ ಔಷಧ ತೆಗೆದುಕೊಳ್ಳಬೇಡ. ಹೆಚ್ಚು ಬಿಸಿನೀರನ್ನು ಕುಡಿದು ವ್ಯಾಯಾಮ ಶೀರ್ಷಾಸನಗಳನ್ನು ಮಾಡು. ಖಂಡಿತ ಅಪಾರ ಲಾಭ ಹೊಂದುವಿ.

೯. ಇಚ್ಛಾಶಕ್ತಿಯನ್ನು ಬೆಳೆಸು, ಉತ್ತಮ ಪುಸ್ತಕಗಳನ್ನು ಮಾತ್ರ ಓದು.

೧೦. ಆರೋಗ್ಯದ ಕುರಿತು ಯಾವ ಡಾಕ್ಟರನ ಮಾತನ್ನೂ ಮೊದಲು, ಅವನ ಬಿರುದುಗಳಿಗೆ ಮರುಳಾಗಿ ನಂಬಬೇಡ. ಆಚರಣೆಯಲ್ಲಿ ತಂದು ನೋಡು. ಇದು ದುಡ್ಡಿನ ಯುಗವಾದುದರಿಂದ ಯಾವ ಮಹಾತ್ಮನ ಮಾತಿಗೂ ಬೆಲೆಕೊಡದೆ, ನಿನ್ನ ಅನುಭವವನ್ನೇ ನಂಬು.

ಎನ್ನೆಟ್ ಕಿಲ್ಲರ್‌ಮನ್‌ರವರ ಹತ್ತು ಆರೋಗ್ಯ ಸೂಚನೆಗಳು.

೧. ನಿನ್ನ ಮನಸ್ಸನ್ನು ಶುದ್ಧವಾಗಿ ಇಟ್ಟುಕೊಳ್ಳಿರಿ! ಆತ್ಮಶುದ್ಧಿಯೇ ದೇಹ ಶುದ್ಧಿ.

೨. ಆಗಾಗ ಸರಿಯಾದ ಕ್ರಮದಿಂದ ಸ್ನಾನವನ್ನು ಮಾಡಿರಿ. ಆ ಮೂಲಕ ಚರ್ಮದಲ್ಲಿರುವ ರಂಧ್ರಗಳನ್ನು ಶುಚಿಯಾಗಿಯೂ, ಆರೋಗ್ಯವಾಗಿಯೂ ಇಟ್ಟುಕೊಳ್ಳಿರಿ.

೩. ಕೊನೇಪಕ್ಷ ದಿನಕ್ಕೆ ಎಂಟು ಘಂಟೆಯ ಕಾಲವಾದರೂ ತಪ್ಪದೆ ನಿದ್ರೆಯನ್ನು ಮಾಡಿರಿ.

೪ ಪ್ರತಿದಿನವೂ ಕೊನೇಪಕ್ಷ ೧೫ ನಿಮಿಷಗಳ ಅಂಗಸಾಧನೆಯನ್ನು ಮಾಡಿರಿ.

೫. ದಿನವೂ ಒಂದು ಘಂಟೆಯು ಕಾಲ ಬಯಲಿನಲ್ಲಿ ಚಟುವಟಿಕೆಯಿಂದ ವಿಹರಿಸಿರಿ.

೬. ನಿಮ್ಮ ಆಹಾರವನ್ನು ಸರಿಯಾಗಿ ಅಗಿಯುವುದರಿಂದ ನಿಮ್ಮ ಅನ್ನಕೋಶಕ್ಕೆ ಹೆಚ್ಚು ಶ್ರಮ ಕೊಡದಂತೆ ಅದನ್ನು ಕಾಪಾಡಿರಿ. ಅದನ್ನು ಆರೋಗ್ಯದಿಂದ ಪೋಷಿಸಿರಿ. ಬೆಳಿಗ್ಗೆ ನಿದ್ರೆಯಿಂದೆದ್ದೊಡನೆ, ಮತ್ತು ರಾತ್ರಿ ಮಲಗುವುದಕ್ಕೆ ಮೊದಲು ಒಂದೊಂದು ಬಟ್ಟಲು ಬಿಸಿನೀರನ್ನು ಪಾನಮಾಡಿರಿ.

೭. ಆಹಾರವನ್ನು ಭಜಿಸುವುದಕ್ಕೆ ಮೊದಲು ಮೂರು ಸಲ ಪ್ರಾಣಾಯಾಮವನ್ನು (ಶ್ವಾಸ ಸಾಧನೆಯನ್ನು) ಮಾಡಿರಿ.

೮. ನೀವು ಕಾರ್ಯಾತುರದಲ್ಲಿರುವಾಗ ನಿಮ್ಮ ರಕ್ತಚಲನೆಗೆ ವಿಘ್ನವನ್ನುಂಟುಮಾಡುವ ಉಡುಪುಗಳನ್ನು ಧರಿಸಬೇಡಿ.

೯. ನಿಮ್ಮ ಮನಶ್ಶಕ್ತಿಯನ್ನು ನಿಮ್ಮ ಕೈವಶ ಮಾಡಿಕೊಳ್ಳಿರಿ. ನಿಮ್ಮ ದೇಹವು ನಿಮ್ಮ ಮನೋಭಿಪ್ರಾಯವನ್ನನುಸರಿಸಿ ಕೆಲಸ ಮಾಡಲಿ!

೧೦. ಆರೋಗ್ಯವಾದ ಅಂಗಸಾಧನೆ, ಮನೋದಾರ್ಢ್ಯ ಮತ್ತು ಶಾಂತಜೀವನ ಇವೆಲ್ಲವೂ ನಿಮ್ಮನ್ನು ಆರೋಗ್ಯದಲ್ಲಿಯೂ, ಉತ್ಸಾಹದಲ್ಲಿಯೂ ಇಟ್ಟು ಉತ್ತಮ ಸ್ಥಿತಿಗೆ ತರುವುದೆಂದು ನೆನಪಿನಲ್ಲಿಡಿರಿ. ಆರೋಗ್ಯವೇ ಸುಖವು! ಸುಖವೇ ನಿಜವಾದ ಜೀವನವು.

3 ಸಹಾಯಕಗಳು
1936ರ ನಿಮ್ಮ ವಿಜಯಕ್ಕೆ
1936 ನಿಮ್ಮ ಪ್ರಗತಿಯ ವರ್ಷವಾಗಿರಲಿ

1936ರ ಉಳಿದ ಭಾಗದ ವಾರ್ಷಿಕ ವಿವರಗಳು.

ನಿಮ್ಮ ಉದ್ಯೋಗ, ಸಂಪತ್ತು, ಆರೋಗ್ಯ, ಮನೆ, ಪ್ರೇಮ, ಭಾಗ್ಯ ಇವುಗಳ ವರ್ಷದ ಪ್ರತಿಯೊಂದು ಮಾಸದ ಅನುಕೂಲ ಮತ್ತು ಪ್ರತಿಕೂಲವಿರುವ ತಾರೀಕುಗಳು 1936ನೇ ವರ್ಷದ ನಿಶ್ಚಿತ ತಾರೀಕುಗಳೊಡನೆ ವಿವರಿಸಲ್ಪಟ್ಟು, ಮಾಸ ಮತ್ತು ವಾರ ಭವಿಷ್ಯಗಳನ್ನು ಕೊಡುತ್ತದೆ. ನಿಮ್ಮ ಜನನತಾರೀಕನ್ನು ತಿಳಿಸಿರಿ. ಕ್ರಯ: ರೂ. 2 ಮಾತ್ರ.

ಮೂನ್ ಟೇಬಲ್ ಗ್ಯಾಡ್ 1936ಕ್ಕೆ

ಈ ಚಿಕ್ಕ ಪುಸ್ತಕದಲ್ಲಿ 1936ನೇ ವರ್ಷದ ಪ್ರತಿಯೊಂದು ದಿನದ ಚಂದ್ರನ ಸ್ಥಾನವು ಕೊಡಲ್ಪಟ್ಟಿದ್ದು ನಿಮ್ಮ ಜೀವನದ ಮುಖ್ಯ ಘಟನೆಗಳಿಗೆ ಬೇಕಾದ ಶುಭದಿನಗಳನ್ನು ತೋರಿಸುತ್ತದೆ. ಇದರಲ್ಲಿ 1936ರ ಹಿಂದೂಸ್ಥಾನದ ಭವಿಷ್ಯವೂ ಇದೆ. ಬಹಳ ಪ್ರಯೋಜನಕಾರಿ. ಕ್ರಯ ಆ. 4 ಮಾತ್ರ.

ಕಬಾಲಾ ರಕ್ಷೆ 1936ಕ್ಕೆ

ಇದು ತಾಜಾ ಬೆಳ್ಳಿಯಲ್ಲಿ ಗ್ರಹಗಳ ಚಿಹ್ನೆಗಳೊಡನೆ ಮಾಡಲ್ಪಟ್ಟಿದೆ; ಈ ಶುಭ ರಕ್ಷೆಯು ನಿಮ್ಮ ವೈದ್ಯೋಗಿಕ, ಸಾಂಪತ್ತಿಕ ಮತ್ತು ಆರೋಗ್ಯದ ವಿಷಯಗಳಲ್ಲಿ ಅನಿಷ್ಟ ಗ್ರಹಗಳ ಬಾಧೆಯನ್ನು ನಿವಾರಿಸಿ ನಿಮಗೆ ಶುಭವನ್ನುಂಟುಮಾಡುತ್ತದೆ. ಒಂದನ್ನು ಧರಿಸಿ ಮತ್ತು 1936ರಲ್ಲಿ ಭಾಗ್ಯಶಾಲಿಗಳಾಗಿರಿ. ಕ್ರಯ ರೂ. 2—6—0.

ಹೆಚ್ಚಿನ ವಿವರಗಳು ಉಚಿತ.

Please conduct all correspondence in English only. The reading will be sent in English only.

PROFESSOR SEKHAR,
B.A. (Wash) M.I.B.M. (U.S.A.),
THE GREAT MESMERIST,
ELLORE,
(WEST GODAVARI DISTRICT).

ವೈದ್ಯವಿಶಾರದ ಎಚ್. ತಿಮ್ಮಪ್ಪ ಪಂಡಿತ, ಪ್ರೊಪ್ರೈಟರ್.

ಆನಂದ ಚಂದ್ರೋದಯ ಆಯುರ್ವೇದಿಕ್ ಔಷಧಾಲಯ.

ಮಾರ್ಕೆಟ್ ರೋಡ್, ಹಂಪನಕಟ್ಟೆ, ಮಂಗಳೂರು.

ಸಚ್ಚಿದಾನಂದ ಚೂರ್ಣ.

ಎಲ್ಲಾ ತರದ ಪಿತ್ತರೋಗ, ಪಿತ್ತಪಾಂಡು, ಪಿತ್ತಕಾಮಿಲಾ ರೋಗಕ್ಕೆ

(ಪಿತ್ತರೋಗದಿಂದ ಉಂಟಾಗುವ ಜ್ವರ, ಕೈಕಾಲು ಬಚ್ಚುವದು, ಓಡುವಾಗ ಮತ್ತು ಎತ್ತರ ಸ್ಥಳದಲ್ಲಿ ಹತ್ತಿ ನಡೆಯುವಾಗ ಉಂಟಾಗುವ ಅಯಾಸ, ತೋಷ್ಣ ರುಚಿ ಕೆಡುವದು, ವಾಖ್ಲಿಗೆ ಕ್ಷಯ ಆಗುವದು, ಆಹಾರ ಬೇಡವಾಗುವುದು, ಅಜೀರ್ಣ ಉಂಟಾಗುವುದು, ತಲೆ ತಿರುಗುವುದು, ಕಣ್ಣು ಕತ್ತಲೆ ಬರುವದು, ಕವಿಯಲ್ಲಿ ಗುಂ ಎಂತ ಶಬ್ದ ಉಂಟಾಗುವದು, ಮೈ ಪಸೆ ಇಲ್ಲದೆ ಒಣಗಿ ಹೋಗುವದು, ಹೃಟ್ಟೆಯಲ್ಲಿ ಬ್ಲಿಕ್ಕಿ ಎದ್ದೆಗ್ಗುಟ್ಟು ಸುಡುವುದು, ಮಲಬದ್ಧತೆಯಾಗಿ ಮಲವು ಬಹು ಗಟ್ಟಿಯಾಗುವದು, ಹಳ್ಳಗಳಿರುತಿರುವದು, ಉಲ್ಸೆ, ಕೆಲಸವಾಡಲಿಕ್ಕೆ ಮನಸ್ಸಿಲ್ಲದಿರುವದು, ಅಲ್ಲದೆ ಇನ್ನೂ ಈ ರೋಗದಿಂದ ಉಂಟಾಗುವ ಬೇರೆ ವಿಕಾರಗಳಿಂದ ದೇಹಾರೋಗ್ಯದ ವರ್ಗೆಗೆ ನರಳುತ್ತಿರುವವರು ದೇಹಾಂತ್ಯದ ವರೆಗೆ ತಮ್ಮ ದೇಹಾರೋಗ್ಯವನ್ನು ರಕ್ಷಿಸಿಕೊಂಡು, ನಿರೋಗಿಗಳಾಗಿ ಇರಬೇಕೆಂತ ಅಪೇಕ್ಷಿಸುವವರಾದರೆ ಈ ನಮ್ಮ ಸಚ್ಚಿದಾನಂದ ಚೂರ್ಣವನ್ನು ಸೇವಿಸಿರಿ.

ಅತ್ಯುತ್ತಮ ಗುಣಕಾರಿಯಾದ ಈ ಔಷಧವನ್ನು ಅಪೇಕ್ಷಿಸುವವರು ಕ್ರಯಕ್ಕೆ ಬೇಕಾಗುವಷ್ಟು 2 ತೊಲೆ ತರಿಸಿಕೊಂಡು ಸೇವಿಸಿ ಪರೀಕ್ಷಿಸಿರಿ. ಅಪ್ಪರ್ಲಿಟೇ ಗುಣಾಂಶ ಕಂಡುಬಂದರೆ, ನಾವು ಹೇಳುವ ವರೆಗೆ ಸೇವಿಸಿ, ದೇಹಾರೋಗ್ಯವನ್ನು ಪೂರ್ಣ ಪಡೆಯಿರಿ. ಅನುಮಾನ ಕಂಡರೆ, ರೋಗಿಗಳು ಖುದ್ದಾಗಿ ಔಷಧಾಲಯಕ್ಕೆ ಬಂದು 15 ದಿವಸಗಳ ವರೆಗೆ ಸೇವಿಸಿ, ದೇಹಾರೋಗ್ಯವನ್ನು ಪೂರ್ಣ ಪಡೆಯಿರಿ.

1 ತಿಂಗಳ ಔಷಧಿಯನ್ನು ಮುಂಗಡವಾಗಿ ಹಣ ಕೊಡದೆಯೇ ಸೇವಿಸಿ ಗುಣಾವಗುಣ ಪರೀಕ್ಷಿಸಿರಿ.

ಅಪ್ಪರ್ಲಿ ಗುಣಾವಗುಣ ಕಂಡುಬಾರದಿದ್ದರೆ, ಸೇವಿಸಿದ ಔಷಧಿಯ ಕ್ರಯ ಕೊಡುವ ಅಗತ್ಯವಿಲ್ಲ. ಅಸಂತೋಷ ನಾವು ಹೇಳುವ ಸಮಯದ ವರೆಗೆ ಬೇಕಾಗುವ ಮದ್ದಿನ ಕ್ರಯ ಕೊಟ್ಟು ಸೇವಿಸಬೇಕಾಗುವುದು.

ಕ್ರಯ ತೊಲೆ 15 ಬರೇ 12 ಆಣೆ (0—12—0). ಒಂದು ತಿಂಗಳ ಔಷಧಿಗೆ ರೂ. 2—8—0.

OMNIUM-GATHERUM.

We welcome the 'Indian Tea Bulletin No. 1 for June 1936 issued by the Commissioner for India, Indian Tea Cess Committee. The publishers are to be congratulated for the instructive articles and notes, attractive illustrations and the artistic get-up of the Bulletin. For over thirty years, The Indian Tea Cess Committee have been carrying on extensive propaganda in India with the object of increasing the sale of tea within the country. What persistent propaganda can do is evident from the steady progress of Indian consumption during the past few years. With these Bulletins, the publishers, we are sure, will further educate the Indian mind on their own beverage and make them more and more tea conscious. People of Karnataka should take a special interest in this beverage, as their territory is also a tea-growing centre. For the benefit of our English-knowing readers, we reproduce the following article from the Bulletin:—

INDIAN TEA.—THE WORLD'S BEST BEVERAGE.

Tate, the dullest of English Poet Laureates on record, has at least the distinction of having voiced a universal sentiment when he praised tea as 'The Sovereign Drink of Pleasure and of Health'.

Perhaps no greater tribute to tea as being the best liked of all beverages has been paid than by England's most 'hardened and shameless tea drinker', Dr. Johnson, 'who with tea amused the evening, solaced the midnight and welcomed the morning'. Indeed, there is hardly any drink in the world which can refresh the body and the mind the same way as tea does.

The recognition given to tea as the world's best beverage is, therefore, well merited. In all climates and seasons, and at all hours, tea is decidedly the best of all drinks. In the forests of Africa, where the tropical heat is oppressive, and also in the sub-zero Arctic Zone, tea has been found to be the only beverage which assists people in withstanding the regours of extreme temperatures and maintaining bodily vigour and mental stamina.

Good tea properly made is, one of the most delicious drinks in the world—a drink one loves for its own special qualities. As a prepared beverage, tea is what people drink in the largest liquid quantity, and with the exception of water, its consumption today surpasses that of any other liquid in the world,

The greater portion of humanity prefer tea to any other beverage. Throughout the United Kingdom and the British Empire, China, Japan and the U. S. S. R. tea is the National beverage.

941 million pounds with the exception of China, is the five-year average of world consumption of tea that the latest official figures give. Which other beverage is so popular with the inhabitants of the largest bulk of the world's land area?

In India, the land where some of the finest teas are produced, the tea habit has been growing so rapidly within recent years that the world's best beverage is bound also to be soon the best liked by all her people.

An Air Ship Service to the East.

Amsterdam, (By Air Mail.)

It is understood that the Netherland Airship Syndicate are thinking of operating a sixday air-ship service between Holland and the Dutch East Indies across British India for which they have been offered considerable financial support by the Dutch Government. The project has been undertaken as a result of the success that attended the flying trials of the new Zepellin L Z 129.

The fare for the serviee will be less than the existing fares of the K. L. M. which is expected to accelerate its own speed to three days, flying night and day over the whole route.

Large Scale Production of Vitamins.

Moscow (By Air Mail.)

Large scale production vitamins in factories is the latest achievement of the Soviets in the domaine of science.

Last year the vitamin factories in Shchelknovo, Leningrad and Rostov produced in all over three and a half million doses of vitamin C from conifers and rushes. This year, it has been planned to produce 13 million doses of vitamin C from wild roses. The confectionery factories of Moscow and Leningrad will turn out 800 tons of vitaminised sweetmeats.

With the advent of vitamin concentrates scurvy is fast disappearing in Soviet Russia.

ಹಾಸ್ಯಾರ್ಣವ

ಉಪಾಧ್ಯಾಯ:-(ರಾಮಾಯಣದ ಕಥೆಯನ್ನು ಸಾರಾಂಶವಾಗಿ, ವಿಪರಿಸಿ ಇಡೀ ಕ್ಲಾಸನ್ನುದ್ದೇಶಿಸಿ) ಪ್ರಶ್ನೆಗಳಿಗೆ ಸಕಾರಣವಾದ ಉತ್ತರಗಳನ್ನೇ ಕೊಡಬೇಕು, ತಿಳಿಯಿತೇ? ರಾಮಲಕ್ಷ್ಮಣರು ಯಾರು?

ರಂಗ:—ಅವರು ಪೋಲೀಸರು ಸರ್! ಆದುದರಿಂದಲೇ ವಿಶ್ವಾಮಿತ್ರನು ಅವರನ್ನು ತನ್ನ ಯಜ್ಞರಕ್ಷಣೆಗೋಸ್ಕರ ಕರೆದುಕೊಂಡು ಹೋದುದು.

ತುಂಟ ನರ್ಸು:—ಅಲ್ಲ ಸರ್, ಅವರು ಮೆಜಿಕ್ ಮಾಡುವವರು, ಯಾಕಂದರೆ ಅವರು ಕಲ್ಲನ್ನು ಹೆಂಗಸನ್ನಾಗಿ ಮಾಡಿದರು.

ಉಪಾಧ್ಯಾಯ:—ಚೆನ್ನಾಗಿ ಆಲೋಚಿಸಿ ಉತ್ತರವನ್ನು ಕೊಡಬೇಕು.

ಜಗಳಗಂಟಿ ಗೋಪು:-ಅವರು ಸೇನಾಪತಿಗಳು ಸರ್! ಯಾಕಂದರೆ ಅವರು ಗೋರಿಲ್ಲಾ ಸೈನ್ಯವನ್ನು ತೆಗೆದುಕೊಂಡು ಲಂಕೆಗೆ ಹೋದದ್ದು ಸರ್!

× × × × ×

ಮೇಷ್ಟ್ರು:—(ವಿಜ್ಞಾನದ ಪಾಠವನ್ನು ಮಾಡಿ) ಮನುಷ್ಯನಿಗೆ ಅತಿ ಪೌಷ್ಟಿಕವಾದ ಆಹಾರವು ಯಾವುದು? ಎರಡು ಉದಾಹರಣೆಗಳನ್ನು ಕೊಡಿರಿ.

ಹೊಟ್ಟೆಬಾಕನಾದ ಗಣಪ:-ಪರಾನ್ನ ಮತ್ತು ಕದ್ದು ತಿನ್ನುವ ಆಹಾರ ಸರ್!

× × × × ×

ಶ್ಯಾಮು:—ದೂವು! ನೀನು ಇಡೀ ದಿನ ಕ್ಲಾಸಿನಲ್ಲಿ ನಿದ್ದೆಯಲ್ಲಿರುವಿಯಲ್ಲ! ನಿನಗೆ ಪಾಠಗಳು ಮನಸ್ಸಿಗೆ ಹೋಗುತ್ತವೆಯೇ?

ದೂವು:—ಎಚ್ಚರಿಕೆಯಲ್ಲಿದ್ದರೆ, ನಿನ್ನ ಗೌಜಿಯಿಂದ ಪಾಠ ಹತ್ತುವದಿಲ್ಲ ಮನಸ್ಸಿಗೆ; ಆದುದರಿಂದ ನಿದ್ದೆಯಲ್ಲಿರುತ್ತೇನೆ.

× × × × ×

ಉಪಾಧ್ಯಾಯ:-ಕಂದಪದ್ಯವೆಂದರೇನು?

ಕಿಟ್ಟಪ್ಪ:-ಪ್ರತಿ ಪಾದದಲ್ಲಿ 16 ಮಾತ್ರೆಗಳು ಇರುವ ಜೌಪದಿ ಅಥವಾ ಚತುಷ್ಪದಿಯನ್ನು ಕಂದಪದ್ಯವೆಂದು ಹೇಳುತ್ತಾರೆ ಸರ್!

ಉಪಾಧ್ಯಾಯ:—'Very good', ಜೌಪದಿ ಅಥವಾ ಚತುಷ್ಪದಿ ಎಂಬುದರ ಅರ್ಥವೇನು? ಸೂರಪ್ಪ!

ಸೂರಪ್ಪ:—ನಾಲ್ಕು ಪಾದಗಳುಳ್ಳುದೆಂದು ಸರ್!

ಉಪಾಧ್ಯಾಯ:-ಒಳ್ಳೇದು, ಒಂದೆರಡು ಉದಾಹರಣೆಗಳನ್ನು ಕೊಡೋ, ಜಾರಪ್ಪ!

ಜಾರಪ್ಪ:—ಕತ್ತೆ, ಕುದುರೆ, ಕೋಣ ಮತ್ತು ನಾಯಿ ಸರ್!

'ಭಗಿನೀವ್ಯಂದ.'

ಅಪೂರ್ವ ಗ್ರಂಥಗಳು.

ಪುರಂದರ ದಾಸರ ಕೀರ್ತನೆಗಳು 5 ಭಾಗಗಳು ಪೂರ್ತಿ 3—7—0. ಋಗ್ವೇದ ಅಥವಾ ಯಜುರ್ವೇದ ವೈಷ್ಣವ ಆಹ್ನಿಕ ಮಂಜರಿ ಕಿತ್ತಾನಾಲು ಬೈಂಡು 2—8—0. ಪಂಚದಶೀ ತತ್ವಾರ್ಥ (ಚಿದಂಬರಯ್ಯ) 2—0—0. ಭಗವದ್ಗೀತಾ ಸಾರ ವಿಚಾರ (ಚಿದಂಬರಯ್ಯ) 1—8—0. ಶ್ರೀವೇದಾಂತ ಪಂಚದಶೀ 5—0—0. ನವನಾಥ ಭಕ್ತಿಸಾರ 2—8—0.

ಟಪಾಲು ಖರ್ಚು ಪ್ರತ್ಯೇಕ.
ಅಡ್ವಾನ್ಸಿಲ್ಲದ ಆರ್ಡರ್‌ಗಳಿಗೆ ಗಮನ ಕೊಡಲಾಗುವುದಿಲ್ಲ.
ಸಂಪೂರ್ಣ ಕನ್ನಡ ಕೆಟಲಾಗು ಅಪೇಕ್ಷಿಸುವವರಿಗೆ ಮುಫತ್ತಾಗಿ ರವಾನಿಸಲಾಗುವುದು.

ಎಚ್. ಎನ್. ರಾವ್ ಬ್ರದರ್ಸ್,
ಪುಸ್ತಕ ವ್ಯಾಪಾರಿಗಳು,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಗುಣ ಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಸ್. ಕೆ. ರಜಪೂತ ಇವರ **[ಹಣ ಪರತ.**

ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ್)

ಈ ಚೂರ್ಣವು ಕೆಂಪು, ಬಿಳಿ ಶರಗಿಗೆ ಶತ್ರುವಾಗಿರುವದು! ಅಪಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ, ವೈಯಲ್ಲಿ ನೋವು, ಉಷ್ಣತಾ, ಕ್ಷೀಣತಾ, ಗರ್ಭಾಶಯದಲ್ಲಿಯು ದೋಷ, ಗರ್ಭಧಾರಣವಾಗದಿರೋಣ, ಆಕಾಲದಲ್ಲಿ ಗರ್ಭಪತನವಾಗೋಣ, ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವುದು, ಮಕ್ಕಳಾಗುವುದಿಲ್ಲಿಂದು ಎನೇ ಲಗ್ನವಾಗುವ ಮೊದಲು ಗೃಹದೇವತೆಯಾಗುವ ಮೊದಲನ್ನೆ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟು, ಮು। ರಾ। ಎ. ಎಂ. ಇನ್ಸ್‌ಪೆಕ್ಟರ್ ಬೆಳಗಾಂವ-'ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತಗುಚ್ಛದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳೂ ನಿಶ್ಯೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಬಿಳಿ ಶರಗು ಇಲ್ಲದಂತಾದವು.' ೨೧ ದಿವಸದ ಡಬ್ಬಿಯು ಕಿ. ರೂ. ೩. ಟ. ಖ. ಆಣೆ ೮.

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರಿಗೆ ಅಶಕ್ತಿಯಾಗುತ್ತದೆ. ಬಡತನದಲ್ಲಿ ಮಕ್ಕಳಾಗುವದರಿಂದ ದುಃಖವಾಗುತ್ತದೆ, ಆಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಾಧಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೆ ವಿಚಾರ ಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು—ಡಾಕ್ಟರ್ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್., ಕೆಳವನಮಾಹಿಮು, ಠಾಣೇ- ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ, ಗರ್ಭಧಾರಣವಾಗುವುದಿಲ್ಲ. ಪೂರ್ಣ ಗುಣಕಾರಿ. ಡಬ್ಬಿ ಕಿಮ್ಮತು ರೂ. ೪; ವಿ. ಪಿ. ಆಣೆ ೮.

ವಿಳಾಸ:—**ಸಂಜೀವಿನೀ ಔಷಧಾಲಯ, ಮು. ಪೊ. ಮಿರಜಿ, (S. M. C.)**

Jai Vijaya Insurance Company, Limited.

Head Office:—16 LINGHI CHETTY STREET, POST BOX 251, MADRAS.

Jai Vijaya the most scientific and one of the best Companies of the east coast is famous for its strong directorate, efficient management, low and easy monthly payments suitable to poor and middle class people. This ideal life office is the only one which issues policies for Rs. 250 and multiples thereof.

MOST ATTRACTIVE BONUS.

A rebate of Rs. $2\frac{1}{2}$% on yearly payment of premiums. Ask for particulars of Table IX.

WANTED

Wanted immediately Taluk Chief Agents on a monthly salary of Rs. 60. Only men of position and influence need apply.

For particulars write to:—**B. S. RAI,** *Organiser,*
Jai Vijaya Insurance Coy., Ltd., P. O. FARANGIPET, S. Kanara.

THE ASIAN ASSURANCE CO., LTD., BOMBAY.

ಇನ್ಶೂರೆನ್ಸಿಗಾಗಿ ಈ ಸಂಸ್ಥೆಯೊಡನೆ ಆಲೋಚಿಸಿರಿ

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಬೊಂಬಯಿ.

ರಜತಮಹೋತ್ಸವದ ಮೂಲ್ಯಪೇತನದ ಫಲಿತಾಂಶವನ್ನು ಕಾಯುತ್ತಿರಿ.

ವಿಸ್ತಾರಗೊಳಿಸಿದ 'ಇನ್ಶೂರೆನ್ಸ್'

ಇದಕ್ಕೊಂದು ಉದಾಹರಣೆ:— ಒಬ್ಬ ಯುವಕನು, "ಕೋಷ್ಟಕ" III Aಯಂತೆ, ಲಾಭಸಹಿತವಾದ 20 ವರ್ಷಗಳ ಎಂಡೋಮೆಂಟಿಗಾಗಿ, 10,000 ರೂಪಾಯಿಗಳಿಗೆ ವಿಮೆ ಮಾಡುತ್ತಾನೆ ಎನ್ನುವ. ಆತನ ವರ್ಷಾವಧಿ ಪ್ರೀಮಿಯಮಿನ ಮೊತ್ತ ರೂ. 500—15—0. ಈ ಕಂತನ್ನು ಆತನು 5 ವರ್ಷ ಕಟ್ಟುತ್ತಾ ಬರುತ್ತಾನೆ; ಆ ಮೇಲೆ ಅದನಿಂದ ಸಾಧ್ಯವಿಲ್ಲ ವೆಂದಾಗಲು, ಆತನು ವಿಸ್ತಾರಗೊಳಿಸಿದ ಈ ವಿಮಾ ಕ್ರಮದ ಪ್ರಯೋಜನ ಪಡೆಯಲು ಮನವಿ ಮಾಡುತ್ತಾನೆ. ಆಗ ಕಂಪೆನಿ, ಮುಖಮೂಲ್ಯದ ಸಂಪೂರ್ಣ ಮೊತ್ತ ರೂ. 10,000ಗಳಿಗೇ, ಆತನ ಪೋಲಿಸಿಯನ್ನು ಉಳಿದ 15 ವರ್ಷಗಳ ವರೆಗೂ ಊರ್ಜಿತದಲ್ಲಿರಿಸಲು ತಕ್ಕ ಭರವಸೆ ಕೊಡುತ್ತದೆ. ಈ ಅವಧಿಯಲ್ಲಿ ಆತನೆಲ್ಲಿಯಾದರೂ ಮೃತನಾದರೆ, ಈತನು ತೆರದೆ ಇರುವ ಪ್ರೀಮಿಯಮಿನಲ್ಲಿ ಎಷ್ಟನ್ನಾದರೂ ಕಳೆಯದೆ, ಆ 10,000 ರೂಪಾಯಿಗಳನ್ನೂ ಕಂಪೆನಿಯು ಸಲ್ಲಿಸಿಬಿಡುವುದು.

ಜೆ. ಎ. ಪುತ್ರನ್, ಬ್ರಾಂಚ್ ಮ್ಯಾನೇಜರ್,
ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

Obtain 100% Satisfaction!

By using our Famous, Regd. Deer Brand, Flower Vase Brand, Steamer (King George) Brand and Gold Mohar Brand

Roofing Tiles, Ridges, Ventilators, Skylights, Flooring Tiles, Building Bricks, etc.

They are hall marks of perfection—genuine in quality and superb in kind.

That is why we want you to insist on buying them.

Buy only goods bearing our genuine Trade Marks & Names.

Messrs. C. Abdurahiman & Coragappa,
MANGALORE.
Props: HAMEEDIAH TILE WORKS, MANGALORE,
Mang. Props: ISLAMIAH TILE CO., KASARAGODE.

THE BANK OF MANGALORE, LTD.,
- MANGALORE.

ESTD. 1931.

Head Office:-MANGALORE. Branch:-MUDABIDRI.

Fixed Deposits:-4½% for 3 months
„ 5% „ 6 „
„ 6% „ 12 „
„ 6½% „ 24 „ & upwards.

Savings Bank Deposits:—4⅜% on daily balance.
Withdrawals by cheques.
Current A/C 2%—opened free of charge.
We have various schemes for encouraging Thrift such as Cumulative Deposits, Recurring Savings Bank Deposits etc.

SAVE WHILE YOU CAN

Your future demands a fund to draw upon in case of need:—

START NOW AT THIS BANK—

Write for detailed Rules of Business sent free on request.

POHOLATUM — **for Rheuma and Headache & Cold**
LUBA — **for weakness of lungs, coughs etc.**
COUGH-CURE — **for Colds, Coughs**
CURATIVE-EARTH — **for Constipation, Typhoid, Dysenterie**
OLYMPIA-TYPEWRITERS — **for better typing**
ASTRIDA-BLADES — **for quicker shaving**
EUCALYPTUS-BONBONS — **for hoarseness**
BOOKS — **for education**
STATIONERIES — **for home and Office-use**
LAMPS — **for better lights**

ALL THIS YOU HAVE TO GET

FROM

Basel Mission Book Depot (Canarag Ltd.)

MANGALORE, S. K.

MISSION ROAD . HAMPANKATTA

Printed and published by U. Ganesh Shenai, Superintendent at the Saraswathi Printing Works, Ltd., Mangalore. Editor:—B. Vittal Rau.